ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೩೯

**ಪಟ್ಟಿ – ೦೭**

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತ ಮೂರನೇ ಅಧಿವೇಶನ

ಬುಧವಾರ, ದಿನಾಂಕ : ೨೪ನೇ ಜುಲೈ, ೨೦೨೪

---

## ಸಮೂಹ – III

೧. ಸಾರಿಗೆ ಮತ್ತು ಮುಜರಾಯಿ ಸಚಿವರು

೨. ಲೋಕೋಪಯೋಗಿ ಸಚಿವರು

೩. ಕಂದಾಯ ಸಚಿವರು

೪. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

---

## ವಕ್ಫ್ ಆಸ್ತಿಗಳ ಖಾತೆ ಮತ್ತು ಒತ್ತುವರಿ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೫೨ (೯೮೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಾವಣಗೆರೆ ಜಿಲ್ಲೆಯಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಇರುವ ವಕ್ಫ್ ಆಸ್ತಿಗಳ ಸಂಖ್ಯೆ ಎಷ್ಟು ; (ವಿವರವಾಗಿ ಮಾಹಿತಿ ನೀಡುವುದು)

(ಆ) ಸದರಿ ವಕ್ಫ್ ಆಸ್ತಿಗಳಲ್ಲಿ ಈಗಾಗಲೇ ಖಾತೆ ಆಗಿರುವ ಆಸ್ತಿಗಳೆಷ್ಟು ; ಇನ್ನೂ ಖಾತೆ ಆಗದೇ ಉಳಿದಿರುವ ಆಸ್ತಿಗಳೆಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ವಕ್ಫ್ ಆಸ್ತಿಗಳನ್ನು ಖಾತೆ ಮಾಡದೇ ಉಳಿಸಲು ಇರುವ ಕಾರಣಗಳೇನು ; ಯಾವ ಕಾಲಮಿತಿಯೊಳಗೆ ಸದರಿ ಕಾರ್ಯವನ್ನು ಪೂರ್ಣಗೊಳಿಸಲಾಗುವುದು ;

(ಈ) ವಕ್ಫ್ ಆಸ್ತಿಗಳನ್ನು ಒತ್ತುವರಿ ಮಾಡಲಾಗಿದೆಯೇ ; ಹಾಗಿದ್ದಲ್ಲಿ, ಒತ್ತುವರಿ ಪ್ರಮಾಣ ಎಷ್ಟು ; ತೆರವುಗೊಳಿಸಲು ತೆಗೆದುಕೊಂಡ ಕ್ರಮಗಳಾವುವು ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ರಾಜ್ಯದ ಅಲ್ಪಸಂಖ್ಯಾತರಿಗೆ ಒದಗಿಸುತ್ತಿರುವ ಸೌಲಭ್ಯಗಳ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೫೩ (೯೮೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ಸೌಲಭ್ಯವನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರೆಷ್ಟು ; ಜಿಲ್ಲಾವಾರು ಅಂಕಿ–ಅಂಶಗಳ ಮಾಹಿತಿ ಒದಗಿಸುವುದು ಅವರುಗಳಿಗೆ ವೇತನ ನಿಗದಿಪಡಿಸುವ ಮಾನದಂಡಗಳೇನು ;

(ಇ) ಕಳೆದ ಮೂರು ವರ್ಷಗಳಲ್ಲಿ ಹೊರಗುತ್ತಿಗೆ ನೌಕರರ ವೇತನ ಪರಿಷ್ಕರಣೆ ಮಾಡಲಾಗಿದೆಯೇ ; ಮಾಡಿದ್ದಲ್ಲಿ, ಸಂಪೂರ್ಣ ಮಾಹಿತಿ ಒದಗಿಸುವುದು ; ಹೊರಗುತ್ತಿಗೆ ನೌಕರರಿಗೆ ವೇತನ ಹೊರತುಪಡಿಸಿ ಇತರೆ ಯಾವುದಾದರೂ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆಯೇ ;

(ಈ) ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸ್ಥಗಿತಗೊಳಿಸಲಾಗಿರುವ ಯೋಜನೆಗಳು ಯಾವುವು ; ಯಾವ ಕಾರಣಕ್ಕಾಗಿ ಯೋಜನೆಗಳನ್ನು ಸ್ಥಗಿತಗೊಳಿಸಲಾಗಿದೆ ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಉ) ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ವೃತ್ತಿಪರ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆಯೇ ; ಹೌದಾದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಎಷ್ಟು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಲೋಕೋಪಯೋಗಿ ವಸತಿ ಗೃಹಗಳ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೭೫೪ (೮೫೫) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನ ಜೀವನಭೀಮಾನಗರದಲ್ಲಿರುವ ಲೋಕೋಪಯೋಗಿ ಇಲಾಖೆಯ ಸರ್ಕಾರಿ ಅಧಿಕಾರಿ ನೌಕರರುಗಳ ವಸತಿ ಗೃಹಗಳ ಸಂಖ್ಯೆ ಎಷ್ಟು ; ಇವುಗಳ ದುರಸ್ತಿಗೆ ಮೀಸಲಿರುವ ಅನುದಾನವೆಷ್ಟು ;

(ಆ) ಕಳೆದ ಐದು ವರ್ಷಗಳಲ್ಲಿ ನೌಕರರಿಗೆ ಮೀಸಲಿರುವ Type-A ವಸತಿ ಗೃಹಗಳ ಪೇಂಟಿಂಗ್, ಟೈಲ್ಸ್ ದುರಸ್ತಿ ಹಾಗೂ ಇತರ ದುರಸ್ತಿ ಕಾರ್ಯಗಳಿಗೆ ಖರ್ಚು ಮಾಡಿರುವ ಮೊತ್ತವೆಷ್ಟು; (ವರ್ಷವಾರು ಸಂಪೂರ್ಣ ವಿವರ ನೀಡುವುದು)

(ಇ) ಸದರಿ ವಸತಿ ಗೃಹಗಳ ಟೈಲ್ಸ್‌ಗಳು ಹಾಳಾಗಿದ್ದು, ಓವರ್ ಹೆಡ್ ನೀರಿನ ಟ್ಯಾಂಕ್ ಬಿರುಕು ಬಿಟ್ಟಿರುವುದಲ್ಲದೆ, ನೀರಿನ ಪೈಪ್, ವಾಲ್ವ್ ಹಾಗೂ ನಲ್ಲಿಗಳು ಹಾಳಾಗಿದ್ದರೂ ಸರ್ಕಾರವು ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು ; (ವಿವರ ನೀಡುವುದು)

(ಈ) ಸದರಿ ದುರಸ್ತಿ ಕಾರ್ಯಗಳನ್ನು ಸರ್ಕಾರವು ಯಾವ ಕಾಲಮಿತಿಯಲ್ಲಿ ಕೈಗೊಂಡು ಅಲ್ಲಿ ವಾಸಿಸುತ್ತಿರುವ ನೌಕರರುಗಳಿಗೆ ಅನುಕೂಲ ಮಾಡಿಕೊಡಲಿದೆ ? (ವಿವರ ನೀಡುವುದು)

## ನಿರ್ವಸತಿಗರ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :-**

೭೫೫ (೯೯೨) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ನಿರ್ವಸತಿಗರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಕಳೆದ ಎರಡು ಆರ್ಥಿಕ ವರ್ಷಗಳಲ್ಲಿ ವಿವಿಧ ವಸತಿ ಯೋಜನೆಗಳ ಮೂಲಕ ನಿರ್ವಸತಿಗರಿಗೆ ಯಾವ ಯಾವ ಯೋಜನಾ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ ;

(ಇ) ಕಳೆದ ಎರಡು ವರ್ಷಗಳಲ್ಲಿ ಕೇಂದ್ರ ಸರ್ಕಾರದ ವಸತಿ ಯೋಜನೆಗಳ ಮೂಲಕ ರಾಜ್ಯ ಸರ್ಕಾರ ಪಡೆದುಕೊಂಡ ಯೋಜನಾನುದಾನಗಳ ಮೊತ್ತ ಎಷ್ಟು ;

(ಈ) ಪಂಚಾಯತ್ ವ್ಯಾಪ್ತಿಗಳಲ್ಲಿರುವ ಸರ್ಕಾರಿ ಭೂಮಿಯನ್ನು ಒತ್ತುವರಿ ಮತ್ತಿತರ ಅಕ್ರಮಗಳಿಂದ ಸಂರಕ್ಷಿಸಲು ಅಂತಹ ಜಮೀನುಗಳನ್ನು ಗುರುತಿಸಿ ಅವುಗಳನ್ನು ವಸತಿ ಯೋಜನೆಗಳಿಗೆ ಬಳಸಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಜರುಗಿಸುವುದೇ ?

## ಮೀನುಗಾರಿಕೆ ಇಲಾಖೆಯ ಯೋಜನೆಗಳ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :-**

೭೫೬ (೯೯೩) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ 3 ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯಿಂದ ಕೆರೆಗಳಲ್ಲಿ/ಡ್ಯಾಂ/ಕಟ್ಟೆಗಳಲ್ಲಿ ಮೀನು ಸಾಕಾಣಿಕೆಗಾಗಿ ನೀಡಿರುವ ಅನುದಾನವೆಷ್ಟು ; (ವರ್ಷವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಎಷ್ಟು ಕೆರೆಗಳಲ್ಲಿ/ಡ್ಯಾಂ/ಕಟ್ಟೆಗಳಲ್ಲಿ ಮೀನು ಸಾಕಾಣಿಕೆಗಾಗಿ ಟೆಂಡರ್ ಕರೆಯಲಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಮೀನು ಸಾಕಾಣಿಕೆಗಾಗಿ ಸರ್ಕಾರದಿಂದ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಅನುದಾನ ನೀಡಲಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಕಳೆದ ಮೂರು ವರ್ಷಗಳಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯಿಂದ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಕಂದಾಯ ಇಲಾಖೆಯ ಭೂಮಾಪಕರ ಕೊರತೆ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೭೫೭ (೯೪೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ಕಂದಾಯ ಇಲಾಖೆಯ ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆಯಲ್ಲಿ ಭೂಮಾಪಕರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಕೊರತೆಯಿರುವ ಭೂಮಾಪಕರ ನೇಮಕಾತಿಗಾಗಿ ಸರ್ಕಾರ ಈವರೆವಿಗೂ ಕೈಗೊಂಡಿರುವ ಕ್ರಮಗಳೇನು ;

(ಇ) ಯಾವ ಕಾಲಮಿತಿಯಲ್ಲಿ ಕೊರತೆಯಿರುವ ಭೂಮಾಪಕರ ನೇಮಕಾತಿಯನ್ನು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದು ;

(ಈ) ಇಲ್ಲದಿದ್ದಲ್ಲಿ, ಭೂಮಾಪಕರ ಕೊರತೆಯಿಂದಾಗಿ ರೈತರು ಮತ್ತು ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದನ್ನು ತಪ್ಪಿಸಲು ಕೊರತೆಯಿರುವ ಭೂಮಾಪಕರ ನೇಮಕಾತಿ ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು ? (ವಿವರ ನೀಡುವುದು)

## ಸಾಮಾಜಿಕ ಭದ್ರತೆ ಯೋಜನೆ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೭೫೮ (೯೪೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿವಮೊಗ್ಗ ತಾಲ್ಲೂಕಿನಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಕಳೆದ 2 ವರ್ಷಗಳಲ್ಲಿ ಶಿವಮೊಗ್ಗದಲ್ಲಿ ಸಾಮಾಜಿಕ ಭದ್ರತೆ ಯೋಜನೆಯಡಿ ಬಹಳಷ್ಟು ಫಲಾನುಭವಿಗಳಿಗೆ ಪಿಂಚಣಿ ಸ್ಥಗಿತವಾಗಿರುವುದು ಹಾಗೂ ಪಿಂಚಣಿ ಪರಿಹಾರ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಆಧಾರ್ ಜೋಡಣೆ, ಬ್ಯಾಂಕ್ ಅಕೌಂಟ್ ಜೋಡಣೆಯಾಗಿದ್ದರೂ 2-3 ತಿಂಗಳಿಗೊಮ್ಮೆ ಪರಿಹಾರ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಮಾಸಾಶನ ವಿಳಂಬವಾಗುವುದಕ್ಕೆ ಪರಿಹಾರವೇನು ;

(ಈ) ಸಾಮಾಜಿಕ ಭದ್ರತಾ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹ ಫಲಾನುಭವಿಗಳಿದ್ದರೂ ದಾಖಲಾತಿಗಳ ಕೊರತೆಯಿಂದ ಸಾಕಷ್ಟು ಜನರು ವಂಚಿತರಾಗುತ್ತಿದ್ದು, ನಿರ್ಗತಿಕರು/ಅರ್ಹ ಫಲಾನುಭವಿಗಳಿಗೆ ಮಾಸಾಶನ ಒದಗಿಸಿಕೊಡುವ ಬಗ್ಗೆ ಯಾವ ಕಾಲಮಿತಿಯೊಳಗೆ ಪರ್ಯಾಯ ಪರಿಹಾರ ನೀಡಲಾಗುತ್ತದೆ ?

## ರಾಜ್ಯದ ಜಿಲ್ಲೆಗಳಲ್ಲಿ ಬಸ್‌ಗಳ ಸಂಖ್ಯೆ ಇಳಿಮುಖವಾಗಿರುವ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) :-**

೭೫೯ (೯೪೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಬೆಂಗಳೂರು ನಗರ ಸೇರಿದಂತೆ, ಹೊರವಲಯ, ತಾಲ್ಲೂಕು ಗ್ರಾಮ, ಜಿಲ್ಲೆಗಳಲ್ಲಿ ಬಸ್‌ಗಳ ಸಂಖ್ಯೆ ಎಷ್ಟು; ಇಳಿಮುಖವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಪ್ರಯಾಣಿಸಬೇಕಾದ ಬಸ್‌ಗಳ ಸಂಖ್ಯೆ ಇಳಿಮುಖವಾಗಿರುವುದು ವಿದ್ಯಾರ್ಥಿಗಳಿಗೆ, ಕಛೇರಿ ಕೆಲಸಕ್ಕೆ ತೆರಳುವವರಿಗೆ ಹಾಗೂ ತರಕಾರಿ ಮಾರುವವರಿಗೆ

ತೀರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಬೆಂಗಳೂರು ಸೇರಿದಂತೆ, ಪ್ರತಿ ತಾಲ್ಲೂಕುವಾರು, ಜಿಲ್ಲೆವಾರು ಎಷ್ಟು ಬಸ್‌ಗಳು ದಿನನಿತ್ಯ ಸಂಚಾರ ಮಾಡುತ್ತಿವೆ ಮತ್ತು ಯಾವ ಸಮಯಕ್ಕೆ ಬಸ್‌ಗಳು ಲಭ್ಯವಿವೆ ; (ಪೂರ್ಣ ಮಾಹಿತಿ ನೀಡುವುದು)

(ಈ) ದಾವಣಗೆರೆ–ಹರಿಹರ–ಶಿವಮೊಗ್ಗಕ್ಕೆ ಪ್ರತಿನಿತ್ಯ ಸಂಚರಿಸುವ ಸರ್ಕಾರಿ ಬಸ್‌ಗಳೆಷ್ಟು ; ಗ್ರಾಮೀಣ ಸಾರಿಗೆ ಬಸ್‌ಗಳೆಷ್ಟು ;

(ಉ) ಹರಿಹರದಿಂದ ಶಿವಮೊಗ್ಗಕ್ಕೆ ತೆರಳುವ ಕೆಲ ಬಸ್‌ಗಳು ಮಾರ್ಗ ಮಧ್ಯ ಬರುವ ಪ್ರಮುಖ ಕೇಂದ್ರವಾದ ಮಲೆಬೆನ್ನೂರು ನಗರದಲ್ಲಿ ನಿಲ್ಲಿಸದೆ ಹಾಗೇ ತೆರಳುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರದ ಕ್ರಮಗಳೇನು ;

(ಊ) ಈ ಹಿಂದೆ ಹರಿಹರದಿಂದ ಮಲೆಬೆನ್ನೂರಿಗೆ ಹಾಗೂ ಮಲೆಬೆನ್ನೂರಿನಿಂದ ಹರಿಹರಕ್ಕೆ ಗ್ರಾಮೀಣ ಸಾರಿಗೆ ಬಸ್‌ಗಳು ಲಭ್ಯವಿದ್ದು, ಆದರೆ ಇತ್ತೀಚಿನ ವರ್ಷಗಳಲ್ಲಿ ಸದರಿ ಬಸ್‌ಗಳ ಓಡಾಟ ನಿಲ್ಲಿಸಲು ಕಾರಣಗಳೇನು ;

(ಋ) ಶಿವಮೊಗ್ಗ–ಹೊನ್ನಾಳಿ–ಮಲೆಬೆನ್ನೂರು–ಹರಿಹರ ದಾವಣಗೆರೆ ಮಾರ್ಗದಲ್ಲಿರುವ ಗ್ರಾಮಗಳಲ್ಲಿನ ಪ್ರಯಾಣಿಕರಿಗೆ, ವಿಶೇಷವಾಗಿ ಶಿಕ್ಷಕರು, ವಿದ್ಯಾರ್ಥಿಗಳು, ಕೃಷಿಕರಿಗೆ ತೀರ ತೊಂದರೆಯಾಗಿ, ಜನಜಂಗಳಿಯಲ್ಲಿ ಬಸ್‌ನಲ್ಲಿ ತಮ್ಮ ಊರು ಸೇರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ;

(ಎ) ಹರಿಹರ ದಿಂದ ಶಿವಮೊಗ್ಗ ಮಾರ್ಗ ಮಧ್ಯೆ ಅನೇಕರು ದಿನಂಪ್ರತಿ ಓಡಾಡುತ್ತಿದ್ದು, ಸಾರಿಗೆ ಬಸ್‌ಗಳ ಸಂಖ್ಯೆ

ಇಳಿಮುಖವಾಗಿರುವುದರಿಂದ ತಡವಾಗಿ ಕಾಲೇಜು ಕಛೇರಿಗೆ ತಲುಪುವುದು ಹಾಗೂ ಮನೆಗೆ ಸಂಜೆ ತಡವಾಗಿ ಬರುತ್ತಿರುವುದು ಮತ್ತು ಒಂದು ಬಸ್‌ನಲ್ಲಿ ಎರಡು ಮೂರು ಬಸ್‌ಗಾಗುವಷ್ಟು ಜನ ತುಂಬಿ ಪ್ರಯಾಣಿಕರಿಗೆ ವಿಶೇಷವಾಗಿ ವಿದ್ಯಾರ್ಥಿಗಳಿಗೆ ತೀರ ತೊಂದರೆ ಮತ್ತು ಮುಜುಗರ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಮಲೆಬೆನ್ನೂರು–ಹರಿಹರ– ಹರಿಹರ ಮಲೆಬೆನ್ನೂರು ಮಾರ್ಗದಲ್ಲಿ ಸಂಚಾರ ಸೇವೆ ಒದಗಿಸಲು ಗ್ರಾಮೀಣ ಸಾರಿಗೆ ಮತ್ತು ಶಿವಮೊಗ್ಗದಿಂದ ಹರಿಹರ–ದಾವಣಗೆರೆ ಪುನಃ ಇದೇ ವಾಪಾಸ್ ಮಾರ್ಗಕ್ಕೆ ಹೆಚ್ಚುವರಿ ಸರ್ಕಾರಿ ಬಸ್‌ಗಳನ್ನು ಒದಗಿಸುವುದು ಯಾವಾಗ ; ಕಾಲಮಿತಿ ಎಷ್ಟು ?

## ವಸತಿ ಇಲಾಖೆಗೆ ಸಂಬಂಧ ಪಡುವ ನಿವೇಶನಗಳ ಕುರಿತು

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) :–**

೭೬೦ (೯೪೯) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ಹಲವು ಗ್ರಾಮ ಮತ್ತು ಪಟ್ಟಣಗಳಲ್ಲಿ ಖಾಲಿ ಇರುವ ಒಟ್ಟು ನಿವೇಶನಗಳೆಷ್ಟು ;

(ಆ) ಹಲವು ಬಡ ಗ್ರಾಮಗಳಲ್ಲಿ ಪ್ರವಾಹ ಅಥವಾ ಮಳೆ ಸಂಬಂಧ ಮನೆ ಬಿದ್ದುಹೋದ ನಂತರ ಉಳಿಯುವ ಖಾಲಿ ನಿವೇಶನಕ್ಕೆ ಸಂಬಂಧಪಟ್ಟ ಮಾಲೀಕರಿಗೆ ಸರ್ಕಾರದ ಮಟ್ಟದಲ್ಲಿ ಸಿಗುವ ಪರಿಹಾರಗಳೇನು ;

(ಇ) ಈ ರೀತಿಯ ನಿವೇಶಗಳನ್ನು ಗುರುತಿಸಿ, ಇದುವರೆಗೂ ಪರಿಹಾರ ತೆಗೆದುಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು ;

(ಈ) ಈ ರೀತಿ ಪ್ರಕೃತಿ ವಿಕೋಪದಿಂದ ದಾಖಲೆ ಸಮೇತ ಮನೆಗಳು ನಾಶವಾದಲ್ಲಿ, ನಿವೇಶನದ ಮಾಲೀಕರಿಗೆ ಸರ್ಕಾರದ ಮಟ್ಟದಲ್ಲಿ ಯಾವ ರೀತಿ ನ್ಯಾಯ ಒದಗಿಸಿಕೊಡಲಾಗುವುದು ;

(ಉ) ಇದುವರೆವಿಗೂ, ಸದರಿ ನಿವೇಶಗಳಲ್ಲಿ ಮನೆ ಕಟ್ಟಿಸಿಕೊಟ್ಟಿರುವ ಉದಾಹರಣೆಗಳೆಷ್ಟು ಹಾಗೂ ಇನ್ನೂ ಬಾಕಿ ಇರುವ ನಿವೇಶನಗಳೆಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)

## ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಲ್ಲಿ ಪ್ಯಾಕೇಜ್ ಟೆಂಡರ್ ಕರೆದು ಅಕ್ರಮ ಎಸಗುತ್ತಿರುವ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೬೧ (೧೦೦೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿ ಬರೋಬ್ಬರಿ ೪,೦೦೦ ಕೋಟಿ ರೂ ಮೊತ್ತದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಪ್ರಸ್ತುತ ಕರೆದಿರುವ ಪ್ಯಾಕೇಜ್ ಟೆಂಡರ್‌ನಲ್ಲಿನ ಲೋಪಗಳನ್ನು ಅಧಿಕಾರಿಗಳು ಪತ್ತೆ ಮಾಡಿರುವುದು ನಿಜವೇ ; ಟೆಂಡರ್‌ನಲ್ಲಾದ ಲೋಪದೋಷಗಳೇನು ; ಇದಕ್ಕೆ ಯಾರು ಹೊಣೆಗಾರರು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಟೆಂಡರ್‌ನಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ; ಕಾಮಗಾರಿಗಳ ಸಂಖ್ಯೆ ಮತ್ತು ಮೀಸಲಿಟ್ಟ ಹಣವೆಷ್ಟು ; ಟೆಂಡರ್‌ನಲ್ಲಿ ಪಾಲ್ಗೊಂಡು ಸರಿಯಾದ ಮಾಹಿತಿ ನೀಡದ ಅಥವಾ ನಕಲಿ ದಾಖಲೆ ಸಲ್ಲಿಸಿದ ಗುತ್ತಿಗೆದಾರರ ವಿರುದ್ಧ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ; ಅಂತಹ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುತ್ತದೆಯೇ ; ಸದರಿಯವರ

ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲು ಕ್ರಮಕೈಗೊಳ್ಳುವುದೇ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಪರಿಶಿಷ್ಟ ಜಾತಿ ಮತ್ತು ಪಂಗಡದ ಗುತ್ತಿಗೆದಾರರಿಗೆ ಅವಕಾಶ ತಪ್ಪಿಸಲು ಹಾಗೂ ನಿರ್ದಿಷ್ಟ ವ್ಯಕ್ತಿಗಳಿಗೆ ಟೆಂಡರ್ ನೀಡಲು ಪ್ಯಾಕೇಜ್ ಟೆಂಡರ್ ಕರೆದು ಅನುಕೂಲ ಮಾಡಿಕೊಟ್ಟಂತೆ ಆಗುವುದಿಲ್ಲವೇ ; ಸದರಿ ಟೆಂಡರ್ ಅಕ್ರಮದಲ್ಲಿ ಭಾಗಿಯಾದ ಅಧಿಕಾರಿಗಳು ಮತ್ತು ಇತರರ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಲಾಗಿದೆ ; (ಮಾಹಿತಿ ನೀಡುವುದು)

(ಈ) ಉದ್ದೇಶಪೂರ್ವಕವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡ ಸಮುದಾಯದ ಗುತ್ತಿಗೆದಾರರಿಗೆ ಕಾಮಗಾರಿ ಸಿಗಬಾರದೆಂದು ಪೂರ್ವ ನಿರ್ಧರಿಸಿದಂತೆ ಮೂರಕ್ಕೂ ಹೆಚ್ಚು ಕಾಮಗಾರಿಗಳನ್ನು ಒಂದುಗೂಡಿಸಿ ಒಂದೇ ಹಂತದಲ್ಲಿ ಪ್ಯಾಕೇಜ್ ಕಾಮಗಾರಿ ಮಾಡಿ ಟೆಂಡರ್ ಆಹ್ವಾನಿಸಿರುವುದು ಸಾರ್ವಜನಿಕ ಸಂಗ್ರಹಣೆಯಲ್ಲಿ ಕರ್ನಾಟಕ ಪಾರದರ್ಶಕತೆ ಕಾಯ್ದೆ ೧೯೯೯ಇವು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ನೀಡಿರುವ ಮೀಸಲಾತಿಯ ವಿರುದ್ಧವಾದಂತಾಗುವುದಿಲ್ಲವೇ ? (ಸಂಪೂರ್ಣ ಮಾಹಿತಿ ನೀಡುವುದು)

**ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಭವಿಸುತ್ತಿರುವ ಅಪಘಾತಗಳ ಕುರಿತು**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೬೨ (೧೦೦೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸ್ತುತ ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ಸಂಖ್ಯೆ ಎಷ್ಟು ; ಅವುಗಳ ಉದ್ದವೆಷ್ಟು; ಅವುಗಳ ನಿರ್ವಹಣೆ ಮಾಡುವವರು

ಯಾರು ; ಸದರಿ ಹೆದ್ದಾರಿಗಳಲ್ಲಿ ಕಳೆದ ೩ ವರ್ಷದಿಂದ ಸಂಭವಿಸಿದ ಅಪಘಾತಗಳ ಸಂಖ್ಯೆ ಎಷ್ಟು; ಎಷ್ಟು ಸಾವು ನೋವುಗಳು ಸಂಭವಿಸಿರುತ್ತವೆ ; ಯಾವ ವಿಧದ ಅಪಘಾತಗಳು ಪದೇ ಪದೇ ಸಂಭವಿಸುತ್ತಿರುತ್ತವೆ ; (ಸಂಪೂರ್ಣ ವಿವರಗಳನ್ನು ನೀಡುವುದು)

(ಆ) NHAI ಪೆಟ್ರೋಲಿಂಗ್ ಇದ್ದರೂ ಸಹ ವ್ಯವಸ್ಥಿತವಾಗಿರದೇ ಹೆದ್ದಾರಿಯ ಮುಖ್ಯರಸ್ತೆಯ ಬಲ ಮತ್ತು ಎಡ ಬದಿಗಳಲ್ಲೇ ವಾಹನ ನಿಲುಗಡೆ ಮಾಡುವುದು ಕಂಡು ಬರುತ್ತಿದ್ದು, ಇದರಿಂದಾಗಿ ಹಾಗೂ ಮುಖ್ಯರಸ್ತೆಯ ಮೇಲೆ ಚಲನವಲನಗಳ ಮೇಲೆ ನಿಗಾ ಇಲ್ಲದೇ ಇರುವುದರಿಂದ ಯಾವ ಲೈನ್‌ನಲ್ಲಿ ಯಾವ ವಾಹನ ತರಬೇಕು ಎನ್ನುವುದು ಸಮರ್ಪಕವಾಗಿ ನಡೆಯುತ್ತಿಲ್ಲ ಇಂತಹ ಸಮಸ್ಯೆಗಳಿಂದ ಅಪಘಾತಗಳು ಸಂಭವಿಸಿ ಸಾವು ನೋವುಗಳ ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಅವಶ್ಯಕತೆಗಳಿಗನುಗುಣವಾಗಿ ಹೆದ್ದಾರಿಯ ಅಕ್ಕಪಕ್ಕದಲ್ಲಿ LAY-BAY ಇದ್ದು ಅಲ್ಲಿ ತಾತ್ಕಾಲಿಕವಾಗಿ ವಾಹನ ನಿಲುಗಡೆಗೆ ಅನುಮತಿ ಇರುತ್ತದೆ ; ಆದರೆ ಆ ಸ್ಥಳದಲ್ಲೇ ರಾತ್ರಿಯಿಡಿ ವಾಹನ ನಿಲುಗಡೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದರ ನಿರ್ವಹಣೆ ಮತ್ತು ಮೇಲ್ವಿಚಾರಣೆ ಹಾಗೂ ಅಸಮರ್ಪಕ ಬಳಕೆಯಿಂದ ಅಪಘಾತಗಳು ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ;

(ಈ) ಸದರಿ ಅಪಘಾತಗಳಿಂದ ತಮ್ಮದಲ್ಲದ ತಪ್ಪಿಗೆ ಪ್ರಾಣತ್ಯಾಗ ಮಾಡುತ್ತಿರುವ ಜೀವಗಳಿಗೆ ಬೆಲೆಯಿಲ್ಲದಂತಾಗುವುದಿಲ್ಲವೇ ;

ರಸ್ತೆಯಲ್ಲಿ ನಿಲ್ಲಿಸಿದ ವಾಹನಕ್ಕೆ ಡಿಕ್ಕಿಯಿಂದಾಗಿ ಅಪಘಾತ ಸಂಭವಿಸಿ ಸಾವು-ನೋವುಗಳ ಬಗ್ಗೆ ದಿನಂಪ್ರತಿಯಾಗಿ ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ರಸ್ತೆಯಲ್ಲಿ ಮತ್ತು ರಸ್ತೆ ಬದಿ ವಾಹನಗಳನ್ನು ನಿಲ್ಲಿಸುವುದನ್ನು ತಡೆಯಲು ಏನೇನು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಲಿಂಗಸುಗೂರು ತಾಲ್ಲೂಕಿನ ರೈತರ ಬೆಳೆ ನಷ್ಟದ ವರದಿಯ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೬೩ (೧೦೦೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಸರ್ಕಾರವು ೨೦೨೩-೨೪ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕನ್ನು ಬರಪೀಡಿತವೆಂದು ಘೋಷಿಸಿದೆಯೇ ; ಈ ಪ್ರದೇಶದಲ್ಲಾದ ಬೆಳೆ ನಷ್ಟವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ತಾಲ್ಲೂಕಿನಲ್ಲಿ ಬೆಳೆ ನಷ್ಟ ಪರಿಹಾರವನ್ನು ಎಷ್ಟು ಜನ ರೈತರಿಗೆ ಪಾವತಿ ಮಾಡಲಾಗಿದೆ ಪಾವತಿಸಿದ ಮೊತ್ತವೆಷ್ಟು ; ಎಷ್ಟು ಜನ ರೈತರು ಬೆಳೆ ನಷ್ಟ ಪರಿಹಾರ ಪಾವತಿಯಿಂದ ಹೊರಗುಳಿದಿದ್ದಾರೆ ; ಹೊರಗುಳಿಯಲು ಕಾರಣಗಳೇನು ; ಪರಿಹಾರಕ್ಕೆ ಎಷ್ಟು ಜನ ಅರ್ಹರಿರುವುದಿಲ್ಲ ; ಅದಕ್ಕೆ ಕಾರಣಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಸದರಿ ತಾಲ್ಲೂಕಿನ ರೈತರು ಬರದಿಂದ ತಮ್ಮ ಹಿಂಗಾರು ಮತ್ತು ಮುಂಗಾರು ಹಂಗಾಮಿನ ಬೆಳೆಗಳನ್ನು ಕಳೆದುಕೊಂಡರೂ ಕೂಡಾ

ಬೆಳೆ ನಷ್ಟವು ಆಗಿರುವುದಿಲ್ಲ ಎಂದು ವರದಿಯನ್ನು ನೀಡಿ ಬೆಳೆ ವಿಮೆಯನ್ನು ಪಡೆಯಲು ಅನರ್ಹರನ್ನಾಗಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಯಾವ ಕಾರಣಕ್ಕಾಗಿ ಬೆಳೆ ನಷ್ಟವಾಗಿರುವುದಿಲ್ಲ ಎಂದು ವರದಿಯನ್ನು ನೀಡಲಾಗಿದೆ ; ಬೆಳೆ ನಷ್ಟ ಅನುಭವಿಸಿದ ರೈತರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ ;

(ಈ) ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಈ ತಾಲ್ಲೂಕಿನಲ್ಲಿ ಬೆಳೆವಿಮೆ ಮಾಡಿಸಿದ ರೈತರ ಸಂಖ್ಯೆ ಎಷ್ಟು ; ರೈತರ ಬೆಳೆ ನಷ್ಟಕ್ಕನುಗುಣವಾಗಿ ಎಷ್ಟು ಮೊತ್ತದ ಬೆಳೆವಿಮೆ ಹಣವನ್ನು ರೈತರಿಗೆ ಪಾವತಿಸಲಾಗಿದೆ ; ಬೆಳೆ ನಷ್ಟ ಅನುಭವಿಸಿ ಸರ್ಕಾರದಿಂದ ಬೆಳೆ ನಷ್ಟ ಪರಿಹಾರ ಪಡೆದರೂ ಕೂಡಾ ತಾಲ್ಲೂಕು ಆಡಳಿತ ನೀಡಿರುವ ಬೆಳೆ ನಷ್ಟವಾಗಿಲ್ಲವೆಂಬ ವರದಿಯಿಂದ ಬೆಳೆ ವಿಮೆಯನ್ನು ಪಡೆಯಲು ಅನರ್ಹರಾಗುವಂತೆ ಮಾಡಿರುವವರ ವಿರುದ್ಧ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ ಸರ್ಕಾರವು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳುವುದೇ ? (ಸಂಪೂರ್ಣ ಮಾಹಿತಿ ನೀಡುವುದು)

## ಗ್ರಾಮೀಣ ವಸತಿ ಯೋಜನೆಯ ಅನುದಾನ ಬಿಡುಗಡೆ/ಅನುಷ್ಠಾನದ ಕುರಿತು

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :-**

೭೬೪ (೮೫೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿಗೆ ಗ್ರಾಮೀಣ ವಸತಿ ಯೋಜನೆಯಲ್ಲಿ ೨೦೨೦-೨೦೨೪ನೇ ಸಾಲಿನವರೆಗೆ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು ಮತ್ತು ಬಿಡುಗಡೆಯಾದ ಅನುದಾನವೆಷ್ಟು ; (ಗ್ರಾಮ ಪಂಚಾಯತಿವಾರು ಮತ್ತು ವರ್ಷವಾರು ವಿವರ ನೀಡುವುದು)

(ಆ) ಮನೆ ಪೂರ್ಣಗೊಂಡು ಅನುದಾನ ಬಿಡುಗಡೆಗೆ ಬಾಕಿಯಿರುವ ಮನೆಗಳ ಸಂಖ್ಯೆ ಎಷ್ಟು ; ಬಿಡುಗಡೆಯಾಗಬೇಕಾದ ಮೊತ್ತವೆಷ್ಟು ; (ಗ್ರಾಮ ಪಂಚಾಯತಿವಾರು ವಿವರ ನೀಡುವುದು)

(ಇ) ಸದರಿ ಗ್ರಾಮೀಣ ವಸತಿ ಯೋಜನೆಯನ್ನು ಅನುಷ್ಠಾನ ಮಾಡುವ ಅಧಿಕಾರಿಗಳು ಯಾರು ;

(ಈ) ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಗ್ರಾಮೀಣ ವಸತಿ ಯೋಜನೆಯ ಮೇಲ್ವಿಚಾರಣೆ ಮಾಡುವ ಅಧಿಕಾರಿಗಳು ಯಾರು ;

(ಉ) ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಹೊರಗುತ್ತಿಗೆ ನೌಕರರಿಂದ ಮೇಲ್ವಿಚಾರಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸರ್ಕಾರಿ ನೌಕರರನ್ನು ಗ್ರಾಮೀಣ ವಸತಿ ಯೋಜನೆಯ ಮೇಲ್ವಿಚಾರಕರನ್ನಾಗಿ ನೇಮಕ ಮಾಡಲು ಉದ್ದೇಶಿಸಿದೆಯೇ ; ಉದ್ದೇಶಿಸಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ನೇಮಕ ಮಾಡಲಾಗುವುದು ;

(ಊ) ಸದರಿ ಯೋಜನೆಯ ಅನುಷ್ಠಾನದಲ್ಲಿ ಪಾರದರ್ಶಕತೆ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಕಂದಾಯ ಇಲಾಖೆಯ ಭೂ ಸುರಕ್ಷಾ ಯೋಜನೆಯ ಕುರಿತು

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :-**

೭೬೫ (೮೫೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಂದಾಯ ಇಲಾಖೆಯ ಭೂ ಸುರಕ್ಷಾ ಯೋಜನೆಯಡಿಯಲ್ಲಿ ರಾಜ್ಯದ ಎಷ್ಟು ತಾಲ್ಲೂಕುಗಳ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಲಾಗಿದೆ ; ಸದರಿ ತಾಲ್ಲೂಕುಗಳು ಯಾವುವು ;

(ಆ) ತುಮಕೂರು ಜಿಲ್ಲೆಯ ಎಷ್ಟು ತಾಲ್ಲೂಕುಗಳ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಲಾಗಿದೆ ; ಉಳಿದ ತಾಲ್ಲೂಕುಗಳ ದಾಖಲೆಗಳನ್ನು ಯಾವ ಕಾಲಮಿತಿಯಲ್ಲಿ ಸ್ಕ್ಯಾನಿಂಗ್ ಮಾಡಲಾಗುವುದು ;

(ಇ) ಸ್ಕ್ಯಾನಿಂಗ್ ಮಾಡಿ ಅಪ್‌ಲೋಡ್ ಮಾಡಲಾದ ದಾಖಲೆಗಳನ್ನು ಸಾರ್ವಜನಿಕರು ಯಾವ ಕಾಲಮಿತಿಯಲ್ಲಿ ಪಡೆಯಬಹುದು ;

(ಈ) ಆನ್‌ಲೈನ್‌ನಲ್ಲಿ ಪಡೆದ ಸದರಿ ದಾಖಲೆಗಳನ್ನು ಅಧಿಕೃತ ದಾಖಲೆಗಳ ರೀತಿಯಲ್ಲಿ ಅಭಿಲೇಖಾಯದಲ್ಲಿ ಪಡೆದ ದೃಢೀಕೃತ ದಾಖಲೆಗಳ ರೀತಿಯಲ್ಲಿ ಉಪಯೋಗಿಸಬಹುದೇ ;

(ಉ) ಈ ಸ್ಕ್ಯಾನಿಂಗ್ ಮಾಡಲಾದ ದಾಖಲೆಗಳನ್ನು ಪಡೆಯಲು ಪಾವತಿಸಬೇಕಾದ ಶುಲ್ಕದ ದರ ನಿಗದಿಪಡಿಸಲಾಗಿದೆಯೇ ; ನಿಗದಿಪಡಿಸಲಾಗಿದ್ದಲ್ಲಿ, ಎಷ್ಟು ಶುಲ್ಕವನ್ನು ನಿಗದಿಪಡಿಸಲಾಗಿದೆ ?

## ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆಯಲ್ಲಿ ಮಾಡುತ್ತಿರುವ ಸುಲಿಗೆಯ ಕುರಿತು

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :-**

೭೬೬ (೮೬೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆ ಒದಗಿಸುತ್ತಿರುವ ಕಂಪನಿಗಳ ಸಂಖ್ಯೆ ಎಷ್ಟು ; ಮತ್ತು ಅವು ಯಾವುವು ;

(ಆ) ಸರ್ಕಾರವು 'ಒನ್ ಸಿಟಿ ಒನ್ ರೇಟ್' ಕಲ್ಪನೆಯಡಿಯಲ್ಲಿ ದರ ನಿಗದಿ ಮಾಡಿದೆಯೇ ; ಮಾಡಿದ್ದಲ್ಲಿ, ಯಾವ ದಿನಾಂಕದಿಂದ ಮಾಡಲಾಗಿದೆ ;

(ಇ) ಸರ್ಕಾರವು ದರ ನಿಗದಿ ಮಾಡಿದ್ದರೂ ಸಹ ಅಗ್ರಿಗೇಟರ್ ಕಂಪನಿಗಳು 'ಬೇಡಿಕೆ ದರ' ಹೆಸರಿನಲ್ಲಿ ಬುಕ್ಕಿಂಗ್ ಹೆಚ್ಚು ಇರುವಾಗ, ಮಳೆ ಬರುತ್ತಿರುವ ಸಮಯದಲ್ಲಿ ಪ್ರಯಾಣಿಕರಿಂದ ಹೆಚ್ಚಿನ ದರ ಸುಲಿಗೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇವರ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು ;

(ಈ) ಟೋಲ್ ಶುಲ್ಕವನ್ನು ಪಾವತಿಸಬೇಕಾದವರು ಯಾರು ;

(ಉ) ಪ್ರಯಾಣಿಕರಿಂದ ವಸೂಲಿ ಮಾಡಿದ ಹೆಚ್ಚಿನ ದರವನ್ನು ಯಾರಿಗೆ ನೀಡಲಾಗುತ್ತದೆ ; ಅಥವಾ ಯಾವ ಉದ್ದೇಶಕ್ಕೆ ಅಗ್ರಿಗೇಟರ್ ಕಂಪನಿಗಳು ಬಳಸುತ್ತವೆ ;

(ಊ) ಪ್ರಯಾಣಿಕರಿಂದ ಬೇಡಿಕೆ ಆಧಾರದ ಮೇಲೆ, ಸಮಯದ ಆಧಾರದ ಮೇಲೆ ಅಥವಾ ತಲುಪಬೇಕಾದ ಸ್ಥಳದ ಆಧಾರದ ಮೇಲೆ ದರ ಪಡೆಯುತ್ತಿದ್ದಲ್ಲಿ ಅಂತಹ ಅಗ್ರಿಗೇಟರ್ ಕಂಪನಿಗಳ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು ?

## ಬಗರ್ ಹುಕುಂ ಸಾಗುವಳಿ ಕುರಿತು

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :-**

೭೬೭ (೮೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ೧೯೭೯-೮೦ರಲ್ಲಿ ವರ್ಗಾವಹಿಸಿದ್ದ ಕಳ್ಳಂಬೆಳ್ಳ ಹೋಬಳಿಯ ಹುಂಜನಾಳೂ. ಸಿಬಿ ಹಾಗೂ ಬೋರಂದ್ರ ಸರ್ವೆ ನಂಬರುಗಳನ್ನು ಕಂದಾಯ ಇಲಾಖೆಗೆ ವಾಪಸ್ ಪಡೆಯಲು ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ (ಸಿವಿಲ್) ಸಂಖ್ಯೆ ೨೦೨/ ೯೫ ರಲ್ಲಿ ಕರ್ನಾಟಕ ಸರ್ಕಾರ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಸೇರಿಸಲಾಗಿದೆಯೇ ;

(ಆ) ಕಳ್ಳಂಬೆಳ್ಳ ಹೋಬಳಿಯ ಹುಂಜನಾಳು. ಸರ್ವೆ ನಂಬರು ೧೬೧, ೨೦೩ರಲ್ಲಿ ಬಗರ್ ಹುಕುಂ ಸಾಗುವಳಿ ಅಕ್ರಮ ಸಕ್ರಮಕ್ಕೆ ಯಾರು ಅರ್ಜಿ ಸಲ್ಲಿಸಿರುತ್ತಾರೆ ; (ಹೆಸರು, ವಿಳಾಸ. ಅರ್ಜಿ ಕ್ರಮ ಸಂಖ್ಯೆ ಹಾಗೂ ದಿನಾಂಕದೊಂದಿಗೆ ಮಾಹಿತಿ ನೀಡುವುದು)

(ಇ) ಕಳಂಬೆಳ್ಳ ಹೋಬಳಿಯ. ಸಿಬಿ ಸರ್ವೆ ನಂ. ೧೯೦ ಹಾಗೂ ಹುಂಜನಾಳು ಸರ್ವೆ ನಂಬರುಗಳಲ್ಲಿ ಕಂದಾಯ ಇಲಾಖೆಯ ಪ್ರಸ್ತುತ ವಶದಲ್ಲಿರುವ ಜಮೀನೆಷ್ಟು? (ಎಕರೆವಾರು ಪಟ್ಟಿ ನೀಡುವುದು)

## ಬಿ.ಎಂ.ಟಿ.ಸಿ. ಸಂಸ್ಥೆಗೆ ಸರ್ಕಾರ ಉಳಿಸಿಕೊಂಡಿರುವ ಬಾಕಿ ಹಣದ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೭೬೮ (೯೧೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಶಕ್ತಿ ಯೋಜನೆ ಪ್ರಾರಂಭವಾದ ದಿನದಿಂದ ಇದುವರೆಗೂ ನಾಲ್ಕೂ ಸಾರಿಗೆ ಸಂಸ್ಥೆಗಳಿಂದ ಎಷ್ಟು ಮಹಿಳಾ ಪ್ರಯಾಣಿಕರು ಪ್ರಯಾಣ ಮಾಡಿರುತ್ತಾರೆ ;

(ಆ) ಮಹಿಳೆಯರ ಟಿಕೆಟ್ ಮೊತ್ತವನ್ನು ರಾಜ್ಯ ಸರ್ಕಾರವು ಬಿ.ಎಂ.ಟಿ.ಸಿ.ಗೆ ಪೂರ್ಣ ಪ್ರಮಾಣದಲ್ಲಿ ಪಾವತಿಸದೆ ಕೋಟ್ಯಾಂತರ ರೂ. ಬಾಕಿ ಉಳಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಎಷ್ಟು ಬಾಕಿ ಉಳಿಸಿಕೊಂಡಿದೆ ಹಾಗೂ ಬಾಕಿ ಉಳಿಸಿಕೊಳ್ಳಲು ಇರುವ ಕಾರಣಗಳೇನು ;

(ಈ) ಸರ್ಕಾರವು ಈವರೆಗೆ ಬಾಕಿ ಮರುಪಾವತಿಸದಿರುವುದರಿಂದ ಸಂಸ್ಥೆಯು ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

**ಟೆಂಡರ್ ಪ್ರಕ್ರಿಯೆ ಮುಗಿದರೂ ಸಹ ಇದುವರೆಗೂ ಕಾಮಗಾರಿಗಳನ್ನು ಪ್ರಾರಂಭಿಸಲು ಅನುಮತಿ ನೀಡದಿರುವ ಬಗ್ಗೆ**

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೭೬೯ (೯೧೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೩ ವರ್ಷದಿಂದ ರಾಜ್ಯದಲ್ಲಿರುವ ರಸ್ತೆ, ಸೇತುವೆ ಹಾಗೂ ಕಟ್ಟಡಗಳ ನಿರ್ಮಾಣಕ್ಕೆ ಎಷ್ಟು ಅನುದಾನ ಬಿಡುಗಡೆಯಾಗಿದೆ ; ಹಾಗಿದ್ದಲ್ಲಿ, ಎಷ್ಟು ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ನಡೆದಿದೆ ಹಾಗೂ ಎಷ್ಟು ಟೆಂಡರ್‌ಗೆ ಅನುಮತಿ ನೀಡಲಾಗಿದೆ ;

(ಆ) ರಾಜ್ಯದ ಹಲವಾರು ಕಡೆಗಳಲ್ಲಿ ಟೆಂಡರ್ ಪ್ರಕ್ರಿಯೆಗಳು ಮುಗಿದಿದ್ದರೂ ಸಹ ಇದುವರೆಗೂ ಕಾಮಗಾರಿಗಳನ್ನು ಪ್ರಾರಂಭಿಸಲು ಅನುಮತಿ ನೀಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಅನುಮತಿ ನೀಡಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ;

(ಈ) ಹಲವಾರು ಕಡೆಗಳಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ಹಣ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಉ) ಬಾಕಿ ಹಣವನ್ನು ನೀಡಲು ವಿಳಂಬ ಮಾಡುತ್ತಿರಲು ಕಾರಣವೇನು ;

(ಊ) Valid Tender ಗಳನ್ನು ಸಕ್ರಮಗೊಳಿಸಲು ಅತಿ ಹೆಚ್ಚು ಹಣ ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ರೇಷ್ಮೆ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೭೭೦ (೯೧೮) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ರೇಷ್ಮೆ ಇಲಾಖೆಯು ಸಿಬ್ಬಂದಿ ಕೊರತೆಯಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಕಳೆದ ೫ ವರ್ಷದ ಅವಧಿಯಲ್ಲಿ ಸರ್ಕಾರದಿಂದ ಎಷ್ಟು ಹುದ್ದೆಗಳನ್ನು ಮಂಜೂರು ಮಾಡಲಾಗಿದೆ ; ಮಂಜೂರು ಮಾಡಲಾಗಿರುವ ಅಷ್ಟು ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆಯೇ ಅಥವಾ ಬಾಕಿ ಇದೆಯೇ ;

(ಆ) ಈ ಇಲಾಖೆಗೆ ೪೨೯೯ ಹುದ್ದೆಗಳು ಮಂಜೂರಾಗಿದ್ದು ಇದರಲ್ಲಿ ಕೇವಲ ೧೫೦೦ ಹುದ್ದೆಗಳು ಮಾತ್ರ ಭರ್ತಿ ಮಾಡಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸಿಬ್ಬಂದಿ ಕೊರತೆಯಿಂದ ಇಲಾಖೆ ಅಧಿಕಾರಿಗಳು ಬೆಳೆಗಾರರ ರೇಷ್ಮೆ ಮನೆ, ಹಿಪ್ಪು ನೇರಳೆ ತೋಟಗಳಿಗೆ ಭೇಟಿ ನೀಡಿ ಬೆಳೆಗಾರರಿಗೆ ಸಲಹೆ ನೀಡಬೇಕಾಗಿದ್ದು, ಕೆಲ ಜಿಲ್ಲೆಗಳಲ್ಲಿ ಶೇಕಡ ೫೦ಕ್ಕೂ ಹೆಚ್ಚು ಸಿಬ್ಬಂದಿ ಕೊರತೆ ಇರುವುದರಿಂದ ಒಬ್ಬರಿಗೆ ಹಲವಾರು ಜವಾಬ್ದಾರಿ ನಿರ್ವಹಿಸುವ ಹೊಣೆಗಾರಿಕೆ ನೀಡಲಾಗುತ್ತಿರುವುದು ನಿಜವೇ ;

(ಈ) ಈಗಾಗಲೇ ರಾಜ್ಯದಲ್ಲಿ ೧.೧೦.೭೪೦ ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪು ನೇರಳೆ ಬೆಳೆಯುವ ಸುಮಾರು ೧.೪೬ ಲಕ್ಷ ರೇಷ್ಮೆ ಬೆಳೆಗಾರರ ಕುಟುಂಬಗಳು ರೇಷ್ಮೆ ಸಾಕಾಣಿಕೆ ಮಾಡುತ್ತಿದ್ದು, ಸಿಬ್ಬಂದಿಗಳ ಕೊರತೆ ಇರುವುದರಿಂದ ಇದರ ಪರಿಣಾಮ ರೇಷ್ಮೆ ಬೆಳೆಗಾರರ ಮೇಲೆ ಬೀರುವುದಿಲ್ಲವೇ ?

## ಗುತ್ತಿಗೆದಾರರಿಗೆ ಬಾಕಿ ಹಣ ಪಾವತಿ ಮಾಡಲು ಇರುವ ನೀತಿ ನಿಯಮದ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೭೭೧ (೯೨೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಮೂರು ವರ್ಷದಿಂದ ಇಲ್ಲಿಯವರೆಗೂ ಗುತ್ತಿಗೆದಾರರಿಗೆ ನೀಡಬೇಕಾಗಿರುವ ಬಾಕಿ ಹಣವೆಷ್ಟು; ಹಾಗೂ ಎಷ್ಟು ಹಣಕ್ಕಾಗಿ ಬಿಲ್‌ಗಳನ್ನು ನೀಡಿದ್ದಾರೆ ;

(ಆ) ಗುತ್ತಿಗೆದಾರರಿಗೆ ಬಾಕಿ ಹಣ ಪಾವತಿ ಮಾಡುವ ಸಂದರ್ಭದಲ್ಲಿ ಸರ್ಕಾರ ಅನುಸರಿಸುತ್ತಿರುವ ಮಾನದಂಡವೇನು ;

(ಇ) ಗುತ್ತಿಗೆದಾರರಿಗೆ ವಹಿಸಿದ ಕಾಮಗಾರಿಯು ಪೂರ್ಣಗೊಂಡಾಗ ವಿಳಂಬಮಾಡದೇ, ಅವರಿಗೆ ನೀಡಬೇಕಾಗಿರುವ ಹಣವನ್ನು ನೀಡಬೇಕಾಗಿರುವುದು ಸರ್ಕಾರದ ಜವಾಬ್ದಾರಿ ಅಲ್ಲವೇ ;

(ಈ) ಹಾಗಿದ್ದಲ್ಲಿ, ಬಿಲ್‌ಗಳನ್ನು ಪಾಸ್ ಮಾಡಿ ಸರಿಯಾದ ಸಮಯಕ್ಕೆ ಗುತ್ತಿಗೆದಾರರಿಗೆ ಹಣ ಪಾವತಿಸದಿರಲು ಕಾರಣಗಳೇನು ?

## ಸಾರಿಗೆ ಬಸ್ ಹಾಗೂ ಶಕ್ತಿ ಯೋಜನೆ ಕುರಿತು

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೭೨ (೯೮೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಾರಿಗೆ ಇಲಾಖೆಯಲ್ಲಿ ಎಲೆಕ್ಟ್ರಾನಿಕ್ ಬಸ್‌ಗಳ ಬಳಕೆಯನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಶಕ್ತಿ ಯೋಜನೆಯು ಜಾರಿಗೆ ಬಂದಾಗಿನಿಂದ ಇದುವರೆಗೂ ಎಷ್ಟು ಬಸ್ಸುಗಳನ್ನು ಖರೀದಿಸಲಾಗಿದೆ ; ಮತ್ತು ಸರ್ಕಾರದ ಬೊಕ್ಕಸಕ್ಕೆ ಉಂಟಾಗಿರುವ ನಷ್ಟ ಎಷ್ಟು ; (ವಿವರ ನೀಡುವುದು)

(ಇ) ಯಾವ ಯಾವ ಕಂಪನಿಗಳಿಂದ ಎಷ್ಟು ಮೊತ್ತಕ್ಕೆ ಬಸ್ಸುಗಳನ್ನು ಖರೀದಿಸಲಾಗಿದೆ ;

(ಈ) ಇಲಾಖೆಗಳಲ್ಲಿ ಹಳೆಬಸ್ಸುಗಳನ್ನು ಯಾವ ರೀತಿ ವಿಲೇವಾರಿ ಮಾಡಲಾಗುತ್ತಿದೆ ;

(ಉ) ಶಕ್ತಿ ಯೋಜನೆಯಿಂದ ಪ್ರತಿ ನಿತ್ಯ ಪ್ರಯಾಣಿಸುತ್ತಿರುವ ಮಹಿಳೆಯರ ಸಂಖ್ಯೆ ಮೊದಲಿಗಿಂತ ಅಂದಾಜು ಎಷ್ಟು ಪ್ರಮಾಣದಲ್ಲಿ ಹೆಚ್ಚಾಗಿದೆ ;

(ಊ) ಈ ಯೋಜನೆಯಿಂದ ಪ್ರತಿ ನಿತ್ಯ ಕೆಲಸಕ್ಕೆ ಹೋಗುವ ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ, ವೃದ್ದಾಪರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದಕ್ಕೆ ಪರ್ಯಾಯವಾಗಿ ರೂಪಿಸಿರುವ ಯೋಜನೆಗಳಾವುವು ?

## ಬೆಂಗಳೂರು ಜಿಲ್ಲೆಯ ಪೆರಿಫೆರಲ್ ರಿಂಗ್ ರೋಡ್ ಕಾಮಗಾರಿ ಬಗ್ಗೆ

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೭೩ (೯೮೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪರಿಫೆರಲ್ ರಿಂಗ್ ರೋಡ್‌ನ ಪ್ರಾರಂಭವಾಗಿದ್ದು ಯಾವಾಗ ; ಪ್ರಸ್ತುತ ಕಾಮಗಾರಿಯು ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಆ) ಪರಿಫೆರಲ್ ರಿಂಗ್ ರೋಡ್ ರಸ್ತೆಯ ಉಪಯೋಗಕ್ಕಾಗಿ ರೈತರಿಂದ ಎಷ್ಟು ಎಕರೆ ಜಮೀನನ್ನು ಭೂ ಸ್ವಾಧೀನ ವಶಪಡಿಸಿಕೊಳ್ಳಲಾಗಿದೆ ;

(ಇ) ರೈತರ ಜಮೀನನ್ನು ವಶಪಡಿಸಿಕೊಳ್ಳಲು ಇರುವ ಮಾನದಂಡಗಳೇನು ;

(ಈ) ಪೆರಿಫೆರಲ್ ರಿಂಗ್ ರೋಡ್‌ನ ಕಾಮಗಾರಿಯು ಯಾವ ಕಾಲ ಮಿತಿಯೊಳಗೆ ಮುಕ್ತಾಯವಾಗುವುದು ಮತ್ತು ಈ ಕಾರ್ಯವು ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಂಡಿದೆ ? (ವಿವರ ನೀಡುವುದು)

## ರಾಜ್ಯದ ಗ್ರಾಮ ಆಡಳಿತ ಅಧಿಕಾರಿಗಳ ಕಛೇರಿಯ ಕುರಿತು

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೭೪ (೯೮೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳಿಗೆ ಕೇಂದ್ರ ಸ್ಥಾನದಲ್ಲಿ ಸರ್ಕಾರಿ ಕಛೇರಿ ಇದೆಯೇ ; (ವಿವರ ನೀಡುವುದು)

(ಆ) ಗ್ರಾಮ ಆಡಳಿತ ಅಧಿಕಾರಿಗಳಿಗೆ ಕಛೇರಿಯಲ್ಲಿ ಇತ್ತೀಚಿಗೆ ನೀಡುವ ಕೆಲಸಗಳಿಂದ E-office ಮತ್ತು ಮೊಬೈಲ್ ಆ್ಯಪ್‌ಗಳಲ್ಲಿ ಮಾಡುವಂತಹ ಕೆಲಸಗಳಿಗೆ ಮೂಲ ಭೂತ ಸೌಕರ್ಯ ಸರ್ಕಾರವು ನೀಡಿದೆಯೇ ;

(ಇ) ಗ್ರಾಮ ಆಡಳಿತ ಅಧಿಕಾರಿಗಳ ಬಳಿ ಪಹಣಿಗೆ ಆಧಾರ್‌ಲಿಂಕ್ ಮಾಡಿಸುತ್ತಿದ್ದು ಈ ಬಗ್ಗೆ ಯಾವುದಾದರೂ ಸರ್ಕಾರಿ ಆದೇಶ ಹೊರಡಿಸಿದೆಯೇ ; ಹಾಗೂ ಇದರಿಂದ ಸಾರ್ವಜನಿಕರಿಗೆ ಆಗುವ ಉಪಯೋಗಗಳ ಮಾಹಿತಿಯನ್ನು ಅಧಿಕೃತವಾಗಿ ಪ್ರಚಾರ ಪಡಿಸಿದೆಯೇ ; (ವಿವರ ನೀಡುವುದು)

(ಈ) ಗ್ರಾಮ ಆಡಳಿತ ಅಧಿಕಾರಿಗಳಿಗೆ ಕಾಲಕಾಲಕ್ಕೆ ಮುಂಬಡ್ತಿ ನೀಡಲಾಗುತ್ತಿದೆಯೇ ?

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಸಿ ಅಂಡ್ ಆರ್ ಪರಿಷ್ಕರಣೆ ಆಗದಿರುವ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೭೫ (೯೬೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಕಳೆದ ೧೧ ವರ್ಷಗಳಿಂದ ಸಿ ಅಂಡ್ ಆರ್ ವೃಂದ ಮತ್ತು ನೇಮಕಾತಿ ನಿಯಮಗಳು ಪರಿಷ್ಕರಣೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ೨೦೧೧ ರಲ್ಲಿ ರಚನೆಯಾದ ಮತ್ತು ಸಿ ಅಂಡ್ ಆರ್. ಆಧಾರದ ಮೇಲೆ ನಿಗದಿಪಡಿಸಿದ ಹುದ್ದೆಗಳಿಗೆ ಮಾತ್ರ ೨೦೨೨ರಲ್ಲಿ ಮುಂಬಡ್ತಿ

ನೀಡಲಾಗಿದ್ದು ೨೦೧೬ರಲ್ಲಿ ನೇಮಕವಾದ ಎಫ್.ಡಿ.ಸಿಎ.ಗಳಿಗೆ ಶಿಕ್ಷಕರಿಗೆ ಉಪನ್ಯಾಸಕರಿಗೆ ಆಗಿರುವ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕಾರಣವೇನು ಮತ್ತು ಪರಿಹಾರವೇನು ಇಲಾಖೆಯಲ್ಲಿ ಕಾರ್ಯನಿರ್ವಹಿಸುವ ಹುದ್ದೆಯನುಸಾರ ನೌಕರರ ಹೆಸರು, ಹುದ್ದೆಗೆ ಸೇರಿದ ದಿನಾಂಕ, ಬಡ್ತಿಯನ್ನು ಪಡೆದ ನೌಕರರ ಪಟ್ಟಿಯನ್ನು ಜಿಲ್ಲಾವಾರು ಮಾಹಿತಿ ನೀಡುವುದು ;

(ಇ) ಸಿ ಅಂಡ್ ಆರ್ ಪರಿಷ್ಕರಣೆ ಮಾಡದೆ ಹೆಚ್ಚು ಸೇವೆ ಸಲ್ಲಿಸಿದ ಅಭ್ಯರ್ಥಿಗಳನ್ನು ಕೈಬಿಟ್ಟು ಕಡಿಮೆ ಸೇವೆ ಸಲ್ಲಿಸಿದ ಅಭ್ಯರ್ಥಿಗಳಿಗೆ ಮುಂಬಡ್ತಿ ನೀಡಲು ಅವಕಾಶವಿದೆಯೇ ; ಹೌದಾದಲ್ಲಿ, ಹೆಚ್ಚು ಸೇವೆ ಸಲ್ಲಿಸಿದ ಅಭ್ಯರ್ಥಿಗಳಿಗೆ ಅನ್ಯಾಯವಾಗಿರುವುದಿಲ್ಲವೇ ;

(ಈ) ಪ್ರತಿ ೩ ವರ್ಷಕ್ಕೊಮ್ಮೆ ಸಿಅಂಡ್ಆರ್. ಪರಿಷ್ಕರಣೆ ಮಾಡಬೇಕೆಂದು ಸರ್ಕಾರದ ಆದೇಶವಿದ್ದರೂ ಪರಿಷ್ಕರಣೆ ಮಾಡದೆ ಹಳೆಯ ಸಿ ಅಂಡ್ ಆರ್ ನಲ್ಲಿ ಇರುವ ಹುದ್ದೆಗಳಿಗೆ ಮಾತ್ರ ಮುಂಬಡ್ತಿ ನೀಡಿರುವುದು ನಿಯಮ ಉಲ್ಲಂಘನೆ ಅಲ್ಲವೇ :

(ಉ) ಸಿ ಅಂಡ್ ಆರ್‌ನಲ್ಲಿ ಹುದ್ದೆಗಳನ್ನು ನಿಗದಿಪಡಿಸಿಲ್ಲ ಎಂಬ ಕಾರಣಕ್ಕೆ ಇಲಾಖೆಯ ವಿವಿಧ ವೃಂದದ ಸಿಬ್ಬಂದಿಗಳಿಗೆ/ ನೌಕರರಿಗೆ ಮುಂಬಡ್ತಿ ತಿರಸ್ಕರಿಸುವುದು ನ್ಯಾಯ ಸಮ್ಮತವೇ ;

(ಊ) ಹೆಚ್ಚು ಸೇವೆ ಸಲ್ಲಿಸಿದ ಎಸ್ಸಿ/ಎಸ್ಟಿ ಮತ್ತು ಒಬಿಸಿ ವರ್ಗದ ಎಫ್.ಡಿ.ಸಿಎ ಗಳಿಗೆ ಶಿಕ್ಷಕರಿಗೆ ಉಪನ್ಯಾಸಕರಿಗೆ ಮುಂಬಡ್ತಿಯಲ್ಲಿ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ?

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ನಿರ್ದೇಶನಾಲಯದ ಕೇಂದ್ರ ಕಛೇರಿಯಲ್ಲಿನ ಹುದ್ದೆಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೭೬ (೯೬೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅಲ್ಪಸಂಖ್ಯಾತರ ನಿರ್ದೇಶನಾಲಯದ ಕೇಂದ್ರ ಕಛೇರಿಯಲ್ಲಿ ಮಂಜೂರಾದ ಹುದ್ದೆಗಳೆಷ್ಟು; (ವೃಂದ, ಹುದ್ದೆವಾರು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿವಾರು ವಿವರ ನೀಡುವುದು)

(ಆ) ಅಲ್ಪಸಂಖ್ಯಾತರ ನಿರ್ದೇಶನಾಲಯದ ಕೇಂದ್ರ ಕಛೇರಿಯಲ್ಲಿ ನಿಯೋಜನೆಯ ಮೇರೆಗೆ ಬೇರೆ ಇಲಾಖೆಯಿಂದ ಸಿಬ್ಬಂದಿಗಳ ಸೇವೆಯನ್ನು ಪಡೆಯಲಾಗಿದೆಯೇ ; ಸದರಿ ಹುದ್ದೆಗೆ ನಿಯೋಜನೆಯ ಮೇರೆಗೆ ಬಂದಿರುವ ಸಿಬ್ಬಂದಿಗಳು ಅರ್ಹರಿದ್ದಾರೆಯೇ ; ಯಾವ ಆಧಾರದಲ್ಲಿ ನಿಯೋಜನೆ ಮಾಡಲಾಗಿದೆ: ಯಾವ ಹುದ್ದೆಗೆ ಯಾವ ಸಿಬ್ಬಂದಿಯ ನಿಯೋಜನೆ ಪಡೆಯಲಾಗಿದೆ ; ಅವರ ಮೂಲ ಹುದ್ದೆ ಮತ್ತು ವಿದ್ಯಾರ್ಹತೆ ಕುರಿತು ವಿವರ ನೀಡುವುದು ;

(ಇ) ಅಲ್ಪಸಂಖ್ಯಾತರ ನಿರ್ದೇಶನಾಲಯದ ಕೇಂದ್ರ ಕಛೇರಿಯಲ್ಲಿ ನಿಯೋಜನೆಯ ಮೇರೆಗೆ ಬಂದಿರುವ ಸಿಬ್ಬಂದಿಗಳು ಸದರಿ ಹುದ್ದೆಗೆ ಅರ್ಹರೇ ; ಇಲ್ಲದಿದ್ದಲ್ಲಿ, ಅವರ ನಿಯೋಜನೆಯಿಂದ ನಿರ್ದೇಶನಾಲಯಕ್ಕೆ ಆಗುವ ಉಪಯೋಗವೇನು ; (ವಿವರ ನೀಡುವುದು)

(ಈ) ಅಲ್ಪಸಂಖ್ಯಾತರ ನಿರ್ದೇಶನಾಲಯದ ಕೇಂದ್ರ ಕಛೇರಿಯಲ್ಲಿ ನಿಯೋಜನೆಯ ಮೇರೆಗೆ ಬಂದಿರುವ ಅನರ್ಹ ಸಿಬ್ಬಂದಿಗಳ

ನಿಯೋಜನೆಯನ್ನು ರದ್ದುಪಡಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು; ಸದರಿ ನಿಯೋಜನೆ ಯಾವಾಗ ರದ್ದುಪಡಿಸಲಾಗುವುದು ?

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದಲ್ಲಿ "ಮೌಲಾನಾ ಆಜಾದ್ ಭವನ" ಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೭೭ (೯೬೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದಲ್ಲಿ "ಮೌಲಾನಾ ಆಜಾದ್ ಭವನ" ದ ಕಟ್ಟಡಗಳನ್ನು ಎಷ್ಟು ಜಿಲ್ಲೆಗಳಲ್ಲಿ ಕಟ್ಟಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಜಿಲ್ಲಾ ಮಟ್ಟದ ಕಛೇರಿ ಮೌಲಾನಾ ಆಜಾದ್ ಭವನ ಇನ್ನುಳಿದ ಜಿಲ್ಲೆಗಳಲ್ಲಿ ಕಟ್ಟದೇ ಇರಲು ಕಾರಣವೇನು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಜಿಲ್ಲಾ ಮಟ್ಟದ ಕಛೇರಿ ಮೌಲಾನಾ ಆಜಾದ್ ಭವನ ಕಟ್ಟಲು ನಿವೇಶನ ಮಂಜೂರಾಗಿ ಕಟ್ಟಡ ಕಟ್ಟದಿರುವ ಜಿಲ್ಲೆಗಳು ಯಾವುವು ; ಅಂತಹ ಜಿಲ್ಲೆಗಳಲ್ಲಿ ಮೌಲಾನಾ ಆಜಾದ್ ಭವನ ಕಟ್ಟಲು ಸರ್ಕಾರ ತೆಗೆದುಕೊಂಡ ಕ್ರಮವೇನು ;

(ಈ) ರಾಯಚೂರು ಜಿಲ್ಲೆಗೆ "ಮೌಲಾನಾ ಆಜಾದ್ ಭವನ" ನಿರ್ಮಾಣ ಮಾಡಲು ಪ್ರಸ್ತಾವನೆ ಬಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು: ರಾಯಚೂರು ಜಿಲ್ಲೆಗೆ "ಮೌಲಾನಾ ಆಜಾದ್ ಭವನ" ನಿರ್ಮಾಣ ಮಾಡಲು ಯಾವಾಗ ಮಂಜೂರಾತಿ ನೀಡಲಾಗುವುದು ?

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಜೈನ, ಬೌದ್ಧ, ಸಿಖ್ ಮತ್ತು ಮುಸ್ಲಿಂ ಸಮುದಾಯದವರಿಗಿರುವ ಯೋಜನೆಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೭೮ (೯೬೯) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಜೈನ್, ಬೌದ್ಧ, ಸಿಖ್ ಮತ್ತು ಮುಸ್ಲಿಂ ಸಮುದಾಯಗಳಿಗೆ ಯಾವ ಯಾವ ಯೋಜನೆಯನ್ನು ರೂಪಿಸಲಾಗಿದೆ ;

(ಆ) ಜೈನ್, ಬೌದ್ಧ, ಸಿಖ್ ಮತ್ತು ಮುಸ್ಲಿಂ ಸಮುದಾಯಗಳ ಅಭಿವೃದ್ಧಿಗೆ ಎಷ್ಟು ಮೊತ್ತವನ್ನು ವೆಚ್ಚ ಮಾಡಲಾಗಿದೆ ; ಯಾವ ಯಾವ ಕಾರ್ಯಕ್ರಮಗಳಿಗೆ ವೆಚ್ಚ ಮಾಡಲಾಗಿದೆ ;

(ಇ) ಜೈನ್, ಬೌದ್ಧ, ಸಿಖ್ ಸಮುದಾಯಗಳಿಗಾಗಿ ಕಳೆದ ೨ ವರ್ಷಗಳಲ್ಲಿ ನಿರ್ಮಿಸಲಾದ ಸಮುದಾಯ ಭವನಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಮುಸ್ಲಿಂ ಸಮುದಾಯದವರಿಗಾಗಿ ಕಳೆದ ೨ ವರ್ಷಗಳಲ್ಲಿ ಎಷ್ಟು ಶಾದಿ ಮಹಲ್ ಮತ್ತು ಸಮುದಾಯ ಭವನಗಳನ್ನು ನಿರ್ಮಿಸಲಾಗಿದೆ ? (ಜಿಲ್ಲಾವಾರು ಮಾಹಿತಿ ನೀಡುವುದು)

## ರಾಜ್ಯದ ಅಲ್ಪಸಂಖ್ಯಾತ ಸಮುದಾಯಗಳ ವಿದ್ಯಾರ್ಥಿಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೭೯ (೯೭೦) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಅಲ್ಪಸಂಖ್ಯಾತ ಸಮುದಾಯದ ಎಷ್ಟು ವಿದ್ಯಾರ್ಥಿಗಳು ಐಐಟಿ, ಐಐಎಂ, ಐಐಎಸ್ಸಿ, ಏಮ್ಸ್ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಾತಿಯನ್ನು ಪಡೆದಿದ್ದಾರೆ ; ಇದರಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಗಿದೆ ; ಇದರಲ್ಲಿ ಜೈನ್, ಬೌದ್ಧ, ಸಿಖ್ ಸಮುದಾಯಗಳ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

(ಆ) ೨೦೨೨-೨೩ ಮತ್ತು ೨೦೨೩-೨೪ರ ಶೈಕ್ಷಣಿಕ ಸಾಲಿನಲ್ಲಿ ಬಿ.ಎಡ್ ಮತ್ತು ಡಿ.ಎಡ್ ಕೋರ್ಸ್ ಮಾಡುತ್ತಿರುವ ಎಷ್ಟು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಗಿದೆ ; ಅದರಲ್ಲಿ ಜೈನ್, ಬೌದ್ಧ, ಸಿಖ್ ಸಮುದಾಯಗಳ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

(ಇ) ೨೦೨೨-೨೩ ಮತ್ತು ೨೦೨೩-೨೪ ರ ಶೈಕ್ಷಣಿಕ ಸಾಲಿನಲ್ಲಿ ಎಷ್ಟು ವಿದ್ಯಾರ್ಥಿಗಳು ಅರಿವು ಯೋಜನೆಯ ಫಲಾನುಭವಿಗಳಾಗಿದ್ದಾರೆ; ಅದರಲ್ಲಿ ಜೈನ್, ಬೌದ್ಧ, ಸಿಖ್ ಸಮುದಾಯಗಳ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

## ಕ್ರೈಸ್ತ ಅಭಿವೃದ್ಧಿ ನಿಗಮದ ನಿಯಮಾವಳಿಗಳ ಮತ್ತು ಯೋಜನೆಗಳ ಬಗ್ಗೆ

**ಶ್ರೀ ಐವನ್ 'ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೮೦ (೯೭೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕ್ರೈಸ್ತ ಅಭಿವೃದ್ಧಿ ನಿಗಮ ಘೋಷಣೆ ಮಾಡಿ ೧ ವರ್ಷ ಕಳೆದರೂ ಇನ್ನೂ ಜಾರಿಗೆ ಬರದಿರಲು ಕಾರಣವೇನು ; ಸದರಿ ಪ್ರಸ್ತಾಪ ಯಾವ ಹಂತದಲ್ಲಿದೆ ; ಇದರ ನಿಯಮಾವಳಿಗಳು ಮತ್ತು ಯೋಜನೆಗಳ ಪ್ರತಿಯನ್ನು ಒದಗಿಸುವುದು ;

(ಆ) ಕ್ರೈಸ್ತ ಅಭಿವೃದ್ಧಿ ನಿಗಮಕ್ಕೆ ಮೀಸಲಿಟ್ಟ ಹಣವನ್ನು ಯಾವ ರೀತಿ ಬಳಕೆ ಮಾಡಲಾಗಿದೆ ; (ವಿವರ ನೀಡುವುದು)

(ಇ) ವಿದೇಶದಲ್ಲಿ ಶಿಕ್ಷಣ ಪಡೆಯಲು ಎಷ್ಟು ಮಕ್ಕಳಿಗೆ ಅವಕಾಶ ನೀಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಈ) ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯಲು ಕೇವಲ ೫೦೦ ರ್‍ಯಾಂಕ್ ಪಡೆದ ವಿಶ್ವವಿದ್ಯಾನಿಲಯಗಳಿಗೆ ಮಾತ್ರ ಅವಕಾಶ ನೀಡಲಾಗಿರುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚು ಹಣವನ್ನು ಪಾವತಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದನ್ನು ೨೦೦೦ ರ್‍ಯಾಂಕ್ ಪಡೆದ ವಿಶ್ವವಿದ್ಯಾನಿಲಯಗಳವರೆಗೆ ವಿಸ್ತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಕಳೆದ ೪ ವರ್ಷಗಳಿಂದ ವಸತಿ ಯೋಜನೆಯಡಿ ಮನೆಗಳ ಮಂಜೂರು ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೮೧ (೯೭೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಜಿಲ್ಲೆಗೆ ಕಳೆದ ೪ ವರ್ಷಗಳಿಂದ ವಸತಿ ಯೋಜನೆಯಡಿಯಲ್ಲಿ ಒಂದೂ ಮನೆಯನ್ನು ಮಂಜೂರು ಮಾಡದಿರಲು ಕಾರಣಗಳೇನು ; (ವಿವರ ನೀಡುವುದು)

(ಆ) ೨೦೧೯-೨೦ರ ನಂತರ ದಕ್ಷಿಣ ಕನ್ನಡ ಜಿಲ್ಲೆಗೆ ವಸತಿ ಇಲಾಖೆಯಿಂದ ಮನೆಗಳನ್ನು ನಿರ್ಮಿಸಲು ಕ್ರಮಕೈಗೊಳ್ಳಲಾಗಿದೆಯೇ ; (ವಿವರ ನೀಡುವುದು)

(ಇ) ೨೦೨೨-೨೩, ೨೦೨೩-೨೪ ರಲ್ಲಿ ರಾಜ್ಯದಲ್ಲಿ ವಸತಿ ಇಲಾಖೆಯಿಂದ ಬಿಡುಗಡೆ ಮಾಡಲಾದ ಒಟ್ಟು ಮನೆಗಳೆಷ್ಟು;

ಪೂರ್ಣಗೊಂಡ ಮನೆಗಳೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಈ) ಪ್ರಸ್ತುತ ನಿರ್ಮಾಣಗೊಳ್ಳುವ ಮನೆಗಳಿಗೆ ಇಲಾಖೆಯಿಂದ ಎಷ್ಟು ಹಣವನ್ನು ನೀಡಲಾಗುತ್ತಿದೆ ? (ವಿವರ ನೀಡುವುದು)

## ಕರಾವಳಿ ಜಿಲ್ಲೆಯಲ್ಲಿ ಮೀನುಗಾರಿಕೆ ಬಂದರುಗಳ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೮೨ (೯೭೫) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರಾವಳಿ ಜಿಲ್ಲೆಗಳಲ್ಲಿ ಎಷ್ಟು ಮೀನುಗಾರಿಕೆ ಬಂದರುಗಳಿವೆ; ಇದರ ನಿರ್ವಹಣೆಯನ್ನು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ನಿರ್ಮಾಣಗೊಂಡಿದ್ದ ಮೀನುಗಾರಿಕೆ ಬಂದರುಗಳು ಕುಸಿದು ಬಿದ್ದಿರುವ ಬಗ್ಗೆ ಕೈಗೊಂಡ ಕ್ರಮಗಳೇನು ;

(ಇ) ಕರಾವಳಿ ಮೀನುಗಾರಿಕೆ ಅಭಿವೃದ್ಧಿಗಾಗಿ ಮೀಸಲಿಟ್ಟ ಹಣ ಎಷ್ಟು; ಯಾವ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸಲು ಹಣವನ್ನು ಉಪಯೋಗಿಸಲಾಗುವುದು ; (ವಿವರ ನೀಡುವುದು)

(ಈ) ಕರಾವಳಿಯಲ್ಲಿ ಮೀನುಗಾರರಿಗೆ ನೀಡುವ ಸೀಮೆಎಣ್ಣೆಯನ್ನು ಏರಿಸಬೇಕೆಂಬ ಬೇಡಿಕೆ ಇದ್ದು, ಇದರ ಬಗ್ಗೆ ಇಲಾಖೆ ಕೈಗೊಂಡಿರುವ ಕ್ರಮವೇನು; ಪ್ರಸ್ತುತ ಸೀಮೆಎಣ್ಣೆಯ ವಿತರಣೆಗಾಗಿ ವಾರ್ಷಿಕವಾಗಿ ಎಷ್ಟು ಖರ್ಚು ಮಾಡಲಾಗುವುದು ? (ವಿವರ ನೀಡುವುದು)

## ಮಂಗಳೂರು ನಗರದಲ್ಲಿನ ನರ್ಮ್ ಯೋಜನೆಗಳ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೮೩ (೯೭೨) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಗಳೂರು ನಗರದಲ್ಲಿ ನರ್ಮ್ ಯೋಜನೆ ಅನ್ವಯ ಎಷ್ಟು ಪರ್ಮಿಟ್‌ಗಳನ್ನು ನೀಡಲಾಗಿದೆ; ಎಷ್ಟು ಬಸ್ಸುಗಳು ಪ್ರಸ್ತುತ ಚಾಲನೆಯಲ್ಲಿವೆ ;

(ಆ) ಮಂಗಳೂರು ನಗರದಲ್ಲಿ ಮಹಿಳೆಯರಿಗಾಗಿ ಶಕ್ತಿ ಯೋಜನೆ ಅನ್ವಯ ಪ್ರಯಾಣಿಸಲು ಬಸ್ಸುಗಳು ಇಲ್ಲದಿರುವ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿವೆಯೇ ; ಬಂದಿದ್ದಲ್ಲಿ, ವಿವರ ನೀಡುವುದು;

(ಇ) ಮಂಗಳೂರು ನಗರದಲ್ಲಿ ಸರ್ಕಾರಿ ಬಸ್ಸುಗಳು ಸಂಚರಿಸುವಂತಾಗಲು ಸರ್ಕಾರ ಕೈಗೊಂಡಿರುವ ಕ್ರಮವೇನು ;

(ಈ) ಮಂಗಳೂರು ನಗರದಲ್ಲಿ ಸರ್ಕಾರಿ ಬಸ್ಸುಗಳ ಬೇಡಿಕೆಗೆ ಇಲಾಖೆ ಸ್ಪಂಧಿಸದಿರಲು ಕಾರಣವೇನು ; (ವಿವರ ನೀಡುವುದು)

(ಉ) ಮಹಿಳೆಯರಿಗೆ ಶಕ್ತಿ ಯೋಜನೆ ಅನ್ವಯ ಪ್ರಯಾಣಿಸಲು ಖಾಸಗಿ ಬಸ್ಸುಗಳಲ್ಲಿ ಅವಕಾಶ ನೀಡುವುದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ; ಈ ಬಗ್ಗೆ ಸರ್ಕಾರದ ನಿರ್ಧಾರವೇನು ?

## ಮುಖ್ಯಮಂತ್ರಿಗಳ ವಿಶೇಷ ಯೋಜನೆಯಲ್ಲಿ ಬಿಡುಗಡೆ ಮಾಡಿದ ಅನುದಾನದ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೮೪ (೯೭೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಮುಖ್ಯಮಂತ್ರಿಗಳ ವಿಶೇಷ ಯೋಜನೆ ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿ ಯೋಜನೆ ಅನ್ವಯ ಬಿಡುಗಡೆ ಮಾಡಿದ ಹಣ ಎಷ್ಟು ; ಯಾವ ಯಾವ ಕ್ಷೇತ್ರಗಳಿಗೆ ಬಿಡುಗಡೆಯಾಗಿದೆ ; (ವಿವರ ನೀಡುವುದು)

(ಆ) ಕ್ರೈಸ್ತ ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿಗೆ ಹಣವನ್ನು ಪ್ರತ್ಯೇಕವಾಗಿ ಒದಗಿಸಲಾಗಿದೆಯೇ ; (ವಿವರ ನೀಡುವುದು)

(ಇ) ಕ್ರೈಸ್ತ ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿ ಬಗ್ಗೆ ಗಮನ ಹರಿಸಲಾಗಿದೆಯೇ ; ಕ್ರೈಸ್ತರಿಗಾಗಿ ಮೀಸಲಿಟ್ಟ ಹಣ ಎಷ್ಟು; (ವಿವರ ನೀಡುವುದು)

(ಈ) ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಹಣವನ್ನು ಕ್ರೈಸ್ತ ಅಲ್ಪಸಂಖ್ಯಾತರ ಕಾಲೋನಿ ಅಭಿವೃದ್ಧಿಗಾಗಿ ನೀಡಲಾಗಿದೆ ? (ವಿವರ ನೀಡುವುದು)

## ಬಗರ್ ಹುಕುಂ ಸಾಗುವಳಿ ಮಂಜೂರು ಬಗ್ಗೆ

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೮೫ (೯೦೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಯಾವ ಯಾವ ತಾಲ್ಲೂಕುಗಳ ಸರ್ಕಾರಿ ಜಮೀನಿನಲ್ಲಿ ಎಷ್ಟು ಜನ ರೈತರು ಸಾಗುವಳಿ ಮಾಡುತ್ತಿದ್ದಾರೆ ; ಸಾಗುವಳಿ ಮಾಡುತ್ತಿರುವ ಎಷ್ಟು ಜನ ರೈತರಿಗೆ ಸಾಗುವಳಿ ಚೀಟಿಯನ್ನು ಮಂಜೂರು ಮಾಡಲಾಗಿದೆ ; (ವಿವರ ನೀಡುವುದು)

(ಆ) ಈ ಜಿಲ್ಲೆಗಳಲ್ಲಿ ಸಾಗುವಳಿ ಮಾಡುತ್ತಿದ್ದು, ರೈತರು ಅರ್ಜಿ ನಮೂನೆ ೫೦, ೫೧, ೫೨ ಮತ್ತು ೫೩ರನ್ನು ಸಲ್ಲಿಸಿ ಎಷ್ಟು ವರ್ಷಗಳಾಗಿವೆ ; (ತಾಲ್ಲೂಕುವಾರು ವಿವರಗಳೊಂದಿಗೆ ಬಂದಿರುವ ಅರ್ಜಿಗಳ ಸಂಖ್ಯೆಯನ್ನು ನೀಡುವುದು)

(ಇ) ಬೆಂಗಳೂರು ನಗರ ಬಿಬಿಎಂಪಿ ವ್ಯಾಪ್ತಿಯ ಎಷ್ಟು ಕಿ.ಮೀ ಅಂತರದಲ್ಲಿ ಸರ್ಕಾರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವ ರೈತರಿಗೆ ಜಮೀನನ್ನು ಮಂಜೂರು ಮಾಡಲಾಗಿದೆ ; (ವಿವರ ನೀಡುವುದು)

(ಈ) ಜಮೀನನ್ನು ಮಂಜೂರು ಮಾಡಲು ಬಿಬಿಎಂಪಿ ವ್ಯಾಪ್ತಿಯಿಂದ ನಿಗದಿಪಡಿಸಿರುವ ಕಿ.ಮೀ ಎಷ್ಟು ; ಇದಕ್ಕೆ ಅನುಸರಿಸಿರುವ ಮಾನದಂಡಗಳಾವುವು ? (ಸಂಪೂರ್ಣ ವಿವರದೊಂದಿಗೆ ಹಾಗೂ ಸರ್ಕಾರದ ಸುತ್ತೋಲೆ ಆದೇಶಗಳ ಪ್ರತಿಯೊಂದಿಗೆ ಮಾಹಿತಿ ಒದಗಿಸುವುದು)

## ಕೊಡಗು ಜಿಲ್ಲೆಯಲ್ಲಿ ಸಂಚರಿಸುವ ಸರ್ಕಾರಿ ಬಸ್ಸುಗಳ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೭೮೬ (೯೫೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ, ಸಾರ್ವಜನಿಕರ ಸಂಚಾರಕ್ಕೆ ವಿವಿಧ ಘಟಕಗಳಿಂದ ಸಂಚರಿಸುತ್ತಿರುವ ಸರ್ಕಾರಿ ಬಸ್ಸುಗಳ ಸಂಖ್ಯೆ ಎಷ್ಟು ; (ಮಾರ್ಗ ಮತ್ತು ಸಮಯವಾರು ಮಾಹಿತಿಯನ್ನು ನೀಡುವುದು)

(ಆ) ಜಿಲ್ಲೆಯ ಹಲವು ಕಡೆಗಳಲ್ಲಿ ಕೆಲ ಬಸ್ಸುಗಳು ತಿಂಗಳಿಗೊಮ್ಮೆ ಅಥವಾ ತಿಂಗಳಿಗೆ ೨ ರಿಂದ ೩ ಬಾರಿ ಮಾತ್ರ ಸಂಚರಿಸುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಜಿಲ್ಲೆಯಲ್ಲಿ ವಿದ್ಯಾರ್ಥಿಗಳ ಸುಲಭ ಸಂಚಾರಕ್ಕೆ ಸಹಾಯವಾಗುವಂತೆ ಎಷ್ಟು ಬಸ್ ಪಾಸ್‌ಗಳನ್ನು ವಿತರಿಸಲಾಗಿದೆ ?

## ಕೊಳಚೆ ಅಭಿವೃದ್ಧಿ ಮಂಡಳಿಯಿಂದ ಬಿಡುಗಡೆಯಾಗಿರುವ ಅನುದಾನ ಮತ್ತು ಕಾಮಗಾರಿಗಳ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೮೭ (೯೫೨) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೨೧ ರಿಂದ ಇಲ್ಲಿಯವರೆಗೆ ಕೊಳಚೆ ಅಭಿವೃದ್ಧಿ ಮಂಡಳಿ ವತಿಯಿಂದ ಕೊಡಗು, ಮೈಸೂರು ಹಾಗೂ ಮಂಡ್ಯ ಜಿಲ್ಲೆಗಳಿಗೆ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಮಂಜೂರಾಗಿರುವ ಅನುದಾನ ಎಷ್ಟು ;

(ಆ) ಸದರಿ ಅನುದಾನದಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳು ಬಾಕಿ ಇರುವ ಕಾಮಗಾರಿಗಳು ಯಾವುವು ; (ಬಾಕಿ ಇರುವ ಅನುದಾನದ ಮೊತ್ತದೊಂದಿಗೆ ಸಂಪೂರ್ಣ ತಾಲ್ಲೂಕುವಾರು ವಿವರ ನೀಡುವುದು)

(ಇ) ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕೊಡಗು ಜಿಲ್ಲೆಗೆ ಮಂಜೂರಾದ ಅನುದಾನದ ವಿವರಗಳನ್ನು ಒದಗಿಸುವುದು; ಎಷ್ಟು ಮೊತ್ತದ ಅನುದಾನವನ್ನು ಮಂಜೂರು ಮಾಡಲಾಗಿದೆ; ಯಾವ ಯಾವ

ಕಾಮಗಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ; ಕಾಮಗಾರಿವಾರು, ತಾಲ್ಲೂಕುವಾರು ವಿವರ ನೀಡುವುದು ;

(ಈ) ಕೊಡಗು ಜಿಲ್ಲೆಯ ಸದರಿ ಕಾಮಗಾರಿಗಳನ್ನು ಕೈಗೊಂಡಿರುವ ಗುತ್ತಿಗೆದಾರರ ವಿವರ ಮತ್ತು ಕ್ರಿಯಾ ಯೋಜನೆಯನ್ನು ಒದಗಿಸುವುದು ?

## ಸಾರಿಗೆ ಸಂಸ್ಥೆ ಡಿಜಿಟಲ್ ಪೇ ವ್ಯವಸ್ಥೆ ಜಾರಿಗೊಳಿಸುವ ಬಗ್ಗೆ

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :-**

೭೮೮ (೯೬೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಮಾದರಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆ.ಎಸ್.ಆರ್.ಟಿ.ಸಿ.) ಸೇರಿದಂತೆ ಎಲ್ಲಾ ಸಾರಿಗೆ ಸಂಸ್ಥೆಗಳ ವ್ಯಾಪ್ತಿಯಲ್ಲಿ ಡಿಜಿಟಲ್ ರೂಪದಲ್ಲಿ ಹಣ ಪಾವತಿಸಿ ಟಿಕೆಟ್ ಪಡೆಯುವ ವ್ಯವಸ್ಥೆ ಜಾರಿಗೊಳಿಸುವ ಕುರಿತು ಸರ್ಕಾರದ ನಿಲುವೇನು ;

(ಆ) 'ಡಿಜಿಟಲ್ ಪೇ' ಜಾರಿಗೊಳಿಸಲು ನಿರ್ಧರಿಸಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ರೂಪುರೇಷೆಗಳೇನು ;

(ಇ) ಈ ವ್ಯವಸ್ಥೆ ಜಾರಿಗೆ ತರಲು ಬೇಕಾದ ಅಂದಾಜು ಅನುದಾನ ಎಷ್ಟು ;

(ಈ) ಎಲೆಕ್ಟ್ರಾನಿಕ್ ಟಿಕೆಟಿಂಗ್ ಯಂತ್ರಗಳನ್ನು (ಇಟಿಎಂ) ಯಾವ ಸಂಸ್ಥೆಯಿಂದ ಖರೀದಿಸಲಾಗುತ್ತಿದೆ ; ಸದರಿ ಯಂತ್ರಗಳನ್ನು ಖರೀದಿಸಲು ಅನುಸರಿಸುವ ಮಾನದಂಡಗಳೇನು ; ಇದಕ್ಕೆ ಬೇಕಾಗುವ ಅಂದಾಜು ಮೊತ್ತ ಎಷ್ಟು ;

(ಉ) ರಾಜ್ಯದಲ್ಲಿರುವ ನಿರ್ವಾಹಕರು/ ಚಾಲಕರ ಸಂಖ್ಯೆ ಎಷ್ಟು ಈ ಪೈಕಿ ಎಷ್ಟು ಮಂದಿಗೆ ಎಷ್ಟು ಹಂತಗಳಲ್ಲಿ ತರಬೇತಿ ನೀಡಲು ಉದ್ದೇಶಿಸಲಾಗಿದೆ ಇದಕ್ಕೆ ಬೇಕಾಗುವ ಅಂದಾಜು ಮೊತ್ತ ಎಷ್ಟು;

(ಊ) ಕಳೆದ ಮೂರು ವರ್ಷಗಳಲ್ಲಿ ಸಾರಿಗೆ ಬಸ್ಸುಗಳಲ್ಲಿ ಟಿಕೆಟ್ ರಹಿತ ಪ್ರಯಾಣಿಕರಿಗೆ ವಿಧಿಸಿರುವ ದಂಡದ ಮೊತ್ತ ಎಷ್ಟು; ಎಷ್ಟು ಪ್ರಯಾಣಿಕರಿಗೆ ದಂಡ ವಿಧಿಸಲಾಗಿದೆ ? (ವರ್ಷವಾರು ಮಾಹಿತಿ ನೀಡುವುದು)

## ಪಶುಸಂಗೋಪನೆಯ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :-**

೭೮೯ (೮೬೭) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪಶುಸಂಗೋಪನೆ ಇಲಾಖೆಯಿಂದ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಟನ್ ಮೇವನ್ನು ಖರೀದಿಸಲಾಗಿದೆ ; ಟನ್ ಒಂದಕ್ಕೆ ನಿಗದಿಪಡಿಸಿದ ಮೊತ್ತವೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿರುವ ಪಶು ವೈದ್ಯಕೀಯ ಚಿಕಿತ್ಸಾಲಯಗಳು ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ಕಳೆದ ಎರಡು ವರ್ಷಗಳಲ್ಲಿ ಎಷ್ಟು ಪಶು ವೈದ್ಯಕೀಯ ಚಿಕಿತ್ಸಕರನ್ನು ನೇಮಕ ಮಾಡಲಾಗಿದೆ ; ಇವುಗಳಲ್ಲಿ ಮಂಜೂರಾದ ಹುದ್ದೆ ಎಷ್ಟು ; ಖಾಲಿಯಿರುವ ಹುದ್ದೆ ಎಷ್ಟು ; ಕರ್ತವ್ಯ ನಿರತ ಪಶು ವೈದ್ಯರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಈ) ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಹೊಸದಾಗಿ ಪ್ರಾರಂಭವಾದ ಪಶು ಆಸ್ಪತ್ರೆಗಳು ಎಷ್ಟು; ಕೊನೆಯದಾಗಿ ಪಶು ವೈದ್ಯರನ್ನು

ಯಾವಾಗ ನೇಮಕಾತಿ ಮಾಡಿಕೊಳ್ಳಲಾಗಿತ್ತು ; ಖಾಲಿಯಿರುವ ಪಶು ವೈದ್ಯರನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; (ವಿವರ ನೀಡುವುದು)

(ಉ) ಬೆಂಗಳೂರು ಮಹಾನಗರದಲ್ಲಿರುವ ಪಶು ವೈದ್ಯ ಶಾಲೆಗಳ ಸಂಖ್ಯೆ ಎಷ್ಟು ; ಈ ಪಶು ವೈದ್ಯ ಶಾಲೆಗಳಲ್ಲಿ ಪಶು ವೈದ್ಯರು, ಸಹಾಯಕ ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಪಶು ವೈದ್ಯ ಶಾಲೆಗಳಲ್ಲಿ ಇತರೆ ಯಾವ ಯಾವ ಪ್ರಾಣಿಗಳಿಗೆ ಚಿಕಿತ್ಸೆ ನೀಡಲಾಗುತ್ತದೆ ; (ವಿವರ ನೀಡುವುದು)

(ಊ) ಪಶು ವೈದ್ಯ ಶಾಲೆಯ ಸ್ಥಳವನ್ನು ಇತರೆ ಸಂಸ್ಥೆಗಳಿಗೆ ವರ್ಗಾಯಿಸುವ ಬಗ್ಗೆ ಪತ್ರಿಕಾ ವರದಿಗಳು ಬಂದಿರುವುದು ನಿಜವೇ; ಹಾಗಿದ್ದಲ್ಲಿ, ಯಾವ ಪಶು ವೈದ್ಯ ಶಾಲೆಗಳನ್ನು ವರ್ಗಾಯಿಸಲಾಗಿದೆ ; ವರ್ಗಾಯಿಸಲು ಕಾರಣವೇನು ?

## ವಸತಿ ಗೃಹಗಳ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :-**

೭೯೦ (೮೬೮) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಿಂದೂ ಧಾರ್ಮಿಕ ದತ್ತಿ ಇಲಾಖೆಯಡಿಯಲ್ಲಿ ಹೊರ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ವಸತಿ ಗೃಹಗಳ ಸಂಖ್ಯೆ ಎಷ್ಟು ; ಕಟ್ಟಡ ಕಾಮಗಾರಿ ನಡೆಯುತ್ತಿರುವ ವಸತಿ ಗೃಹಗಳ ಸಂಖ್ಯೆ ಎಷ್ಟು ; (ರಾಜ್ಯವಾರು, ಜಿಲ್ಲಾವಾರು ಅಂಕಿ-ಅಂಶಗಳೊಂದಿಗೆ ಮಾಹಿತಿ ನೀಡುವುದು)

(ಆ) ಸರ್ಕಾರದಿಂದ ಕಳೆದ ಮೂರು ವರ್ಷಗಳಿಂದ ಹೊರ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಗೃಹಗಳಿಗೆ ಎಷ್ಟು ಅನುದಾನ

ನೀಡಲಾಗಿದೆ ; (ವರ್ಷವಾರು, ಅಂಕಿ-ಅಂಶಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಇ) ಉತ್ತರ ಪ್ರದೇಶದ ವಾರಣಾಸಿಯಲ್ಲಿರುವ ಕರ್ನಾಟಕ ರಾಜ್ಯ ಸರ್ಕಾರಿ ವಸತಿ ಗೃಹಕ್ಕೆ ನೀಡಿದ ಅನುದಾನವೆಷ್ಟು; ಇವುಗಳಿಗೆ ಎಷ್ಟು ಖರ್ಚು ಮಾಡಲಾಗಿದೆ ; ಒಟ್ಟು ಕೊಠಡಿಗಳ ಸಂಖ್ಯೆ ಎಷ್ಟು ; ಪ್ರಸ್ತುತ ವಸತಿ ಗೃಹ ಯಾವ ಸ್ಥಿತಿಯಲ್ಲಿದೆ ; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಖಾಯಂ ಮತ್ತು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ದರ್ಜೆಯ ಸಂಪೂರ್ಣ ಮಾಹಿತಿ ನೀಡುವುದು ;

(ಈ) ವಾರಣಾಸಿಯ ಕರ್ನಾಟಕ ರಾಜ್ಯ ಸರ್ಕಾರಿ ವಸತಿ ಗೃಹಕ್ಕೆ ಕಳೆದ ಮೂರು ವರ್ಷಗಳಿಂದ ಯಾವ ಯಾವ ಗಣ್ಯರು, ಜನಪ್ರತಿನಿಧಿಗಳು ಭೇಟಿ ನೀಡಿರುತ್ತಾರೆ ? (ಸಂಪೂರ್ಣ ಮಾಹಿತಿ ನೀಡುವುದು)

## ಕಾಶಿ ತೀರ್ಥಯಾತ್ರೆ ಯೋಜನೆಯ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :-**

೭೯೧ (೮೭೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಾಶಿ ತೀರ್ಥಯಾತ್ರೆ ಯೋಜನೆ ಪ್ರಾರಂಭವಾದ ವರ್ಷ ಯಾವುದು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಕಾಶಿಯಾತ್ರೆಗೆ ಆಯ್ಕೆಗೊಳ್ಳಲು ಇರುವ ಸರ್ಕಾರದ ಮಾನದಂಡಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಕಳೆದ ಎರಡು ವರ್ಷದಿಂದ ಕಾಶಿಯಾತ್ರೆಗೆ ಎಷ್ಟು ಜನರನ್ನು ಆಯ್ಕೆ ಮಾಡಿ ಕಳುಹಿಸಲಾಗಿದೆ; ಪ್ರತಿಯೊಬ್ಬ ಫಲಾನುಭವಿಗೆ ಎಷ್ಟು ಸಹಾಯಧನ ನೀಡಲಾಗುತ್ತಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಕಳೆದ ಎರಡು ವರ್ಷದಿಂದ ಸರ್ಕಾರ ಈ ಕಾಶಿಯಾತ್ರೆಗೆ ಎಷ್ಟು ಅನುದಾನ ಮಂಜೂರು ಮಾಡಿದೆ ; (ವಿವರವಾದ ಮಾಹಿತಿ ನೀಡುವುದು)

(ಉ) ಕಾಶಿಯಾತ್ರೆ ಕೈಗೊಂಡ ಕೆಲ ಫಲಾನುಭವಿಗಳಿಗೆ ಸರಿಯಾದ ಸಮಯದಲ್ಲಿ ಸಹಾಯಧನ ದೊರಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ? (ಮಾಹಿತಿ ನೀಡುವುದು)

## ಅಲ್ಪಸಂಖ್ಯಾತರ ವಸತಿ ನಿಲಯಗಳ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :-**

೭೯೨ (೮೬೯) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅಲ್ಪಸಂಖ್ಯಾತರ ವಸತಿ ನಿಲಯುಗಳಲ್ಲಿ ಮುಸ್ಲಿಂಮರಿಗೆ ಶೇಕಡಾ ೮೨ ರಷ್ಟು ಮೀಸಲಾತಿ ನೀಡಲಾಗುತ್ತಿದ್ದು, ಅದರಲ್ಲಿನ ಒಳಪಂಗಡಗಳಿಗೂ ಮೀಸಲಾತಿ ನೀಡಲಾಗುತ್ತಿದೆಯೇ ; ನೀಡಲಾಗುತ್ತಿದ್ದಲ್ಲಿ, ಒಳಪಂಗಡವಾರು ಸಂಪೂರ್ಣ ವಿವರ ನೀಡುವುದು ;

(ಆ) ಮುಸ್ಲಿಂಮರ ಒಟ್ಟು ಪಂಗಡ ಹಾಗೂ ಒಳಪಂಗಡಗಳ ಸಂಪೂರ್ಣ ವಿವರ ನೀಡುವುದು ;

(ಇ) ಮುಸ್ಲಿಂಮರಲ್ಲಿ ಆರ್ಥಿಕವಾಗಿ ಅತಿ ಹಿಂದುಳಿದ ಒಳಪಂಗಡಗಳು ಯಾವುವು ; (ವಿವರ ನೀಡುವುದು)

(ಈ) ಆರ್ಥಿಕವಾಗಿ ಹಿಂದುಳಿದ ಮುಸ್ಲಿಂ ಸಮುದಾಯದ ಒಳಪಂಗಡಗಳನ್ನು ಯಾವ ಯಾವ ಜಾತಿಯ ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ ? (ವಿವರ ನೀಡುವುದು)

## ಒಟ್ಟುಗೂಡಿಸಿರುವ ಪಹಣಿಗಳನ್ನು ಪ್ರತ್ಯೇಕಗೊಳಿಸುವ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :-**

೭೯೩ (೯೬೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯ-ಮೈಸೂರು, ಚಾಮರಾಜನಗರ, ಹಾಸನ ಜಿಲ್ಲೆಗಳಲ್ಲಿ ರೈತರಿಗೆ ಮಂಜೂರು ಮಾಡಲಾದ ಜಮೀನಿನ ವಿಸ್ತೀರ್ಣ ಎಷ್ಟು; ಜಮೀನನ್ನು ಎಷ್ಟು ರೈತರಿಗೆ ಮಂಜೂರು ಮಾಡಲಾಗಿದೆ ; (ತಾಲ್ಲೂಕುವಾರು ಮತ್ತು ವರ್ಗವಾರು ಮಾಹಿತಿ ನೀಡುವುದು)

(ಆ) ಇವುಗಳಲ್ಲಿ ಪೋಡಿ ಆಗಿರುವ ಹಾಗೂ ಪೋಡಿ ಆಗದಿರುವ ಪ್ರಕರಣಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಪೋಡಿ ಆಗದಿರುವ ಮಂಜೂರುದಾರರನ್ನೆಲ್ಲಾ ಆರ್.ಟಿ.ಸಿ ದಾಖಲಿಸುತ್ತಿರುವುದರಿಂದ ರೈತರಿಗೆ ತೀವ್ರ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ರೈತರ ಆರ್.ಟಿ.ಸಿ ಗಳನ್ನು ಪೋಡಿ ಮುಖಾಂತರ ಪ್ರತ್ಯೇಕಗೊಳಿಸಲು ಸರ್ಕಾರ ಕೈಗೊಂಡಿರುವ ಪರಿಹಾರ ಕ್ರಮಗಳೇನು ;

(ಈ) ಆರ್.ಟಿ.ಸಿ ಗಳನ್ನು ಒಟ್ಟುಗೂಡಿಸಿರುವ ಪ್ರತ್ಯೇಕಗೊಳಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ಹಾಗೂ ಬಾಕಿ ಇದ್ದಲ್ಲಿ ಯಾವ ಕಾಲಮಿತಿಯೊಳಗೆ ವಿಲೇವಾರಿ ಮಾಡಲಾಗುವುದು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ಮಂಜೂರಾದ ಜಮೀನುಗಳ ಪರಭಾರೆ ಅವಧಿ ನಂತರ ಜಮೀನನ್ನು ಮಾರಾಟ ಮಾಡಲು ಅವಕಾಶ ಇದೆಯೇ ಹಾಗಿದ್ದಲ್ಲಿ ಅನುಮತಿ ನೀಡುವ ಪ್ರಾಧಿಕಾರ ಯಾವುದು ; (ಸಂಪೂರ್ಣ ವಿವರ ನೀಡುವುದು) ಸದರಿ ಜಿಲ್ಲೆಗಳಲ್ಲಿ ಈವರೆವಿಗೂ ಜಮೀನು ಮಾರಾಟ ಮಾಡಲು ಅನುಮತಿ ಕೋರಿ ಬಂದ ಅರ್ಜಿಗಳು ಮತ್ತು ಅನುಮತಿ ವಿಲೇವಾರಿ ಮಾಡಲಾದ ಅರ್ಜಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಊ) ಮಂಡ್ಯ ತಾಲ್ಲೂಕು ದುದ್ದ ಹೋಬಳಿ ಕಿರಗಂದೂರು ಗ್ರಾಮದ ಸರ್ವೆ ನಂ. ೨೬ರಲ್ಲಿ ಪಹಣಿ ದುರಸ್ತಿ ಮಾಡಿಕೊಡುವಂತೆ ಸ್ವೀಕೃತವಾಗಿರುವ ಅರ್ಜಿಗಳು ಮತ್ತು ಇತ್ಯಾರ್ಥವಾದ ಅರ್ಜಿಗಳ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ಹೊಸ ಜಿಲ್ಲೆ ಮತ್ತು ಹೊಸ ತಾಲ್ಲೂಕುಗಳ ರಚನೆ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :-**

೭೯೪ (೯೬೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಜಿಲ್ಲೆ ಮತ್ತು ತಾಲ್ಲೂಕುಗಳ ಪುನರ್‌ರಚನೆ ಸಂಬಂಧ ಇದುವರೆಗೆ ಸರ್ಕಾರಕ್ಕೆ ವರದಿ ಸಲ್ಲಿಸಿರುವ ಸಮಿತಿಗಳು ಯಾವುವು ; ಈ ಸಮಿತಿಗಳ ಪ್ರಮುಖ ಶಿಫಾರಸ್ಸುಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಆಡಳಿತಾತ್ಮಕ ಹಿತದೃಷ್ಟಿಯಿಂದ ರಾಜ್ಯದಲ್ಲಿ ಹೊಸ ಜಿಲ್ಲೆ ಮತ್ತು ಹೊಸ ತಾಲ್ಲೂಕುಗಳನ್ನು ರಚಿಸಲು ಸರ್ಕಾರ ಉದ್ದೇಶಿಸಿದೆಯೇ ; (ವಿವರ ನೀಡುವುದು)

(ಇ) ಹೊಸ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ರಚನೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ/ ಮನವಿಗಳು ಸ್ವೀಕೃತವಾಗಿವೆಯೇ ; (ಮಾಹಿತಿ ನೀಡುವುದು)

(ಈ) ಹೊಸ ತಾಲ್ಲೂಕುಗಳನ್ನು ರಚಿಸಲು ಇರುವ ಮಾರ್ಗಸೂಚಿಗಳೇನು ;

(ಉ) ಜನಸಂಖ್ಯೆ, ಶಿಕ್ಷಣ, ವಾಣಿಜ್ಯ ದೃಷ್ಟಿಯಿಂದಲೂ ಹೆಚ್ಚಿನ ಬೆಳವಣಿಗೆ ಕಂಡು ವೇಗವಾಗಿ ಬೆಳೆಯುತ್ತಿರುವ ಮಂಡ್ಯ ಜಿಲ್ಲೆಯ ಭಾರತಿನಗರ (ಕೆ.ಎಂ.ದೊಡ್ಡಿ)ವನ್ನು ತಾಲ್ಲೂಕು ಕೇಂದ್ರವನ್ನಾಗಿ ರಚಿಸುವ ಕುರಿತು ಸರ್ಕಾರದ ನಿಲುವೇನು ?

## ಬರ ಪರಿಸ್ಥಿತಿಯಿಂದ ರೈತರಿಗೆ ಉಂಟಾದ ನಷ್ಟದ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :-**

೭೯೫ (೯೬೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಈ ಬಾರಿ ಉಂಟಾದ ಬರ ಪರಿಸ್ಥಿತಿಯಿಂದ ರೈತರಿಗೆ ಉಂಟಾದ ನಷ್ಟ ಎಷ್ಟು;

(ಆ) ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಎಷ್ಟು ಅನುದಾನವನ್ನು ಬರಪೀಡಿತ ಪ್ರದೇಶಗಳ ರೈತರಿಗೆ ಬಿಡುಗಡೆ ಮಾಡಿದೆ ;

(ಇ) ಬರದಿಂದ ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ಧನ ನೀಡಲಾಗಿದೆಯೇ ; ಹಾಗಿದ್ದಲ್ಲಿ ಪಾವತಿಸಿದ ಪರಿಹಾರ ಧನದ ಒಟ್ಟು ಮೊತ್ತ ಎಷ್ಟು ;

(ಈ) ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿ ಬರ ಪರಿಸ್ಥಿತಿಯಿಂದ ಉಂಟಾದ ನಷ್ಟ ಎಷ್ಟು; ಎಷ್ಟು ಮಂದಿ ರೈತರಿಗೆ ಪರಿಹಾರ ನೀಡಲಾಗಿದೆ ಬಿಡುಗಡೆ ಮಾಡಿದ, ವಿತರಿಸಿದ ಮತ್ತು ಪಾವತಿಸಲು ಬಾಕಿ ಇರುವ ಪರಿಹಾರ ಮೊತ್ತ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ಸದರಿ ಜಿಲ್ಲೆಗಳಲ್ಲಿ ಕಳೆದ ೧೫ ತಿಂಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು ; ವಿತರಿಸಿದ ಪರಿಹಾರ ಮೊತ್ತ ಎಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಇತರೆ ಇಲಾಖೆಗಳ ಬೋಧಕರ ನೇಮಕಾತಿಯ ವಯೋಮಿತಿಯಲ್ಲಿ ವ್ಯತ್ಯಾಸದ ಬಗ್ಗೆ

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :-**

೭೯೬ (೯೬೫) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಬೋಧಕ ವರ್ಗದ ನೇಮಕಾತಿಗೆ ಸಂಬಂಧಿಸಿದಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಇನ್ನಿತರೆ ಇಲಾಖೆಗಳಲ್ಲಿ (ಪ್ರಾಥಮಿಕ, ಪ್ರೌಢ ಶಿಕ್ಷಣ, ಪದವಿ ಪೂರ್ವ, ಉನ್ನತ ಶಿಕ್ಷಣ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳು ನಿಗದಿಪಡಿಸಿರುವ ವಿವಿಧ ವರ್ಗಗಳ ಅಭ್ಯರ್ಥಿಗಳ ವಯೋಮಿತಿಯಲ್ಲಿ ವ್ಯತ್ಯಾಸ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇತರೆ ಇಲಾಖೆಗಳಲ್ಲಿ ಬೋಧಕ ವರ್ಗದ ನೇಮಕಾತಿಗೆ ಏಕರೂಪದ ವಯೋಮಿತಿ ನಿರ್ದಿಷ್ಟಪಡಿಸಿರುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಪಾಲಿಸದಿರುವುದು ಕಾರಣವೇನು ;

(ಇ) ಇದರಿಂದ ಗರಿಷ್ಠ ಸಂಖ್ಯೆಯ ಹಿರಿಯ ಅಭ್ಯರ್ಥಿಗಳಿಗೆ ಅನ್ಯಾಯವಾಗಲಿದ್ದು ನೇಮಕಾತಿ ಪ್ರಕ್ರಿಯೆಯಿಂದ ವಂಚಿತರಾಗಿದ್ದರಿಂದ ಈ ವ್ಯತ್ಯಾಸ ಸರಿಪಡಿಸಿ ಹಿರಿಯ ಅಭ್ಯರ್ಥಿಗಳಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಸರ್ಕಾರ ಕ್ರಮ ವಹಿಸಬಾರದೇಕೆ ಈ ನಿಟ್ಟಿನಲ್ಲಿ ಸರ್ಕಾರದ ನಿಲುವೇನು ?

## ಕರ್ನಾಟಕ ರಾಜ್ಯದಲ್ಲಿ ಟೋಲ್ ಕೇಂದ್ರಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೯೭ (೯೮೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಶುಲ್ಕ ವಸೂಲಿ ಮಾಡುವ ಟೋಲ್ ಕೇಂದ್ರಗಳಿವೆ ;ಎಷ್ಟು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಎಷ್ಟೆಷ್ಟು ಅಂತರದಲ್ಲಿ ಟೋಲ್ ಕೇಂದ್ರಗಳಿವೆ ; (ಜಿಲ್ಲಾವಾರು ವಿವರ, ಹೆಸರು ಸಹಿತ ನೀಡುವುದು)

(ಆ) ಶುಲ್ಕ ವಸೂಲಿ ಟೋಲ್ ಕೇಂದ್ರಗಳನ್ನು ಸ್ಥಾಪಿಸಲು ಹಾಗೂ ನಿರ್ವಹಿಸಲು ಇರುವ ನಿಯಮಾವಳಿಗಳು ಮತ್ತು ಮಾನದಂಡಗಳು ಯಾವುವು ; ಅವುಗಳನ್ನು ಯಾವಾಗ ರಚಿಸಲಾಗಿದೆ ಹಾಗೂ ಅವುಗಳಿಗೆ ಯಾವಾಗ ತಿದ್ದುಪಡಿ ಮಾಡಲಾಗಿದೆ ; (ವಿವರ ನೀಡುವುದು)

(ಇ) ರಾಜ್ಯದಲ್ಲಿ ಪ್ರಸ್ತುತ ಯಾವ್ಯಾವ ವಾಹನಗಳಿಗೆ ಎಷ್ಟೆಷ್ಟು ದರ ನಿಗದಿಪಡಿಸಲಾಗಿದೆ ; ಯಾವ ರೀತಿಯ ವಾಹನಗಳಿಗೆ ರಿಯಾಯಿತಿ ಇದೆ ; ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಟೋಲ್ ಮೂಲಕ ವಸೂಲಿಯಾದ ಒಟ್ಟು ಮೊತ್ತವೆಷ್ಟು ; (ವಿವರ ನೀಡುವುದು)

(ಈ) ಶುಲ್ಕ ವಸೂಲಿ ಟೋಲ್ ಕೇಂದ್ರಗಳಲ್ಲಿ ಟೋಲ್ ನಿಯಮಾನುಸಾರ ಇರಬೇಕಾದ ಸೌಲಭ್ಯಗಳು ಯಾವುವು ; ಈಗ ರಾಜ್ಯದಲ್ಲಿ ಇರುವ ಸೌಲಭ್ಯಗಳು ಯಾವುವು ; (ಪಟ್ಟಿ ಸಹಿತ ವಿವರ ನೀಡುವುದು)

(ಉ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಇರುವ ಟೋಲ್ ಕೇಂದ್ರಗಳ ಸಂಖ್ಯೆ ಎಷ್ಟು; ಒಂದು ಟೋಲ್ ಕೇಂದ್ರದಿಂದ ಇನ್ನೊಂದು ಟೋಲ್ ಕೇಂದ್ರಕ್ಕೆ ಇರುವ ಅಂತರವೆಷ್ಟು ; ನಿಯಮಾವಳಿಯಂತೆ ಇರಬೇಕಾದ ಅಂತರವೆಷ್ಟು ; ಈ ಟೋಲ್ ಕೇಂದ್ರಗಳಲ್ಲಿ ಪ್ರಸ್ತುತ ಇರುವ ಸೌಲಭ್ಯಗಳು ಯಾವುವು ; (ವಿವರ ನೀಡುವುದು)

(ಊ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಇರುವ ಟೋಲ್ ಕೇಂದ್ರಗಳ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿವೆಯೇ ; ಬಂದಿದ್ದರೆ ಯಾವುವು ; ಈ ದೂರುಗಳ ಬಗ್ಗೆ ಪರಿಹಾರ ಕ್ರಮಗಳನ್ನು ಜರುಗಿಸಲಾಗಿದೆಯೇ ? (ವಿವರ ನೀಡುವುದು)

## ಕರ್ನಾಟಕ ರಾಜ್ಯರಸ್ತೆ ಸಾರಿಗೆ ನಿಗಮ ಹಾಗೂ ಬಸ್ ನಿಲ್ದಾಣ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೯೮ (೯೮೮) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಹೊಸದಾಗಿ ತಾಲ್ಲೂಕು ಕೇಂದ್ರ ಬಸ್ ನಿಲ್ದಾಣ ಸ್ಥಾಪಿಸಿ ಕಾರ್ಯಾರಂಭಗೊಳಿಸಲು ಇರುವ ನಿಯಮಗಳೇನು ; ಪ್ರಸ್ತುತ ಎಷ್ಟು ಹೊಸ ಬಸ್ಸು ನಿಲ್ದಾಣಗಳ ನಿರ್ಮಾಣಕ್ಕೆ ಪ್ರಸ್ತಾವನೆ ಸರಕಾರದ ಮುಂದಿದೆ ; (ವಿವರ ನೀಡುವುದು)

(ಆ) ಉಡುಪಿ ಜಿಲ್ಲೆ ಬೈಂದೂರು ತಾಲ್ಲೂಕು ಕೇಂದ್ರ ಬಸ್ ನಿಲ್ದಾಣ ನಿರ್ಮಾಣ ಯೋಜನೆಯ ಯೋಜನಾ ಅಂದಾಜು ಹಾಗೂ ಟೆಂಡರ್ ಮೊತ್ತವೆಷ್ಟು ; ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರು ಯಾರು ಈವರೆಗೆ ಗುತ್ತಿಗೆದಾರರಿಗೆ ಪಾವತಿಸಿದ ಹಾಗೂ ಪಾವತಿಸಲು ಬಾಕಿಯಿರುವ ಮೊತ್ತವೆಷ್ಟು ; ಈವರೆಗೆ ಈ ಕಾಮಗಾರಿ ಪೂರ್ಣಗೊಳಿಸಿ ನಿಲ್ದಾಣವನ್ನು ಸಾರ್ವಜನಿಕ ಸೇವೆಗೆ ಮುಕ್ತಗೊಳಿಸದಿರಲು ಕಾರಣವೇನು ; ಈ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಿ ಪ್ರಯಾಣಿಕರ ಬಳಕೆಗೆ ಮುಕ್ತಗೊಳಿಸಲಾಗುವುದು ;

(ಇ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯರಸ್ತೆ ಸಾರಿಗೆ ಸಂಸ್ಥೆಯ ಎಷ್ಟು ಬಸ್ಸು ನಿಲ್ದಾಣಗಳಿವೆ ಮತ್ತು ಯಾವ ಯಾವ ನಿಲ್ದಾಣಗಳಿಗೆ ಸರಕಾರಿ ಬಸ್ಸುಗಳು ಬರುತ್ತವೆ ಇನ್ನು ಎಷ್ಟು ನಗರಗಳಿಗೆ ಸರಕಾರಿ ಬಸ್ಸು ನಿಲ್ದಾಣ ಅಗತ್ಯವಿದೆ ಈ ಅಗತ್ಯ ಇರುವ ಬಸ್ ನಿಲ್ದಾಣಗಳನ್ನು ನಿರ್ಮಿಸಲು ಸರಕಾರ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಈ) ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಹೊಸ ಮಾರ್ಗಗಳು ಅಭಿವೃದ್ಧಿಯಾಗಿದ್ದು ಅವುಗಳಿಗೆ ಬಸ್ಸಿನ ಕೊರತೆಯಿರುವ ಬಗ್ಗೆ ಸರಕಾರದ ಗಮನಕ್ಕೆ ಬಂದಿದೆಯೇ ; ಈ ಕುರಿತು ಮಂಗಳೂರು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಇಲಾಖೆಯೊಂದಿಗೆ ವಿಚಾರ ವಿನಿಮಯ ನಡೆಸಿದೆಯೇ ; ಈ ಕುರಿತು ಸರಕಾರದ ಪರಿಹಾರ ಕ್ರಮಗಳೇನು ? (ವಿವರ ನೀಡುವುದು)

# ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆ ಅಧೀನದಲ್ಲಿ ಬರುವ ರಸ್ತೆಗಳ ನಿರ್ವಹಣೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೯೯ (೯೮೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆ ಅಧೀನದಲ್ಲಿ ಬರುವ ರಸ್ತೆಗಳು ಯಾವುವು ; ಅವುಗಳ ಉದ್ದ ಎಷ್ಟು ರಸ್ತೆಗಳ ನಿರ್ವಹಣೆಗೆ ಯಾವ ಲೆಕ್ಕ ಶೀರ್ಷಿಕೆಯಡಿ ಅನುದಾನ ಒದಗಿಸಲಾಗುತ್ತಿದೆ ; ವಾರ್ಷಿಕ ನಿರ್ವಹಣಾ ಅನುದಾನದ ಮೊತ್ತವೆಷ್ಟು ; ನಿರ್ವಹಣೆಗಿರುವ ಮಾನದಂಡವೇನು ವಿವರ ನೀಡುವುದು ;

(ಆ) ಲೋಕೋಪಯೋಗಿ ಇಲಾಖೆಯು ವೆಚ್ಚ ಮಾಡುವ ರಸ್ತೆ ನಿರ್ವಹಣೆಯಲ್ಲಿ ಯಾವೆಲ್ಲ ಕಾಮಗಾರಿಗಳು ಮತ್ತು ನಿರ್ವಹಣೆಗಳು ಒಳಗೊಂಡಿರುತ್ತವೆ ಸೇತುವೆ ರಸ್ತೆ ಅಂಚು ನಿರ್ವಹಣೆ, ಅಪಾಯಕಾರಿ ಮಣ್ಣು ದಿಬ್ಬ, ಮರ, ಇತ್ಯಾದಿ ತೆರವುಗೊಳಿಸುವಿಕೆ ಒಳಗೊಂಡಿದೆಯೇ ; (ವಿವರ ನೀಡುವುದು)

(ಇ) ದಕ್ಷಿಣ-ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ರಸ್ತೆ ನಿರ್ವಹಣೆಗಾಗಿ ಕಳೆದ ಮೂರು ವರ್ಷಗಳಲ್ಲಿ ವೆಚ್ಚ ಮಾಡಿದ ಮೊತ್ತವೆಷ್ಟು; ನಿರ್ವಹಿಸಿದ ಏಜೆನ್ಸಿ ಯಾವುದು ಈ ಜಿಲ್ಲೆಗಳ ಯಾವ್ಯಾವ ರಸ್ತೆಗಳನ್ನು ನಿರ್ವಹಿಸಲಾಗಿದೆ ; (ಉಪ ವಿಭಾಗವಾರು, ರಸ್ತೆವಾರು ಮಾಹಿತಿ ನೀಡುವುದು)

(ಈ) ದಕ್ಷಿಣ-ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಲೋಕೋಪಯೋಗಿ ರಸ್ತೆಗಳ ಇಕ್ಕೆಲಗಳಲ್ಲಿ ರಸ್ತೆ ಪರಿಮಿತಿ ಅತಿಕ್ರಮಿಸಿ ಕಟ್ಟಡ ನಿರ್ಮಾಣ ಮಾಡಿರುವುದರಿಂದ ಹಾಗೂ ಉಭಯ ದಿಕ್ಕುಗಳಲ್ಲಿ ಮಣ್ಣು

ತುಂಬಿಸಿ ಎತ್ತರಗೊಳಿಸಿರುವುದರಿಂದ ಮಳೆಗಾಲದಲ್ಲಿ ರಸ್ತೆಯಲ್ಲಿ ನೀರು ಸಂಗ್ರಹವಾಗಿ ರಸ್ತೆ ಬೇಗ ಹಾಳಾಗುತ್ತಿದ್ದು, ಇದರಿಂದ ಅನುದಾನ ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇಲಾಖಾ ವಾರ್ಷಿಕ ತಪಾಸಣೆಯಲ್ಲಿ ಇಂತಹ ಎಷ್ಟು ಪ್ರಕರಣಗಳನ್ನು ಗುರುತಿಸಲಾಗಿದೆ ; (ಮಾಹಿತಿ ನೀಡುವುದು)

(ಉ) ಲೋಕೋಪಯೋಗಿ ಇಲಾಖಾ ವ್ಯಾಪ್ತಿಯ ರಸ್ತೆಗಳ ಬಗ್ಗೆ ದಾಖಲಾದ ದೂರುಗಳೆಷ್ಟು ; ಲೋಕೋಪಯೋಗಿ ಇಲಾಖಾ ವ್ಯಾಪ್ತಿಯ ರಸ್ತೆಗಳ ಬದಿಯಲ್ಲಿರುವ ಅಡೆ ತಡೆಗಳ ತೆರವು ಮಾಡುವ ಜವಾಬ್ದಾರಿಯಾರದ್ದು, ಈ ಬಗ್ಗೆ ಪಿಡಬ್ಲ್ಯೂಡಿ ಇಲಾಖಾಧಿಕಾರಿಗಳು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಪತ್ರ ಬರೆದು ರಸ್ತೆ ನಿರ್ವಹಣೆ ಮಾಡಲು ಅಡೆ ತಡೆ ತೆರವು ಮಾಡಲು ಸೂಚಿಸುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ ? (ವಿವರ ನೀಡುವುದು)

## ಪಾರಂಪರಿಕ ಕಟ್ಟಡ ಪುನರ್ ನಿರ್ಮಾಣದ ಕುರಿತು

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೦೦ (೯೫೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರಿನಲ್ಲಿರುವ ಪಾರಂಪರಿಕ ಕಟ್ಟಡಗಳು ಯಾವುವು ;

(ಆ) ಇವುಗಳಲ್ಲಿ ಫೈರ್‌ಬ್ರಿಗೇಡ್, ಲ್ಯಾಂಡ್ ಸ್ಟೋನ್ ಬಿಲ್ಡಿಂಗ್‌ಗಳು, ಕೆ.ಆರ್. ವಾರುಕಟ್ಟೆ ಇತ್ಯಾಧಿ ಕಟ್ಟಡಗಳು ಪೂರ್ಣ ಶಿಥಿಲಗೊಂಡಿರುವುದು ಹಾಗೂ ಬಿದ್ದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ; ಬಂದಿದ್ದಲ್ಲಿ, ಮಾಹಿತಿ ಒದಗಿಸುವುದು ;

(ಇ) ಇವುಗಳನ್ನು ಕೂಡಲೇ ಪುನರ್ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಭೀಕರ ಬರಗಾಲದಿಂದ ರಾಜ್ಯದ ರೈತರು ಸಂಕಷ್ಟಗೊಳಗಾಗಿರುವ ಕುರಿತು

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೦೧ (೯೫೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ವರ್ಷದ ಭೀಕರ ಬರಗಾಲದಿಂದ ರಾಜ್ಯದ ರೈತರು ಯಾವ ಯಾವ ಸಂಕಷ್ಟ ಹಾಗೂ ತೊಂದರೆಗಳನ್ನು ಅನುಭವಿಸಿರುತ್ತಾರೆ ; (ಪೂರ್ಣ ಮಾಹಿತಿ ನೀಡುವುದು)

(ಆ) ಮೇಲ್ಕಂಡ ನಷ್ಟಗಳನ್ನು ತುಂಬಿಕೊಡಲು ಸರ್ಕಾರ ಈವರೆವಿಗೆ ಕೈಗೊಂಡಿರುವ ಕ್ರಮಗಳಾವುವು ;

(ಇ) ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ ವರ್ಷ ಬರ ಪರಿಹಾರಕ್ಕಾಗಿ ಯಾವ ಯಾವ ಬಾಬ್ತುಗಳಿಗೆ ಎಷ್ಟೆಷ್ಟು ಹಣವನ್ನು ಮಂಜೂರು ಮಾಡಲಾಗಿದೆ ಹಾಗೂ ಸದರಿ ಜಿಲ್ಲೆಯ ರೈತರಿಗೆ ನೀಡಲು ಬಾಕಿ ಇರುವ ಪರಿಹಾರದ ಮೊತ್ತವೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಕೂಡಲೇ ಸದರಿ ಪರಿಹಾರ ಒದಗಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳಾವುವು ?

## ಜಿಲ್ಲಾಧಿಕಾರಿಗಳ ಕಟ್ಟಡಗಳು ಬಿದ್ದಿರುವ ಬಗ್ಗೆ

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೦೨ (೯೫೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರಿನಲ್ಲಿರುವ ಜಿಲ್ಲಾಧಿಕಾರಿಗಳಿದ್ದ ಕಟ್ಟಡವು ಎಷ್ಟು ವರ್ಷಗಳಿಂದ ಖಾಲಿ ಬಿದ್ದಿರುತ್ತದೆ ;

(ಆ) ಈ ರೀತಿ ಪಾಳು ಬಿದ್ದಿರಲು ಕಾರಣವೇನು ;

(ಇ) ಮೇಲ್ಕಂಡ ಕಟ್ಟಡವನ್ನು ಕೂಡಲೇ ಮೈಸೂರು ಮ್ಯೂಸಿಯಂ ಆಗಿ ಪರಿವರ್ತಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು ?

## ಪಶು ಆಸ್ಪತ್ರೆಗಳ ಬಗ್ಗೆ

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೦೩ (೯೫೬) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಜಾನುವಾರುಗಳ ಸಂಖ್ಯೆ ಎಷ್ಟು ; ಈ ಸಂಖ್ಯೆಗನುಗುಣವಾಗಿ ಪಶು ಆಸ್ಪತ್ರೆಗಳನ್ನು ತೆರೆಯಲಾಗಿದೆಯೇ ; ತೆರೆದಿದ್ದಲ್ಲಿ, ಪೂರ್ಣ ವಿವರ ನೀಡುವುದು ;

(ಆ) ಜಾನುವಾರುಗಳ ಆರೈಕೆಗೆ ಹಾಗೂ ತುರ್ತು ಚಿಕಿತ್ಸೆಗಾಗಿ ತಾಲ್ಲೂಕುವಾರು ಕೈಗೊಂಡಿರುವ ಕ್ರಮಗಳಾವುವು ;

(ಇ) ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ಯಾವ ಯಾವ ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಪಶು ಆಸ್ಪತ್ರೆಗಳನ್ನು ತೆರೆಯಲಾಗಿದೆ ; ಬಾಕಿ ಇರುವ ಸ್ಥಳಗಳು ಯಾವುವು ;

(ಈ) ಪ್ರತಿ ಹೋಬಳಿಗೊಂದು ಪಶು ಆಸ್ಪತ್ರೆಯನ್ನು ಕಡ್ಡಾಯವಾಗಿ ತೆರೆಯಲು ಸರ್ಕಾರ ಕೈಗೊಳ್ಳುವ ಕ್ರಮವೇನು ?

## ಪರಿಶಿಷ್ಟ ಜಾತಿ/ಪಂಗಡಗಳ ಜಮೀನು ಖರೀದಿ ನಿಯಂತ್ರಣದ ಬಗ್ಗೆ

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೦೪ (೯೫೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹೊಸಕೋಟೆ ತಾಲ್ಲೂಕಿನ ಕಸಬಾ ಹೋಬಳಿಯ ಜೋಳಪ್ಪನಹಳ್ಳಿ ಗ್ರಾಮದಲ್ಲಿನ ಪರಿಶಿಷ್ಟ ಪಂಗಡಕ್ಕೆ ಸೇರಿದ ಸರ್ವೆ ನಂ.೧೧೦/೨ನ್ನು ಸರ್ಕಾರದಿಂದ ಅನುಮತಿ ಪಡೆಯದೆ ಪರಭಾರೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಆ) ಸರ್ಕಾರದ ಅನುಮತಿ ಇಲ್ಲದೆ ಖರೀದಿಯಾಗಿರುವ ಸರ್ವೆ ನಂ. ೧೦೦/೨ರ ಜಮೀನು ಖಾತೆ ಮಾಡುವಲ್ಲಿ ಸಹಕರಿಸಿರುವ ತಾಲ್ಲೂಕು ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದೇ ; (ವಿವರ ನೀಡುವುದು)

(ಇ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜಮೀನನ್ನು ಸರ್ಕಾರದ ಅನುಮತಿ ಇಲ್ಲದೆ ಇನ್ನೂ ಮುಂದೆ ಪರಭಾರೆ ಮಾಡಲು ಸಹಕರಿಸುವ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಾಗಿ ಶಿಸ್ತುಕ್ರಮ ಜರುಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ; (ವಿವರ ನೀಡುವುದು)

(ಈ) ಸರ್ಕಾರದ ಅನುಮತಿ ಇಲ್ಲದೆ ಪರಭಾರೆಯಾಗಿರುವ ಸರ್ವೆ ನಂ.೧೧೦/೨ ಜಮೀನಿನ ಖಾತೆ ಹಾಗೂ ಜಮೀನು ನೋಂದಣಿಯನ್ನು ರದ್ದುಪಡಿಸಲು ಕ್ರಮ ಜರುಗಿಸಲಾಗುವುದೇ ಹಾಗೂ ಈ ರೀತಿ ಪರಭಾರೆ ಮಾಡಿಕೊಂಡವರ ಮೇಲೆ ಸರ್ಕಾರ ಕ್ರಮ ವಹಿಸುವ ಮೂಲಕ ಈ ರೀತಿಯ ಪ್ರಕರಣಗಳು ರಾಜ್ಯದಲ್ಲಿ ನಡೆಯದಂತೆ ಸೂಕ್ತ ಆದೇಶ ಹೊರಡಿಸಲಾಗುವುದೇ ? (ವಿವರ ನೀಡುವುದು)

# ಚಿತ್ರದುರ್ಗ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡ ರಸ್ತೆ ಮತ್ತು ಕಟ್ಟಡ ಕಾಮಗಾರಿಗಳ ಬಗ್ಗೆ

ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

೮೦೫ (೯೮೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೧ ವರ್ಷಗಳಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡಿರುವ ರಸ್ತೆ ಮತ್ತು ಕಟ್ಟಡದ ಕಾಮಗಾರಿಗಳಾವುವು ; (ಮಾಹಿತಿಯನ್ನು ಒದಗಿಸುವುದು)

(ಆ) ಈ ಅವಧಿಯಲ್ಲಿ ಜಿಲ್ಲೆಯಲ್ಲಿ ಎಷ್ಟು ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ ; ಅದರಲ್ಲಿ ಎಷ್ಟು ಕಿ.ಮೀ. ರಸ್ತೆಯನ್ನು ಹೊಸದಾಗಿ ನಿರ್ಮಿಸಲಾಗಿದೆ ಹಾಗೂ ಎಷ್ಟು ಕಿ.ಮೀ. ರಸ್ತೆಯನ್ನು ಮೇಲ್ದರ್ಜೆಗೇರಿಸಲಾಗಿದೆ ; (ಉದ್ದ ಮತ್ತು ಅಗಲದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಇ) ಮೇಲ್ಕಂಡ ಪ್ರತಿ ಕಾಮಗಾರಿಗೆ ವೆಚ್ಚ ಮಾಡಲಾದ ಹಣವೆಷ್ಟು ; ಈ ಪೈಕಿ ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರಗಳಿಂದ ಭರಿಸಿದ ಅನುದಾನ ಎಷ್ಟು ; (ಮಾಹಿತಿ ನೀಡುವುದು)

(ಈ) ಈ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರು ಯಾರು ಮತ್ತು ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗಿದೆ ; ಅಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು ? (ಸಂಪೂರ್ಣ ವಿವರ ಒದಗಿಸುವುದು)

## ಕಂದಾಯ ಇಲಾಖೆಯಲ್ಲಿ ದಾಖಲಾತಿಗಳ ದರ ಹೆಚ್ಚಿಸಿರುವ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೦೬ (೯೭೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಒಂದು ವರ್ಷದಲ್ಲಿ ಕಂದಾಯ ಇಲಾಖೆಯಿಂದ ಪಡೆದುಕೊಳ್ಳುತ್ತಿರುವ ದಾಖಲಾತಿಗಳಾವುವು ; (ಸ್ಟಾಂಪ್ ಪೇಪರ್, ಇಸಿ, ಪಹಣಿ ಮುಂತಾದ ದರದ ಪಟ್ಟಿ ವಿವರ ಒದಗಿಸುವುದು)

(ಆ) ಕಳೆದ ವರ್ಷದಿಂದ ದಾಖಲಾತಿಗಳ ದರದ ಪಟ್ಟಿಯನ್ನು ಎಷ್ಟು ಬಾರಿ ಹೆಚ್ಚಿಸಲಾಯಿತು ; (ವರ್ಷವಾರು ವಿವರ ಒದಗಿಸುವುದು)

(ಇ) ದರ ಹೆಚ್ಚಳದಿಂದ ಸಾರ್ವಜನಿಕರಿಗೆ ಉಂಟಾಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ದರ ಕಡಿತಗೊಳ್ಳಲು ಸರ್ಕಾರದ ನಿಲುವೇನು ; (ವಿವರ ಒದಗಿಸುವುದು)

(ಈ) ಸಬ್‌ರಿಜಿಸ್ಟರ್ ಕಛೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ;

(ಉ) ಕಂದಾಯ ಇಲಾಖೆಯಲ್ಲಿ ಟೆಕ್ನಿಕಲ್ ಸಮಸ್ಯೆಗಳಿಂದ ಸಾರ್ವಜನಿಕರಿಗೆ ಉಂಟಾಗುತ್ತಿರುವ ತೊಂದರೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ಒದಗಿಸುವುದು)

## ಹಾಲು ಉತ್ಪಾದಕರಿಗೆ ನೀಡುತ್ತಿರುವ ಪ್ರೋತ್ಸಾಹ ಧನದ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೦೭ (೯೭೮) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಒಕ್ಕೂಟಗಳಲ್ಲಿನ ಹಾಲು ಉತ್ಪಾದಕರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಪ್ರತ್ಯೇಕವಾದ ಮಾಹಿತಿ ನೀಡುವುದು)

(ಆ) ಸರ್ಕಾರವು ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ನೀಡಲಾಗುತ್ತಿರುವ ಪ್ರೋತ್ಸಾಹ ಧನ ಎಷ್ಟು ;

(ಇ) ಹಾಲು ಉತ್ಪಾಕರಿಗೆ ನೀಡಬೇಕಾಗಿರುವ ಪ್ರೋತ್ಸಾಹ ಧನದ ಬಾಕಿ ಮೊತ್ತವೆಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

## ವಸತಿ ಇಲಾಖೆಯಿಂದ ನಿರ್ಮಾಣ ಮಾಡಿರುವ ಮನೆಗಳ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೦೮ (೯೭೯) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೨೩-೨೪ನೇ ಸಾಲಿನಲ್ಲಿ ವಸತಿ ಇಲಾಖೆಯ ವಿವಿಧ ಯೋಜನೆಗಳ ಮುಖಾಂತರ ಮಂಜೂರಾಗಿರುವ ಮನೆಗಳ ಸಂಖ್ಯೆ ಎಷ್ಟು ; ನಿರ್ಮಾಣ ಮಾಡಿರುವ ಮನೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿರುವ ವಿವಿಧ ಕೊಳಚೆ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಾಣ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ೨೦೧೯-೨೦ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಯ ಕೊಳಚೆ ಪ್ರದೇಶಗಳಿಗೆ ಮಂಜೂರಾಗಿರುವ ಮನೆಗಳ ಸಂಖ್ಯೆ ಎಷ್ಟು ?

## "ನಮ್ಮ ಕಾರ್ಗೋ ಟ್ರಕ್" ಸೇವೆ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೮೦೯ (೮೬೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಸಾರಿಗೆ ಇಲಾಖೆ ವತಿಯಿಂದ ೨೦೨೩-೨೦೨೪ನೇ ಸಾಲಿನಲ್ಲಿ "ನಮ್ಮ ಕಾರ್ಗೋ ಟ್ರಕ್" ಸೇವೆಯನ್ನು ಪರಿಚಯಿಸಲಾಗಿದ್ದು, ಇದರ ಸೇವೆಯನ್ನು ಎಷ್ಟು ಜನರು/ ವ್ಯಾಪಾರಸ್ಥರು ಉಪಯೋಗ ಪಡೆದುಕೊಂಡಿದ್ದಾರೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಸೇವೆಯಿಂದ ರಾಜ್ಯ ಕೆ.ಎಸ್.ಆರ್.ಟಿ.ಸಿ. ಸಂಸ್ಥೆ ಎಷ್ಟು ಲಾಭ ಪಡೆದಿದೆ ಮತ್ತು ನಿರೀಕ್ಷಿತ ಲಾಭಾಂಶವನ್ನು ಕೆ.ಎಸ್.ಆರ್.ಟಿ.ಸಿ., ಸಂಸ್ಥೆಯು ಪಡೆದಿದೆಯೇ ;

(ಇ) ಪ್ರಸ್ತುತ ೨೦೨೪-೨೦೨೫ನೇ ಸಾಲಿನಲ್ಲಿ ಈ ಸೇವೆಯನ್ನು ಯಾವ ಯಾವ ಪ್ರದೇಶಗಳಲ್ಲಿ ವಿಸ್ತರಿಸಲಾಗುವುದು ; (ಮಾಹಿತಿ ನೀಡುವುದು)

(ಈ) ಕೆ.ಎಸ್.ಆರ್.ಟಿ.ಸಿ/ಕೆ.ಕೆ.ಎಸ್.ಆರ್.ಟಿ.ಸಿ/ಬಿ.ಎಂ.ಟಿ.ಸಿ., ನಿಗಮಗಳಿಗೆ ಸೇರಿರುವ ಒಟ್ಟು ಆಸ್ತಿ ಎಷ್ಟು ; (ನಿಗಮವಾರು ವಿವರ ನೀಡುವುದು)

(ಉ) ಈ ಆಸ್ತಿಗಳನ್ನು ಸಂಸ್ಥೆಗಳು ತನ್ನ ಕಾರ್ಯ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ಬಳಸಿಕೊಳ್ಳುತ್ತಿದೆಯೇ ;

(ಊ) ಈ ಆಸ್ತಿಗಳಿಂದ ಹೆಚ್ಚಿನ ವರಮಾನವನ್ನು ಪಡೆದುಕೊಳ್ಳಲು (Property Monetization) ಕ್ರಮ ಕೈಗೊಳ್ಳಲಾಗಿದೆಯೇ ?

## ಗೊಲ್ಲರಹಟ್ಟಿಗಳಲ್ಲಿ ವಾಸಿಸುವ ನಾಗರೀಕರಿಗೆ ಹಕ್ಕುಪತ್ರಗಳನ್ನು ನೀಡುವ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೮೧೦ (೮೬೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಹಲವು ಜಿಲ್ಲೆಗಳಲ್ಲಿ ವಿಶೇಷವಾಗಿ ತುಮಕೂರು, ಚಿತ್ರದುರ್ಗ, ಹಾಸನ, ಬಳ್ಳಾರಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಹಾವೇರಿ, ಬೆಳಗಾವಿ, ಕಲಬುರಗಿ, ಯಾದಗಿರಿ ಈ ಜಿಲ್ಲೆಗಳಲ್ಲಿರುವ ಗೊಲ್ಲರಹಟ್ಟಿಗಳಲ್ಲಿ ವಾಸಿಸುವ ನಾಗರೀಕರು ವಾಸಿಸುವ ಸ್ಥಳಗಳಿಗೆ ಸರ್ಕಾರದ ವತಿಯಿಂದ ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗಿದೆಯೇ ;

(ಆ) ಗ್ರಾಮಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ವಿವರ ನೀಡುವುದು)

## ಖಾಸಗಿ ಬಿಲ್ಡರ್‌ಗಳ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೮೧೧ (೮೬೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿ ಶೇ.೯೦ರಷ್ಟು ಖಾಸಗಿ ಬಿಲ್ಡರ್‌ಗಳು ವಸತಿ ಇಲಾಖೆ ಅಧೀನದಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ನಿಯಮಾವಳಿಗಳನ್ವಯ ತಮ್ಮ ನಿರ್ಮಾಣ ಕಂಪನಿಗಳನ್ನು

ನೋಂದಾಯಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದು, ಶೇ.೧೦ರಷ್ಟು ಖಾಸಗಿ ಬಿಲ್ಡರ್‌ಗಳು ನೋಂದಣಿಯಿಲ್ಲದೆ ವಸತಿಗಳನ್ನು ನಿರ್ಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ವತಿಯಿಂದ ಬಹುತೇಕ ಖಾಸಗಿ ಬಿಲ್ಡರ್‌ಗಳು ವಸತಿ ಮನೆಗಳನ್ನು ನಿರ್ಮಿಸಲು ಪಡೆದಿರುವ ಅನುಮೋದನೆಗಿಂತ ಹೆಚ್ಚು ಅಂತಸ್ತು/ ಮಹಡಿಗಳನ್ನು/ಮನೆಗಳನ್ನು ನಿರ್ಮಿಸಿ ಇಲಾಖೆಯ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣಗಳೇನು ;

(ಇ) ಈಗಾಗಲೇ ಪ್ರಾಧಿಕಾರದ ವತಿಯಿಂದ ಕಪ್ಪುಪಟ್ಟಿಗೆ ಸೇರಿಸಿರುವಂತಹ ಖಾಸಗಿ ಬಿಲ್ಡರ್‌ಗಳು ಅಪಾರ್ಟ್‌ಮೆಂಟ್/ವಸತಿ ಮನೆಗಳನ್ನು ನಿರ್ಮಿಸಲು ಮುಂದಾಗಿ ಸಾರ್ವಜನಿಕರ ಜೀವನದ ಜೊತೆ ಚೆಲ್ಲಾಟವಾಡುತ್ತಿರುವವರ ವಿರುದ್ಧ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ?

## ರಾಜ್ಯದಿಂದ ಕಾಶಿ ಹಾಗೂ ಇನ್ನಿತರ ಕ್ಷೇತ್ರಗಳಿಗೆ ಹೋಗುವ ಯಾತ್ರಾರ್ಥಿಗಳಿಗೆ ನೀಡುವ ಸಹಾಯಧನದ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) :-**

೮೧೨ (೧೦೦೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಿಂದ ಕೈಲಾಸ, ಮಾನಸ ಸರೋವರ, ಚಾರ್‌ಧಾಮ್ ಮತ್ತು ಕಾಶಿ ಯಾತ್ರೆಯನ್ನು ಕೈಗೊಳ್ಳುವ ಯಾತ್ರಾರ್ಥಿಗಳಿಗೆ ಸರ್ಕಾರದಿಂದ

ಸಹಾಯಧನ ನೀಡಲಾಗುತ್ತಿದೆಯೇ ; ಹಜ್ ಯಾತ್ರೆಗಳಿಗೆ ಎಷ್ಟು ಮತ್ತು ಕೈಲಾಸ, ಮಾನಸ ಸರೋವರ ಯಾತ್ರೆಗಳಿಗೆ ಎಷ್ಟು ಸಹಾಯಧನ ನೀಡಲಾಗುತ್ತದೆ ;

(ಆ) ಚಾರ್‌ಧಾಮ್ ಮತ್ತು ಕಾಶಿ ಯಾತ್ರೆಯನ್ನು ಕೈಗೊಳ್ಳುವ ಯಾತ್ರಾರ್ಥಿಗಳಿಗೆ ಎಷ್ಟು ಮೊತ್ತ ಸಹಾಯಧನವನ್ನು ನಿಗದಿಪಡಿಸಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಸಹಾಯಧನ ಪಡೆಯಲು ಇರುವ ಮಾನದಂಡಗಳೇನು ; ಆರ್ಥಿಕ ವರ್ಷ ೨೦೨೨ ರಿಂದ ೨೦೨೪ ರವರೆಗೆ ಸಹಾಯಧನ ಪಡೆದ ಒಟ್ಟು ಯಾತ್ರಾರ್ಥಿಗಳ ಸಂಖ್ಯೆ ಎಷ್ಟು ; ಅರ್ಜಿ ಸಲ್ಲಿಸಿದ ಒಟ್ಟು ಯಾತ್ರಾರ್ಥಿಗಳಿಗೆ ಸಹಾಯಧನ ನೀಡಲಾಗಿದೆಯೇ ; ಅರ್ಜಿ ಸಲ್ಲಿಸಿದ ಪೈಕಿ ಎಷ್ಟು ಅರ್ಜಿಗಳನ್ನು ಯಾವ ಕಾರಣಕ್ಕಾಗಿ ತಿರಸ್ಕರಿಸಲಾಗಿದೆ ; (ಮಾಹಿತಿ ನೀಡುವುದು)

(ಈ) ಈ ಕುರಿತು ಸಾರ್ವಜನಿಕರಿಗೆ ಜಾಹೀರಾತು ನೀಡಲಾಗುತ್ತಿದೆಯೇ; ನೀಡುತ್ತಿದ್ದಲ್ಲಿ, ಜಾಹೀರಾತು ನೀಡಿದ ಕುರಿತು ಮಾಹಿತಿ ನೀಡುವುದು ಹಾಗೂ ಮೇಲಿನ ಎಲ್ಲಾ ಅಂಶಗಳ ಕುರಿತು ಸಂಪೂರ್ಣ ಮಾಹಿತಿ ನೀಡುವುದು ;

(ಉ) ಸದರಿ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳಿಗೆ ಸರ್ಕಾರದಿಂದ ನೀಡುವ ಸಹಾಯಧನವನ್ನು ಯಾವ ಆಧಾರದ ಮೇಲೆ ನಿಗದಿಪಡಿಸಲಾಗುತ್ತದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಊ) ಸರ್ಕಾರದಿಂದ ನೀಡುವ ಸಹಾಯಧನವನ್ನು ಕಡಿತಗೊಳಿಸುವ ಮತ್ತು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಕಡಿತಗೊಳಿಸಿದ್ದಲ್ಲಿ, ಸ್ಪಷ್ಟ ಕಾರಣಗಳನ್ನು ತಿಳಿಸುವುದು ? (ಈ ಕುರಿತು ಸಂಪೂರ್ಣ ಕಾರಣದೊಂದಿಗೆ ವಿವರ ನೀಡುವುದು)

# ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯ ಶಾಲೆ ಕಾಲೇಜುಗಳ ಬೋಧಕರ ನೇಮಕಾತಿಯಲ್ಲಿ ಆಗುತ್ತಿರುವ ವಯೋಮಿತಿ ಗೊಂದಲ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) :-**

೮೧೩ (೯೧೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ಸರ್ಕಾರದ ಅಧೀನದಲ್ಲಿ ಬರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಇದುವರೆಗೆ ನಡೆದ ಬೋಧಕ ವರ್ಗದ ನೇಮಕಾತಿಯಲ್ಲಿ ವಿವಿಧ ವರ್ಗಗಳಿಗೆ ಎಂದರೆ ಎಸ್.ಸಿ/ಎಸ್.ಟಿ ಪ್ರವರ್ಗ-೧ಕ್ಕೆ ೪೦ವರ್ಷ, ೨ಎ, ೨ಬಿ, ೩ಎ, ೩ಬಿಗೆ ೩೮ ವರ್ಷ ಮತ್ತು ಸಾಮಾನ್ಯ ವರ್ಗಕ್ಕೆ ೩೫ ವರ್ಷದ (ಬೋಧಕ ವರ್ಗದ ನೇಮಕಾತಿಯಂತೆ) ನಿಗದಿಪಡಿಸಿ ಆಯ್ಕೆಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯ ಸರ್ಕಾರದ ಅಧೀನದಲ್ಲಿ ಬರುವ ವಿವಿಧ ಇಲಾಖೆಗಳಲ್ಲಿ (ಪ್ರಾಥಮಿಕ, ಪ್ರೌಢ ಶಿಕ್ಷಣ, ಪದವಿ ಪೂರ್ವ, ಉನ್ನತ ಶಿಕ್ಷಣ, ಅನುದಾನಿತ ಶಾಲೆ/ಕಾಲೇಜುಗಳು ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಘ ಸಂಸ್ಥೆಗಳ) ಬೋಧಕ ವರ್ಗವನ್ನು ನೇಮಕ ಮಾಡುವಾಗ ಅನುಸರಿಸುತ್ತಿರುವ ವಯೋಮಿತಿ ಬಗ್ಗೆ ಅಂದರೆ ಎಸ್.ಸಿ /ಎಸ್.ಟಿ ಪ್ರವರ್ಗ-೧ಕ್ಕೆ ೪೫ವರ್ಷ ಸಾಮಾನ್ಯ ವರ್ಗಕ್ಕೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಬೋಧಕ ವರ್ಗವನ್ನು ನೇಮಕ ಮಾಡುವಾಗ ವಿವಿಧ ಇಲಾಖೆಗಳಲ್ಲಿ ಅನುಸರಿಸುತ್ತಿರುವ ವಯೋಮಿತಿಯನ್ನು ಏಕೆ ಅನುಸರಿಸುತ್ತಿಲ್ಲ ; ಅನುಸರಿಸದಿರಲು ಕಾರಣವೇನು ;

(ಈ) ಒಂದು ವೇಳೆ ಬೋಧಕ ವರ್ಗವನ್ನು ಬೋಧಕೇತರ ವರ್ಗದ ನೇಮಕಾತಿಯಂತೆ ವಯೋಮಿತಿ ನಿಗದಿಮಾಡಿ ಆಯ್ಕೆ ಮಾಡಿದರೆ ಅರ್ಹ ಹಿರಿಯ ಅಭ್ಯರ್ಥಿಗಳು ಆಯ್ಕೆ ಪ್ರಕ್ರಿಯೆಯಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಬೋಧಕ ವರ್ಗದ ನೇಮಕಾತಿಯಲ್ಲಿ ಇತರ ಇಲಾಖೆಗಳಲ್ಲಿರುವಂತೆ ವಯೋಮಿತಿಯನ್ನು ಸಡಿಲಿಸಿ ಇನ್ನು ಮುಂದಿನ ಎಲ್ಲಾ ಆಯ್ಕೆ ಪ್ರಕ್ರಿಯೆಗಳನ್ನು ಮಾಡಲು ಕ್ರಮ ವಹಿಸಲಾಗುವುದೇ ?

## ರಾಜ್ಯ ಸರ್ಕಾರದ ಶಕ್ತಿ ಯೋಜನೆಯ ಬಗ್ಗೆ ಮಾಹಿತಿ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೧೪ (೮೯೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಸರ್ಕಾರದ ಶಕ್ತಿ ಯೋಜನೆಯಿಂದಾಗಿ ಗ್ರಾಮೀಣ ಭಾಗದ ಅನೇಕ ಮಾರ್ಗಗಳಲ್ಲಿ ಅಶಕ್ತರು, ಹಿರಿಯರು ಹಾಗೂ ವಿದ್ಯಾರ್ಥಿಗಳು ಬಸ್ ಪ್ರಯಾಣ ಮಾಡಲು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಶಕ್ತಿ ಯೋಜನೆಯಿಂದ ಮಹಿಳೆಯರಿಗೆ ಉಚಿತವಾಗಿದ್ದು ಒಂದು ಕಡೆಯಾದರೆ, ಇದರಿಂದ ಗ್ರಾಮೀಣ ಪ್ರದೇಶದ ಅಶಕ್ತರಿಗೆ ಹಾಗೂ ವಿದ್ಯಾರ್ಥಿಗಳಿಗೆ ಪ್ರಯಾಣಿಸಲು ತೊಂದರೆಗಳು, ಗದ್ದಲಗಳು ಹೆಚ್ಚಾಗಿರುವುದನ್ನು ತಡೆಯಲು ರಾಜ್ಯ ಸರ್ಕಾರ ಹೆಚ್ಚುವರಿ ಬಸ್ ಓಡಿಸಲು ಯೋಜನೆ ರೂಪಿಸಿದೆಯೇ ? (ವಿವರ ನೀಡುವುದು)

## ಜನ ವಸತಿ ಯೋಜನೆಯ ಕಾರ್ಯಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೧೫ (೮೬೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹುಬ್ಬಳ್ಳಿ ಮತ್ತು ಧಾರವಾಡ ಅವಳಿ ನಗರದ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದಲ್ಲಿ ಎಷ್ಟು ಜನ ವಸತಿ ಯೋಜನೆಯನ್ನು ಪ್ರಾರಂಭಿಸಲಾಗಿದೆ ;

(ಆ) ಈ ಜನ ವಸತಿ ಯೋಜನೆಯ ಕಾರ್ಯಕ್ರಮಗಳು ಯಾವ ಹಂತದಲ್ಲಿವೆ ;

(ಇ) ಜನ ವಸತಿ ಯೋಜನೆಯ ಕಾರ್ಯಗಳು ನಿಧಾನಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ?

## ತಹಶೀಲ್ದಾರರ ಕಛೇರಿಯಲ್ಲಿನ ಅಧಿಕಾರಿಗಳು ತಪ್ಪುಗಳನ್ನು ಸೃಷ್ಟಿಸಿ ಸಾರ್ವಜನಿಕರಿಗೆ ತೊಂದರೆಯ ಬಗ್ಗೆ

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) :-**

೮೧೬ (೯೪೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತಹಶೀಲ್ದಾರರ ಕಛೇರಿಯುಲ್ಲಿ ಪ್ರಕರಣ ಬಂದ ಒಂದು ತಿಂಗಳೊಳಗಾಗಿ ಸಾರ್ವಜನಿಕರ ಪ್ರಕರಣವನ್ನು ಇತ್ಯಾರ್ಥ ಮಾಡಲು ಸರ್ಕಾರ ಸೂಚನೆ ಇದ್ದರೂ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಅಧಿಕಾರಿಗಳು ಬೇಕೆಂತಲೇ ತಪ್ಪುಗಳನ್ನು ಸೃಷ್ಟಿಸಿ, ಸಾರ್ವಜನಿಕರನ್ನು ಕಛೇರಿಗೆ ಅಲೆದಾಡುವಂತೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ಸರ್ಕಾರ ಏನು ಕ್ರಮ ಕೈಗೊಂಡಿದೆ ?

## ಮುಜರಾಯಿ ದೇವಾಲಯಗಳ ಆಸ್ತಿ ಕಬಳಿಸಿರುವ ಬಗ್ಗೆ

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) :-**

೮೧೭ (೯೪೨) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಮುಜರಾಯಿ ದೇವಸ್ಥಾನಗಳಿಗೆ ಸಂಬಂಧಿಸಿದ ಆಸ್ತಿಗಳನ್ನು ಅಲ್ಲಿನ ಅರ್ಚಕರು ಹಾಗೂ ಪ್ರಭಾವಿಗಳು ಅಕ್ರಮವಾಗಿ ತಮ್ಮ ಹೆಸರಿಗೆ ನೋಂದಾಯಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಅಕ್ರಮವಾಗಿ ನೊಂದಾಯಿಸಿಕೊಂಡಿರುವ ಪ್ರಕರಣಗಳೆಷ್ಟು ; (ವಿವರ ನೀಡುವುದು)

(ಇ) ದೇವಸ್ಥಾನಗಳ ಆಸ್ತಿಯನ್ನು ಅಕ್ರಮವಾಗಿ ನೊಂದಾಯಿಸಿ ಕೊಳ್ಳುವುದನ್ನು ತಪ್ಪಿಸಲು ಸರ್ಕಾರ ಹೊಸ ಕಾನೂನು ಜಾರಿಗೊಳಿಸಲು ಕ್ರಮ ಕೈಗೊಳ್ಳುವುದೇ ?

## ವಾಯುವ್ಯ ರಸ್ತೆ ಸಾರಿಗೆ ನಿಗಮಕ್ಕೆ ಮಂಜೂರಾದ ಬಸ್ಸುಗಳ ಬಗ್ಗೆ

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) :-**

೮೧೮ (೯೪೩) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಾಯುವ್ಯ ರಸ್ತೆ ಸಾರಿಗೆ ನಿಗಮವು ಎಷ್ಟು ಹೊಸ ಬಸ್ಸುಗಳಿಗಾಗಿ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಿದೆ ;

(ಆ) ಸಲ್ಲಿಸಿರುವ ಬೇಡಿಕೆಯನುಗುಣವಾಗಿ ಇದುವರೆಗೂ ಎಷ್ಟು

ಬಸ್ಸುಗಳನ್ನು ಮಂಜೂರು ಮಾಡಲಾಗಿದೆ ; ಎಷ್ಟು ಬಾಕಿ ಇವೆ ; (ವಿವರ ನೀಡುವುದು)

(ಇ) ಯಾವ ಕಾಲಮಿತಿಯೊಳಗಾಗಿ ಬೇಡಿಕೆಯ ಎಲ್ಲಾ ಬಸ್ಸುಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು ?

## ವಿಜಯಪುರ ಜಿಲ್ಲೆಯಲ್ಲಿರುವ ಪಶು ಆಸ್ಪತ್ರೆಗಳ ಬಗ್ಗೆ

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) :-**

೮೧೯ (೯೪೪) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿಜಯಪುರ ಜಿಲ್ಲೆಯಲ್ಲಿ ಎಷ್ಟು ಪಶು ಆಸ್ಪತ್ರೆಗಳಿವೆ; ಅವುಗಳಲ್ಲಿ ಎಷ್ಟು ಹುದ್ದೆಗಳು ಮಂಜೂರಾಗಿವೆ ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಎಷ್ಟು ಹುದ್ದೆಗಳು ಭರ್ತಿಯಾಗಿವೆ; ಎಷ್ಟು ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇವೆ; ಯಾವ ಕಾಲಮಿತಿಯೊಳಗಾಗಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ; (ವಿವರ ನೀಡುವುದು)

(ಇ) ಹೊಸದಾಗಿ ಜಿಲ್ಲೆಯಲ್ಲಿ ಪಶು ಆಸ್ಪತ್ರೆ ಪ್ರಾರಂಭಿಸಲು ಸರ್ಕಾರಕ್ಕೆ ಬೇಡಿಕೆ ಬಂದಿದೆಯೇ; ಬಂದಿದ್ದಲ್ಲಿ, ಹೊಸ ಪಶು ಆಸ್ಪತ್ರೆಗಳನ್ನು ಯಾವಾಗ ಮಂಜೂರು ಮಾಡಲಾಗುವುದು ?

## ೨೦೨೩-೨೪ನೇ ಸಾಲಿನಲ್ಲಿ ವಿಜಯಪುರ ಜಿಲ್ಲೆಗೆ ಮಂಜೂರಾದ ಮನೆಗಳ ಬಗ್ಗೆ

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) :-**

೮೨೦ (೯೪೫) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೨೩-೨೪ನೇ ಸಾಲಿನಲ್ಲಿ ವಿಜಯಪುರ ಜಿಲ್ಲೆಗೆ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಸಾಲಿನಲ್ಲಿ ಎಷ್ಟು ಫಲಾನುಭವಿಗಳು ಮನೆಗಾಗಿ ಅರ್ಜಿ ಸಲ್ಲಿಸಿದ್ದಾರೆ ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಜಿಲ್ಲೆಯ ಎಲ್ಲಾ ನಿರ್ವಸತಿಗರಿಗೆ ಮನೆ ಮಂಜೂರು ಮಾಡಲು ಈ ಸಾಲಿನಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

## ಕಾವೇರಿ ೨.೦ ತಂತ್ರಾಶಕ್ಕೆ ಸರ್ವರ್ ಡೌನ್ ಸಮಸ್ಯೆಯಿಂದ ಆಗುತ್ತಿರುವ ತೊಂದರೆ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :-**

೮೨೧ (೮೭೧+೮೭೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕಾವೇರಿ ೨.೦ ತಂತ್ರಾಂಶದ ಸಮಸ್ಯೆಯಿಂದಾಗಿ ಋಣಭಾರ ಪ್ರಮಾಣ ಪತ್ರ (ಇಸಿ) ವಿತರಣೆ ಪ್ರಕ್ರಿಯೆ ಸ್ಥಗಿತಗೊಂಡು ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಾವೇರಿ ೨.೦ ತಂತ್ರಾಂಶಕ್ಕೆ ಸರ್ವರ್ ಸಮಸ್ಯೆ ಎದುರಾಗಿದ್ದು ದಿನಗಟ್ಟಲೇ ಸರ್ವರ್ ಡೌನ್ ಪರಿಣಾಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಸ್ತಿ ನೋಂದಣಿ ಪ್ರಕ್ರಿಯೆ ವಾರಗಟ್ಟಲೇ ವಿಳಂಭವಾಗಿ ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಸರ್ವರ್ ಸಮಸ್ಯೆಯಿಂದಾಗಿ ಕಾವೇರಿ ೨.೦ ತಂತ್ರಾಂಶದಲ್ಲಿ ಪ್ರತಿದಿನ ಒಂದಿಲ್ಲೊಂದು ಸಮಸ್ಯೆ ಎದುರಾಗುತ್ತಿದ್ದು, ತುರ್ತು ಕಾರಣಕ್ಕಾಗಿ ಜಾಗ ಮಾರಾಟ ಮಾಡಲಾಗದೇ ಹಾಗೂ ಹೊರ ರಾಜ್ಯ ಹಾಗೂ ಹೊರ ದೇಶಗಳಿಗೆ ಹೋಗುವವರು ಸಕಾಲದಲ್ಲಿ ಆಸ್ತಿ ನೋಂದಣಿ ಮಾರಾಟ ಮಾಡಲಾಗದೇ ಇಕ್ಕಟ್ಟಿಗೆ ಸಿಲುಕಿದ್ದು ಈ ಜನರಿಗೆ ಸಾಕಷ್ಟು ತೊಂದರೆಯಾಗುತ್ತಿದ್ದರೂ ಸಮಸ್ಯೆ ಬಗೆಹರಿಸಲು ಸರ್ಕಾರ ಇದುವರೆಗೆ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣಗಳೇನು ;

(ಈ) ಯಾವ ಕಾಲಮಿತಿಯೊಳಗೆ ಕಾವೇರಿ ೨.೦ ತಂತ್ರಾಂಶಕ್ಕೆ ಪದೇ ಪದೇ ತಲೆದೋರುತ್ತಿರುವ ಸರ್ವರ್ ಡೌನ್ ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸಿ, ಸಾರ್ವಜನಿಕರು ತಮ್ಮ ವ್ಯವಹಾರಗಳನ್ನು ಯಾವುದೇ ಸಮಸ್ಯೆ ಮತ್ತು ವಿಳಂಬವಿಲ್ಲದೇ ಮಾಡುವಂತಾಗಲು ಕ್ರಮ ವಹಿಸಲಾಗುವುದು ?

## ರಾಜ್ಯದ ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ನೋಂದಣಿ ಪ್ರಕ್ರಿಯೆ ಅನಗತ್ಯ ವಿಳಂಬ ಆಗುತ್ತಿರುವ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :-**

೮೨೨ (೮೭೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಸಬ್ ರಿಜಿಸ್ಟ್ರಾರ್ ಕಛೇರಿಗಳಿಗೆ ದಸ್ತಾವೇಜುಗಳ ನೋಂದಣಿಗೆ ಬರುವವರಿಗೆ ತಂತ್ರಾಂಶದ ಸಮಸ್ಯೆ ಅನಗತ್ಯ ಹಾಗೂ ಲಭ್ಯವೇ ಇಲ್ಲದ ಹಲವಾರು ದಾಖಲಾತಿಗಳನ್ನು ಒದಗಿಸಬೇಕಾದ ಅನಿವಾರ್ಯತೆ ಟೈಮ್ ಸ್ಲಾಟ್ ಜಾರಿಯಲ್ಲಿ ಗೊಂದಲ ನೋಂದಣಿ ಪೂರ್ವ ಸ್ವಯಂಚಾಲಿತ ಆಡಿಟ್ ಪದ್ಧತಿ

ಅಳವಡಿಕೆಯ ಕಾರಣ ಹಾಗೂ ಇನ್ನೂ ಹಲವಾರು ಅವೈಜ್ಞಾನಿಕ ನಿಯಮಗಳಿಂದ ನಿಗದಿತ ಸಮಯದೊಳಗೆ ನೋಂದಣಿ ಪ್ರಕ್ರಿಯೆ ಮುಗಿಯದೆ ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಪ್ರತಿದಿನ ಒಂದಿಲ್ಲೊಂದು ಸಮಸ್ಯೆ ಎದುರಾಗುತ್ತಿದ್ದು, ಜನರಿಗೆ ಸಾಕಷ್ಟು ತೊಂದರೆಯಾಗುತ್ತಿದ್ದರೂ, ಸಮಸ್ಯೆ ಬಗೆಹರಿಸಲು ಮತ್ತು ಜನಸ್ನೇಹಿ ಸರಾಗ ಹಾಗೂ ವಿಳಂಬರಹಿತ ನೋಂದಣಿ ಪ್ರಕ್ರಿಯೆಗೆ ಸರ್ಕಾರ ಇದುವರೆಗೆ ಯಾವ ಕ್ರಮಗಳನ್ನು ಕೈಗೊಂಡಿದೆ ;

(ಇ) ಯಾವ ಕಾಲಮಿತಿಯೊಳಗೆ ಪದೇ ಪದೇ ತಲೆದೋರುತ್ತಿರುವ ವಿವಿಧ ರೀತಿಯ ತಾಂತ್ರಿಕ ಸಮಸ್ಯೆಗಳನ್ನು ಸಂಪೂರ್ಣವಾಗಿ ಪರಿಹರಿಸುವುದು ಒದಗಿಸಬೇಕಾದ ದಾಖಲಾತಿಗಳ ಸಂಖ್ಯೆಯನ್ನು ಸೀಮಿತಗೊಳಿಸುವುದು, ಕಛೇರಿಗಳ ಮೇಲಿನ ಒತ್ತಡ ಕಡಿಮೆ ಮಾಡಲು ಅಗತ್ಯ ಮಾನವ ಸಂಪನ್ಮೂಲ ಒದಗಿಸುವುದು ಸೇರಿದಂತೆ ನೋಂದಣಿ ಪ್ರಕ್ರಿಯೆಯನ್ನು ಸರಳ ಜನಸ್ನೇಹಿ ತ್ವರಿತಗೊಳಿಸಲು ಅಗತ್ಯ ಕ್ರಮ ವಹಿಸಲಾಗುವುದೇ ?

## ಬಸ್ ಮಾರ್ಗದ ವ್ಯವಸ್ಥೆಯನ್ನು ಉಜಿರೆವರೆಗೆ ವಿಸ್ತರಿಸುವ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :-**

೮೨೩ (೮೭೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಜಿಲ್ಲೆಯ ಸಿದ್ದಬೈಲು ಪರಾರಿ ಮುಂಡ್ರುಪ್ಪಾಡಿ ಕೂಟದಕಲ್ಲು ಮಾರ್ಗವಾಗಿ ಧರ್ಮಸ್ಥಳಕ್ಕೆ ಸಂಚರಿಸುವ ಬಸ್ ಮಾರ್ಗವನ್ನು ವಿದ್ಯಾಭ್ಯಾಸಕ್ಕಾಗಿ ಉಜಿರೆಗೆ ತೆರಳುವ ವಿದ್ಯಾರ್ಥಿಗಳ

ಶೈಕ್ಷಣಿಕ ಹಿತದೃಷ್ಟಿಯಿಂದ ಉಜಿರೆವರೆಗೆ ವಿಸ್ತರಿಸಬೇಕೆಂಬ ಬೇಡಿಕೆ ತುಂಬಾ ದಿನದಿಂದ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಧರ್ಮಸ್ಥಳದವರೆಗೆ ಮಾತ್ರ ಇರುವ ಪ್ರಸ್ತುತ ಬಸ್ ಮಾರ್ಗದ ವ್ಯವಸ್ಥೆಯನ್ನು ಉಜಿರೆವರೆಗೆ ವಿಸ್ತರಿಸಲು ಇದುವರೆಗೆ ಕ್ರಮ ವಹಿಸದಿರಲು ಕಾರಣಗಳೇನು ;

(ಇ) ಗ್ರಾಮೀಣ ವಿದ್ಯಾರ್ಥಿಗಳಿಗೆ ಅತ್ಯಂತ ಅತ್ಯಾವಶ್ಯಕವಾಗಿ ಬೇಕಾಗಿರುವ ಸದರಿ ಬಸ್ ಮಾರ್ಗದ ವ್ಯವಸ್ಥೆಯನ್ನು ವಿಸ್ತರಿಸುವುದರ ಜೊತೆಗೆ ಶಾಲಾ ದಿನಗಳಲ್ಲಿ ಮಾತ್ರ ಲಭ್ಯವಿರುವ ಈ ಬಸ್ ವ್ಯವಸ್ಥೆಯನ್ನು ವರ್ಷವಿಡೀ ಒದಗಿಸುವ ಮೂಲಕ ವಿದ್ಯಾರ್ಥಿಗಳಿಗೆ ಹಾಗೂ ಗ್ರಾಮಸ್ಥರಿಗೆ ಯಾವ ಕಾಲಮಿತಿಯೊಳಗೆ ಅನುಕೂಲ ಮಾಡಿಕೊಡಲಾಗುವುದು ?

## ಘಾಟಿ ರಸ್ತೆಗಳ ಅಭಿವೃದ್ಧಿಗೆ ಮಾಸ್ಟರ್ ಪ್ಲ್ಯಾನ್ ಸೇರಿದಂತೆ ಶಾಶ್ವತ ನಿಯೋಜನೆಯನ್ನು ರೂಪಿಸುವ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೮೨೪ (೮೭೫) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಇತರೆ ಭಾಗಗಳಿಂದ ಕರಾವಳಿಗೆ ಸಂಪರ್ಕ ಕೊಂಡಿಯಾಗಿರುವ ಘಾಟಿ ರಸ್ತೆಗಳು ಪ್ರತಿ ಮಳೆಗಾಲದಲ್ಲಿ ಅಲ್ಲಲ್ಲಿ ಕುಸಿತ ಉಂಟಾಗಿ ಸಂಚಾರ ಬಂದ್ ಆಗುವುದು ಮಾಮೂಲಿಯಾಗಿದ್ದು, ಇದನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಮುನ್ನೆಚ್ಚರಿಕೆ ಕ್ರಮಗಳೇನು ;

(ಆ) ಪೂರ್ಣ ಮಳೆಗಾಲ ಆರಂಭವಾಗುವ ಮೊದಲೇ ಹೆದ್ದಾರಿ ಕುಸಿತ ಉಂಟಾಗಿ ಸಂಚಾರ ವ್ಯತ್ಯಯವಾಗುವುದನ್ನು ತಪ್ಪಿಸಲು ಈ ವರ್ಷ ಕೈಗೊಂಡಿರುವ ಸುರಕ್ಷಿತ ಕ್ರಮಗಳೇನು ;

(ಇ) ಘಾಟಿ ಪರಿಸರದಲ್ಲಿ ಬರುವ ಹೆದ್ದಾರಿಯಲ್ಲಿ ಕುಸಿತ ಉಂಟಾಗಿ ಸಂಚಾರ ವ್ಯತ್ಯಯವಾಗುತ್ತಿದ್ದರೂ ಸರ್ಕಾರ ಇದುವರೆಗೂ ಯಾವುದೇ ಮಾಸ್ಟರ್ ಪ್ಲ್ಯಾನ್ ರೂಪಿಸದಿರಲು ಕಾರಣಗಳೇನು; ೨೦೧೯ರ ಮಹಾಪ್ರವಾಹಕ್ಕೆ ಜರ್ಜರಿತವಾಗಿದ್ದ ಚಾರ್ಮಾಡಿ ಘಾಟಿ ರಸ್ತೆಯನ್ನು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸಲಾಗಿದೆಯೇ ;

(ಈ) ಅಪಾಯಕಾರಿ ಘಾಟಿ ಹೆದ್ದಾರಿ ವ್ಯಾಪ್ತಿಯಲ್ಲಿ ಸಂಚಾರ ಹಳಿ ತಪ್ಪದಂತೆ ನೋಡಿಕೊಳ್ಳಲು ಸರ್ಕಾರ ಶಾಶ್ವತ ಮತ್ತು ದೀರ್ಘಕಾಲಿಕ ಉಪಯೋಗದ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸುವುದೇ ?

## ಸ್ಥಗಿತಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕೈಗೊಂಡ ಕ್ರಮಗಳು

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೨೫ (೯೨೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೆತ್ತಿಕೊಳ್ಳಲಾಗಿರುವ ಒಟ್ಟು ಕಾಮಗಾರಿಗಳೆಷ್ಟು ; ಹಾಲಿ ಸ್ಥಗಿತಗೊಂಡಿರುವ ಕಾಮಗಾರಿಗಳೆಷ್ಟು ; ಸ್ಥಗಿತಗೊಂಡಿರುವ ಕಾಮಗಾರಿಗಳ ಒಟ್ಟು ಮೊತ್ತ ಎಷ್ಟು ; (ಕಾಮಗಾರಿಗಳು ಸ್ಥಗಿತಗೊಳ್ಳಲು ಕಾರಣವನ್ನು ಸ್ಥಗಿತಗೊಂಡಿರುವ ಕಾಮಗಾರಿಯ ಜಿಲ್ಲಾವಾರು ವಿವರದೊಂದಿಗೆ ನೀಡುವುದು)

(ಆ) ಕಳೆದ ಒಂದು ವರ್ಷದಿಂದ ಪ್ರಗತಿಯಲ್ಲಿರುವ ಕಾಮಗಾರಿಗಳೂ ಸೇರಿದಂತೆ ಹೊಸ ರಸ್ತೆ ಹಾಗೂ ಸೇತುವೆ ನಿರ್ಮಾಣಕ್ಕೆ ಇಲಾಖೆಯಿಂದ ಬಿಡುಗಡೆ ಮಾಡಿರುವ ಅನುದಾನ ಎಷ್ಟು ;

(ಇ) ಕಾಮಗಾರಿಗಳು ಸ್ಥಗಿತಗೊಂಡಿರುವುದರಿಂದ ಗುತ್ತಿಗೆದಾರರಿಗೆ ನಷ್ಟ ಉಂಟಾಗುವುದರ ಜೊತೆಗೆ ಕಾಮಗಾರಿಯ ಅಂದಾಜು ವೆಚ್ಚದಲ್ಲೂ ಹೆಚ್ಚಳಗೊಂಡು ಅಭಿವೃದ್ಧಿ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸ್ಥಗಿತಗೊಂಡಿರುವ ಕಾಮಗಾರಿಯನ್ನು ಮತ್ತೆ ಆರಂಭಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ ; ಅಗತ್ಯ ಅನುದಾನ ಬಿಡುಗಡೆ ಮಾಡಲಾಗಿದೆಯೇ ;

(ಈ) ಲೋಕೋಪಯೋಗಿ ಇಲಾಖೆಯಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ನೀಡಲು ಬಾಕಿ ಇರುವ ಬಿಲ್ ಮೊತ್ತ ಎಷ್ಟು ; (ಲೆಕ್ಕಶೀರ್ಷಿಕೆವಾರು, ವಿಭಾಗವಾರು ವಿವರ ನೀಡುವುದು)

(ಉ) ಕಳೆದ ಒಂದು ವರ್ಷದಿಂದ ಈ ಉದ್ದೇಶಕ್ಕಾಗಿ ಬಿಡುಗಡೆ ಮಾಡಿರುವ ಹಣ ಎಷ್ಟು ; ಯಾವ ಯಾವ ಗುತ್ತಿಗೆದಾರರಿಗೆ ಬಿಲ್ ಪಾವತಿಸಲಾಗಿದೆ ? (ಅವರು ನಿರ್ವಹಿಸಿರುವ ಕಾಮಗಾರಿಗಳ ಸಹಿತ ವಿವರ ನೀಡುವುದು)

## ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಬಾಕಿ ಇರುವ ಕಾಮಗಾರಿಗಳು

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೨೬ (೯೨೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೯-೨೦ ರಿಂದ ೨೦೨೪-೨೫ರವರೆಗೆ ಲೋಕೋಪಯೋಗಿ ಇಲಾಖೆಯಿಂದ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಮಂಜೂರಾಗಿರುವ ಅನುದಾನವೆಷ್ಟು ; ಈ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; (ಕಾಮಗಾರಿವಾರು ಅನುದಾನ ಹಂಚಿಕೆಯ ವಿವರದೊಂದಿಗೆ ಮಾಹಿತಿ ಒದಗಿಸುವುದು)

(ಆ) ಈ ಪೈಕಿ ಪೂರ್ಣಗೊಂಡಿರುವ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳೆಷ್ಟು ; ಕಾಮಗಾರಿಗಳು ಪೂರ್ಣಗೊಳ್ಳದಿರಲು ಕಾರಣಗಳೇನು ;

(ಇ) ಬಾಕಿ ಇರುವ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ? (ವಿವರ ಒದಗಿಸುವುದು)

## ದೇವಾಲಯಗಳ ಜೀರ್ಣೋದ್ಧಾರಕ್ಕೆ ಬಾಕಿ ಹಣ ಬಿಡುಗಡೆ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೨೭ (೯೨೩) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೯-೨೦ನೇ ಸಾಲಿನಿಂದ ಇಲ್ಲಿಯವರೆಗೆ ಸರ್ಕಾರದಿಂದ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ದೇವಾಲಯಗಳ ಜೀರ್ಣೋದ್ಧಾರ ಕಾಮಗಾರಿಗಳಿಗೆ ಮಂಜೂರಾಗಿರುವ ಅನುದಾನ ಎಷ್ಟು ; (ದೇವಸ್ಥಾನವಾರು ಅನುದಾನ ಮಂಜೂರು ಮಾಡಲಾದ ವಿವರ ಒದಗಿಸುವುದು)

(ಆ) ಈ ಪೈಕಿ ಬಿಡುಗಡೆಯಾಗಿರುವ ಅನುದಾನವೆಷ್ಟು :

(ಇ) ಬಿಡುಗಡೆಗೆ ಬಾಕಿ ಇರುವ ಅನುದಾನದ ವಿವರವನ್ನು ಕಾಮಗಾರಿವಾರು ನೀಡುವುದು; ಬಾಕಿ ಇರಲು ಕಾರಣಗಳೇನು ;

(ಈ) ಬಾಕಿ ಇರುವ ಅನುದಾನವನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು ? (ವಿವರ ಒದಗಿಸುವುದು)

## ಚಿಕ್ಕಮಗಳೂರು – ಬೇಲೂರು– ಹಾಸನ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಅಭಿವೃದ್ಧಿಪಡಿಸುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೨೮ (೯೨೪) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು–ಬೇಲೂರು–ಹಾಸನ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಿದ್ದು ಯಾವಾಗ ;

(ಆ) ಈ ರಸ್ತೆಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಈ ಪ್ರಸ್ತಾವನೆ ಯಾವ ಹಂತದಲ್ಲಿದೆ ; ರಸ್ತೆಯ ಅಭಿವೃದ್ಧಿಗೆ ವಿಸ್ತೃತ ಯೋಜನಾ ವರದಿ ತಯಾರಿಸಲಾಗಿದೆಯೇ ; ಯೋಜನೆಯ ಅಂದಾಜು ಮೊತ್ತವೆಷ್ಟು ; (ಸಮಗ್ರ ವಿವರ ನೀಡುವುದು)

(ಈ) ಈ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು ?

## ಬಾಕಿ ಇರುವ ಭೂ ವ್ಯಾಜ್ಯಗಳ ಇತ್ಯರ್ಥಕ್ಕೆ ಕೈಗೊಂಡ ಕ್ರಮಗಳು

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೨೯ (೯೨೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಾದ್ಯಂತ ಜಿಲ್ಲಾಧಿಕಾರಿಗಳು, ವಿಶೇಷ ಜಿಲ್ಲಾಧಿಕಾರಿಗಳು ಮತ್ತು

ಉಪ ವಿಭಾಗಾಧಿಕಾರಿ ಕಛೇರಿಗಳಲ್ಲಿ ಬಾಕಿ ಇರುವ ಭೂ ವ್ಯಾಜ್ಯಗಳೆಷ್ಟು : ಈ ಪೈಕಿ ಕಳೆದ ೩ ವರ್ಷಕ್ಕಿಂತ ಹೆಚ್ಚು ಅವಧಿಯಿಂದ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; (ಪ್ರಕರಣಗಳ ವಿವರವನ್ನು ಜಿಲ್ಲಾವಾರು ನೀಡುವುದು)

(ಆ) ಈ ಭೂ ವ್ಯಾಜ್ಯಗಳಲ್ಲಿ ಅಂತಿಮ ವಿಚಾರಣೆ ಪೂರ್ಣಗೊಂಡು ಆದೇಶಕ್ಕೆ ಬಾಕಿ ಇರುವ ಪ್ರಕರಣಗಳೆಷ್ಟು ; (ಪ್ರಕರಣಗಳ ವಿವರವನ್ನು ಜಿಲ್ಲಾವಾರು ನೀಡುವುದು)

(ಇ) ಭೂ ವ್ಯಾಜ್ಯಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಏಕೆ ಸಾಧ್ಯವಾಗಿಲ್ಲ ; ಭೂ ವ್ಯಾಜ್ಯ ಪ್ರಕರಣಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವ ಕುರಿತು ಮಾನದಂಡಗಳನ್ನು ನಿಗದಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಈ) ಬಾಕಿ ಇರುವ ಭೂ ವ್ಯಾಜ್ಯಗಳನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ; ಈ ನಿಟ್ಟಿನಲ್ಲಿ ನೀಡಿರುವ ಸೂಚನೆ ಏನು ; ಸೂಚನೆ ನೀಡಿದ ನಂತರ ಆಗಿರುವ ಪ್ರಗತಿ ಏನು ?

## ವಸತಿ ಇಲಾಖೆಯಿಂದ ವಸತಿ ರಹಿತರಿಗೆ ಹಂಚಿಕೆ ಮಾಡಿರುವ ಮನೆಗಳ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೩೦ (೮೮೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಸತಿ ಇಲಾಖೆ ಮತ್ತು ಈ ಇಲಾಖೆಯ ಅಡಿ ಬರುವ ಕರ್ನಾಟಕ ಗೃಹ ಮಂಡಳಿ ಹಾಗೂ ಕರ್ನಾಟಕ ಕೊಳಗೇರಿ ಅಭಿವೃದ್ಧಿ

ಮಂಡಳಿಗಳಿಂದ ನಿವೇಶನ ಹೊಂದಿರುವ ವಸತಿ ರಹಿತರಿಗೆ ವಸತಿ ಹಂಚಿಕೆ ಮಾಡಲು ರೂಪಿಸಿರುವ ಯೋಜನೆಗಳು ಯಾವುವು ; ಈ ಯೋಜನೆಗಳಡಿ ರಾಮನಗರ ಜಿಲ್ಲೆಗೆ ಕಳೆದ ೩ ವರ್ಷಗಳಲ್ಲಿ ಹಂಚಿಕೆಯಾದ ಮನೆಗಳೆಷ್ಟು ; (ವಿವರ ನೀಡುವುದು)

(ಆ) ಹಂಚಿಕೆಯಾಗಿರುವ ಮನೆಗಳಿಗೆ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನವೆಷ್ಟು; ಖರ್ಚಾಗಿರುವ ಅನುದಾನವೆಷ್ಟು ; ಮಂಜೂರಾಗದೇ ಬಾಕಿ ಉಳಿದಿರುವ ಅನುದಾನವೆಷ್ಟು ; (ಫಲಾನುಭವಿ ಹೆಸರು ಗ್ರಾಮ ಹೋಬಳಿ ತಾಲ್ಲೂಕು ಮತ್ತು ಜಾತಿವಾರು ವಿವರ ನೀಡುವುದು)

(ಇ) ರಾಮನಗರ ಜಿಲ್ಲೆಯಲ್ಲಿರುವ ನಿರ್ವಸತಿಕರ ಸಂಖ್ಯೆ ಎಷ್ಟು; ಈ ನಿರ್ವಸತಿಕರಿಗೆ ಯಾವ ಕಾಲಮಿತಿಯೊಳಗೆ ವಸತಿ ಕಲ್ಪಿಸಲಾಗುವುದು ? (ನಿರ್ವಸತಿಕರ ಹೆಸರು, ಗ್ರಾಮ, ಹೋಬಳಿ, ತಾಲ್ಲೂಕು ಮತ್ತು ಜಾತಿ ಮಾಹಿತಿಯೊಂದಿಗೆ ವಿವರ ನೀಡುವುದು)

## ಆಟೋಗಳಲ್ಲಿ ಪ್ರಯಾಣಿಕರನ್ನು ಕರೆದೊಯ್ಯಲು ಅನುಸರಿಸಬೇಕಾದ ನಿಯಮಗಳ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೩೧ (೮೮೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಆಟೋ ಚಾಲಕರು ತಮ್ಮ ಆಟೋಗಳಲ್ಲಿ ಪ್ರಯಾಣಿಕರನ್ನು ಕರೆದೊಯ್ಯಲು ಅನುಸರಿಸಬೇಕಾದ

ನಿಯಮಗಳನ್ನು ರೂಪಿಸಲಾಗಿದೆಯೇ ; ರೂಪಿಸಿದ್ದಲ್ಲಿ, ಆ ನಿಯಮಗಳ ಕುರಿತು ಹೊರಡಿಸಿರುವ ಆದೇಶಗಳ ಪ್ರತಿಯನ್ನು ಒದಗಿಸುವುದು ;

(ಆ) ಪ್ರಯಾಣಿಕರನ್ನು ಹೇಳಿದ ಸ್ಥಳಕ್ಕೆ ಕರೆದೊಯ್ಯಲು ನಿರಾಕರಿಸಿರುವ ಆಟೋ ಚಾಲಕರ ವಿರುದ್ಧ ಪ್ರಯಾಣಿಕರಿಂದ ದೂರುಗಳು ದಾಖಲಾಗಿದೆಯೇ ; ದಾಖಲಾಗಿದ್ದಲ್ಲಿ ಕಳೆದ ೩ ವರ್ಷಗಳಲ್ಲಿ ದಾಖಲಾಗಿರುವ ಪ್ರಕರಣಗಳೆಷ್ಟು ; ಈ ಪ್ರಕರಣಗಳ ಸಂಬಂಧ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ಪೋಡಿ ಮುಕ್ತ ಗ್ರಾಮ ಅಭಿಯಾನದ ಗುರಿಸಾಧನೆಗಳ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೩೨ (೮೯೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೩ ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ಎಷ್ಟು ಹೋಬಳಿಗಳಲ್ಲಿ ಪೋಡಿ ಮುಕ್ತ ಗ್ರಾಮ ಅಭಿಯಾನವನ್ನು ಕೈಗೊಳ್ಳಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಆ) ಈ ಅಭಿಯಾನದಡಿ ಹದ್ದುಬಸ್ತಿಗೆ ಬಂದ ಸರ್ವೆ ನಂಬರ್‌ಗಳೆಷ್ಟು ; ವಿಲೇವಾರಿಯಾದ ಸರ್ವೆ ನಂಬರ್‌ಗಳೆಷ್ಟು ; ಬಾಕಿ ಉಳಿದಿರುವ ಸರ್ವೆ ನಂಬರ್‌ಗಳೆಷ್ಟು ; (ತಾಲ್ಲೂಕುವಾರು/ಗ್ರಾಮವಾರು/ ಪ್ರಕರಣವಾರು ವಿವರ ಒದಗಿಸುವುದು)

(ಇ) ಈ ಅಭಿಯಾನದಡಿ ದುರಸ್ತಿ ಮಾಡಲು ಬಂದಂತಹ ಸರ್ವೆ ನಂಬರ್‌ಗಳೆಷ್ಟು ; ವಿಲೇವಾರಿಯಾದ ಸರ್ವೆ ನಂಬರ್‌ಗಳೆಷ್ಟು;

ಬಾಕಿ ಉಳಿದಿರುವ ಸರ್ವೆ ನಂಬರ್‌ಗಳೆಷ್ಟು ; (ತಾಲ್ಲೂಕುವಾರು/ ಗ್ರಾಮವಾರು/ಪ್ರಕರಣವಾರು ವಿವರ ಒದಗಿಸುವುದು)

(ಈ) ಈ ಅಭಿಯಾನದಡಿ ೧೧೯ ಕೋರಿಕೆಗೆ ಬಂದಂತಹ ಅರ್ಜಿಗಳೆಷ್ಟು; ವಿಲೇವಾರಿಯಾದ ಅರ್ಜಿಗಳೆಷ್ಟು; ಮತ್ತು ಬಾಕಿ ಉಳಿದಿರುವ ಅರ್ಜಿಗಳೆಷ್ಟು ? (ತಾಲ್ಲೂಕುವಾರು/ಗ್ರಾಮವಾರು/ಪ್ರಕರಣವಾರು ವಿವರ ಒದಗಿಸುವುದು)

## ಸರ್ಕಾರಿ ಪಡ ಜಮೀನುಗಳ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೩೩ (೮೯೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಗುರುತಿಸಲಾಗಿರುವ ಸರ್ಕಾರಿ ಪಡ ಜಮೀನುಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಆ) ಈ ಸರ್ಕಾರಿ ಪಡ ಜಮೀನುಗಳನ್ನು ಅವರ ವಾರಸುದಾರರಿಗೆ ಹಿಂದಿರುಗಿಸುವ ಯೋಜನೆಯನ್ನು ಜಾರಿಗೆ ತರುವ ಚಿಂತನೆ ಸರ್ಕಾರಕ್ಕಿದೆಯೇ ? (ವಿವರ ನೀಡುವುದು)

## ಅಲ್ಪಸಂಖ್ಯಾತರ ಕಲ್ಯಾಣಗಳ ಯೋಜನೆ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೩೪ (೮೯೨) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ, ಹಜ್ ಮತ್ತು ವಕ್ಫ್ ಇಲಾಖೆಯಿಂದ ಅಲ್ಪಸಂಖ್ಯಾತರ ಶ್ರೇಯೋಭಿವೃದ್ಧಿಗಾಗಿ ಸರ್ಕಾರ ಜಾರಿಗೊಳಿಸುತ್ತಿರುವ ಯೋಜನೆ/ ಕಾರ್ಯಕ್ರಮಗಳು ಯಾವುವು ; ಈ ಯೋಜನೆ/ಕಾರ್ಯಕ್ರಮಗಳಿಗೆ ರೂಪಿಸಿರುವ ಮಾನದಂಡಗಳೇನು ; (ಸಂಪೂರ್ಣ ವಿವರ ನೀಡುವುದು)

(ಆ) ಈ ಯೋಜನೆಗಳಡಿ ಕಳೆದ ೩ ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗೆ ಬಿಡುಗಡೆ ಮಾಡಿದ ಅನುದಾನವೆಷ್ಟು ; ಖರ್ಚಾದ ಅನುದಾನವೆಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಹಜ್ ಮತ್ತು ವಕ್ಫ್ ಇಲಾಖೆಯಡಿ ಕಳೆದ ೩ ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಯಾವುವು ; ಈ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು ? (ವಿವರ ನೀಡುವುದು)

## ಶ್ರೀರಂಗನಾಥಸ್ವಾಮಿ ದೇವಸ್ಥಾನಕ್ಕೆ ದಾನವಾಗಿ ನೀಡಿರುವ ಆಸ್ತಿಯ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೩೫ (೯೦೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೧೯೩೯ರಲ್ಲಿ ಶ್ರೀಮತಿ ದ್ವಾರಕಾಬಾಯಿ ವೇದಾಂತಂ ರವರು ೧೧೯೮-೩೪ಎಕರೆ ಜಾಗವನ್ನು ಶ್ರೀ ರಂಗನಾಥಸ್ವಾಮಿ ದೇವಸ್ಥಾನಕ್ಕೆ ದಾನವಾಗಿ ನೀಡಿರುವುದರ ಕುರಿತು ಸರ್ಕಾರದ

ನಿಲುವೇನು ; ಈ ಜಾಗವನ್ನು ಮುಜರಾಯಿ ಇಲಾಖೆಯ ದಾಖಲೆಗಳಲ್ಲಿ ನಮೂದು ಆಗದಿರಲು ಕಾರಣಕರ್ತರು ಯಾರು ;

(ಆ) ಯಾವುದೇ ಸ್ಪಷ್ಟ ಉದ್ದೇಶಕ್ಕಾಗಿ ದೇವಸ್ಥಾನಕ್ಕೆ, ದಾನವಾಗಿ ನೀಡಿರುವ ಜಾಗವನ್ನು ಮುಜರಾಯಿ ಇಲಾಖೆಯ ಸ್ವತ್ತಾಗಿದ್ದು ಸದರಿ ಜಾಗವನ್ನು ಕಂದಾಯ ಅಧಿಕಾರಿಗಳು ಯಾವ ನಿಯಮದ ಅನ್ವಯ ಖಾಸಗಿ ವ್ಯಕ್ತಿಗಳಿಗೆ ಪರಬಾರೆ ಮಾಡಿದ್ದಾರೆ ; ಈ ಕುರಿತು ಇರುವ ನಿಯಮವೇನು: ಈ ಅಕ್ರಮವನ್ನು ಎಸಗಿದ ಅಧಿಕಾರಿಗಳ ಮೇಲೆ ಯಾವಾಗ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ;

(ಇ) ಮುಜರಾಯಿ ಇಲಾಖೆಯ ಸ್ವತ್ತುಗಳನ್ನು ಕಂದಾಯ ಇಲಾಖೆಯು ಮುಜರಾಯಿ ಇಲಾಖೆಯ ಅನುಮತಿ ಒಪ್ಪಿಗೆ ಇಲ್ಲದೇ ಇತರರಿಗೆ ಯಾವ ಆದೇಶದ ಅನ್ವಯ ಹಂಚಿಕೆ ಮಾಡಿದೆ; ಈ ಅಕ್ರಮದಲ್ಲಿ ಭಾಗಿಯಾದವರು ಯಾರು ;

(ಈ) ೧೧೯೮–೩೪ಎಕರೆ ಜಾಗವನ್ನು ಯಾವ ಯಾವ ವರ್ಷದಲ್ಲಿ ಪರಭಾರೆ ಮಾಡಲಾಯಿತು; ಈ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ತಹಶೀಲ್ದಾರ್, ಜಿಲ್ಲಾಧಿಕಾರಿಗಳ ಮಾಹಿತಿ ಮುಜರಾಯಿ ಇಲಾಖೆಯಲ್ಲಿದೆಯೇ ; ಅಥವಾ ಮುಜರಾಯಿ ಇಲಾಖೆಯ ಅಧಿಕಾರಿಗಳೂ ಈ ಅಕ್ರಮದಲ್ಲಿ ಶಾಮೀಲಾಗಿದ್ದಾರೆಯೇ; ಈ ಎಲ್ಲಾ ವಿಷಯಗಳ ಕುರಿತು ತನಿಖೆ ನಡೆಸಲು ಕ್ರಿಮಿನಲ್ ಮೊಕದ್ದಮೆಯನ್ನು ಅಧಿಕಾರಿಗಳ ವಿರುದ್ಧ ದಾಖಲಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಉ) ಅಧಿಕಾರಿಗಳ ಸಹಾಯ ಇಲ್ಲದೆ ಮುಜರಾಯಿ ಇಲಾಖೆಯ ಜಮೀನುಗಳನ್ನು ಖಾಸಗಿಯವರಿಗೆ ದಾಖಲೆ ಮಾಡಿಕೊಡಲು

ಹೇಗೆ ಸಾಧ್ಯ, ಈ ಕುರಿತು ಸರ್ಕಾರದ ನಿಲುವೇನು ? (ವಿವರ ನೀಡುವುದು)

**ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡುವ ಕುರಿತು**

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೩೬ (೯೦೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಅಲ್ಪಸಂಖ್ಯಾತ ಸಮುದಾಯದ ಎಷ್ಟು ವಿದ್ಯಾರ್ಥಿಗಳು ಐಐಟಿ, ಐಐಎಂ, ಐಐಎಸ್ಸಿ, ಏಮ್ಸ್ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಾತಿಯನ್ನು ಪಡೆದಿದ್ದಾರೆ; ಇದರಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಗಿದೆ ; ಇದರಲ್ಲಿ ಜೈನ್, ಬೌದ್ಧ, ಸಿಖ್ ಸಮುದಾಯಗಳ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

(ಆ) ೨೦೨೨-೨೩ ಮತ್ತು ೨೦೨೩-೨೪ರ ಶೈಕ್ಷಣಿಕ ಸಾಲಿನಲ್ಲಿ ಬಿ.ಎಡ್ ಮತ್ತು ಡಿ.ಎಡ್ ಕೋರ್ಸ್ ಮಾಡುತ್ತಿರುವ ಎಷ್ಟು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಗಿದೆ; ಜೈನ್, ಬೌದ್ಧ, ಸಿಖ್ ಸಮುದಾಯಗಳ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

(ಇ) ೨೦೨೨-೨೩ ಮತ್ತು ೨೦೨೩-೨೪ರ ಶೈಕ್ಷಣಿಕ ಸಾಲಿನಲ್ಲಿ ಎಷ್ಟು ವಿದ್ಯಾರ್ಥಿಗಳು ಅರಿವು ಯೋಜನೆಯ ಫಲಾನುಭವಿಗಳಾಗಿದ್ದಾರೆ ; ಅದರಲ್ಲಿ ಜೈನ್, ಬೌದ್ಧ, ಸಿಖ್ ಸಮುದಾಯಗಳ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

## ಅಲ್ಪಸಂಖ್ಯಾತರ ಅಭಿವೃದ್ಧಿಗೆ ರೂಪಿಸಿದ ಯೋಜನೆ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೩೭ (೯೦೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಜೈನ್, ಬೌದ್ಧ, ಸಿಖ್ ಸಮುದಾಯಗಳಿಗೆ ಯಾವ ಯಾವ ಯೋಜನೆಯನ್ನು ರೂಪಿಸಲಾಗಿದೆ ;

(ಆ) ಜೈನ್, ಬೌದ್ಧ, ಸಿಖ್ ಸಮುದಾಯಗಳ ಅಭಿವೃದ್ಧಿಗೆ ಎಷ್ಟು ಮೊತ್ತವನ್ನು ವೆಚ್ಚ ಮಾಡಲಾಗಿದೆ; ಯಾವ ಯಾವ ಕಾರ್ಯಕ್ರಮಗಳಿಗೆ ವೆಚ್ಚ ಮಾಡಲಾಗಿದೆ ;

(ಇ) ಜೈನ್, ಬೌದ್ಧ, ಸಿಖ್ ಸಮುದಾಯಗಳ ಅಭಿವೃದ್ಧಿಗೆ ಕಳೆದ ೨ ವರ್ಷಗಳಲ್ಲಿ ನಿರ್ಮಿಸಲಾದ ಸಮುದಾಯ ಭವನಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಮುಸ್ಲಿಂ ಸಮುದಾಯದವರಿಗಾಗಿ ಕಳೆದ ೨ ವರ್ಷಗಳಲ್ಲಿ ಎಷ್ಟು ಶಾದಿ ಮಹಲ್ ಮತ್ತು ಸಮುದಾಯ ಭವನಗಳನ್ನು ನಿರ್ಮಿಸಲಾಗಿದೆ ? (ಜಿಲ್ಲಾವಾರು ಮಾಹಿತಿ ನೀಡುವುದು)

## ಅಲ್ಪಸಂಖ್ಯಾತರ ಹಾಸ್ಟೆಲ್‌ಗಳ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೩೮ (೯೦೫) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಅಲ್ಪಸಂಖ್ಯಾತರ ಹಾಸ್ಟೆಲ್‌ಗಳ ವಿದ್ಯಾರ್ಥಿಗಳಿಗೆ ಯಾವ ರೀತಿಯ ಆಹಾರ ವ್ಯವಸ್ಥೆಯನ್ನು ಮಾಡಲಾಗಿದೆ ;

ಊಟ ಮತ್ತು ತಿಂಡಿಗಳನ್ನು ತಯಾರಿಸಲು ಯಾವ ಯಾವ ವಸ್ತುಗಳನ್ನು ಸರ್ಕಾರ ಹಾಸ್ಟೆಲ್‌ಗಳಿಗೆ ಸರಬರಾಜು ಮಾಡುತ್ತಿದೆ ; (ವಸ್ತುವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿರುವ ಅಲ್ಪಸಂಖ್ಯಾತರ ಹಾಸ್ಟೆಲ್‌ಗಳ ವಿದ್ಯಾರ್ಥಿಗಳಿಗೆ ವಿತರಿಸಲು ಎಷ್ಟು ಪ್ರಮಾಣದಲ್ಲಿ ಯಾವ ಯಾವ ವಸ್ತುಗಳನ್ನು ಖರೀದಿಸಲಾಗಿದೆ ; (ವಸ್ತುವಾರು ವಿವರ ನೀಡುವುದು)

(ಇ) ರಾಜ್ಯದಲ್ಲಿರುವ ಅಲ್ಪಸಂಖ್ಯಾತರ ಹಾಸ್ಟೆಲ್‌ಗಳ ವಿದ್ಯಾರ್ಥಿಗಳಿಗೆ ವಿತರಿಸಲು ಆಹಾರ ಮತ್ತು ಇತರ ವಸ್ತುಗಳನ್ನು ಸರ್ಕಾರವು ಖರೀದಿಸುವಾಗ ಪ್ರತಿ ಕೆ.ಜಿ ಅಥವಾ ಪ್ರತಿ ವಸ್ತುವಿಗೆ ನಿಗದಿ ಪಡಿಸಲಾದ ದರವೆಷ್ಟು ? (ಸರಬರಾಜುದಾರರು ಮತ್ತು ಸಾಗಣಿಕೆದಾರರ ಹೆಸರು ಮತ್ತು ಸಂಪೂರ್ಣ ವಿವರದೊಂದಿಗೆ ವಸ್ತುವಾರು ವಿವರ ನೀಡುವುದು)

## ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನಲ್ಲಿ ಹಾರೋಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ತಾಮ್ರಗುಂಡಿ ಗ್ರಾಮದ ಹೆಸರು ಕಂದಾಯ ದಾಖಲೆಗಳಲ್ಲಿ ಹಾಗೂ ಗ್ರಾಮ ನಕ್ಷೆಯಲ್ಲಿ ಇಲ್ಲದಿರುವ ಬಗ್ಗೆ

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) :-**

೮೫೯ (೯೪೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಹಾರೋಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ತಾಮ್ರಗುಂಡಿ ಗ್ರಾಮದ ಹೆಸರು ಕಂದಾಯ ದಾಖಲೆಗಳಲ್ಲಿ ಇಲ್ಲದಿರುವುದು ಹಾಗೂ ಗ್ರಾಮ ನಕ್ಷೆಯಲ್ಲಿ ಇಲ್ಲದಿರುವುದು ನಿಜವೇ ;

(ಆ) ತಾಮ್ರಗುಂಡಿ ಹೆಸರು ಕಂದಾಯ ದಾಖಲೆಯಲ್ಲಿ ಹಾಗೂ ಗ್ರಾಮ ನಕ್ಷೆಯಲ್ಲಿ ಇಲ್ಲದಿರುವ ಕಾರಣ ಸದರಿ ಗ್ರಾಮದಲ್ಲಿರುವ ಸಾವಿರಾರು ಸಂಖ್ಯೆ ಗ್ರಾಮಸ್ಥರು ಸಾಲ ಪಡೆಯಲು ಸರ್ಕಾರದ ಸೌಲಭ್ಯ ಪಡೆಯಲು ಮತ್ತು ಗ್ರಾಮದ ಅಭಿವೃದ್ಧಿ ಕಾರ್ಯಕ್ಕೆ ತೊಂದರೆ ಆಗಿರುವುದು ನಿಜವೇ ; ಈ ಸಮಸ್ಯೆ ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

**ಶಕ್ತಿ ಯೋಜನೆಯಲ್ಲಿ ಸರ್ಕಾರ ಮೀಸಲಿಟ್ಟ ಅನುದಾನಗಳ ಕುರಿತು**

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೪೦ (೯೩೬) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಶಕ್ತಿ ಯೋಜನೆಗಾಗಿ ೨೦೨೪-೨೫ನೇ ಸಾಲಿಗಾಗಿ ಸರ್ಕಾರ ಮೀಸಲಿಟ್ಟ ಅನುದಾನ ಎಷ್ಟು; ಅದರಲ್ಲಿ ಎಷ್ಟು ಅನುದಾನ ಬಿಡುಗಡೆಯಾಗಿದೆ; ಯಾವ ಯಾವ ನಿಗಮಗಳಿಗೆ ಎಷ್ಟು ಅನುದಾನ ಒದಗಿಸಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಶಕ್ತಿ ಯೋಜನೆ ಜಾರಿಯಾದಾಗಿನಿಂದ ಇಲ್ಲಿಯವರಿಗೆ ರಾಜ್ಯದ ಮಹಿಳೆಯರು ಉಚಿತ ಪ್ರಯಾಣ ಮಾಡಿದ ಮೊತ್ತ ಎಷ್ಟು; ಈ ಯೋಜನೆಗೆ ಷರತ್ತು ವಿಧಿಸುವ ಯೋಚನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಯಾವ ಮಿತಿಗಳನ್ನು ಹೇರಲಾಗುವುದು ;

(ಇ) ಈ ಯೋಜನೆಯಿಂದಾಗಿ ಅಶಕ್ತರು, ಶಾಲಾ ವಿದ್ಯಾರ್ಥಿಗಳು, ಬಸ್‌ಗಳಲ್ಲಿ ಆಸನ ಸಿಗದೇ ಪರದಾಡುತ್ತಿರುವ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ?

## ವಕ್ಫ್ ಬೋರ್ಡ್ ಆದಾಯ ಮತ್ತು ಫಲಾನುಭವಿಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು ) :-**

೮೪೧ (೯೩೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ವಕ್ಫ್ ಬೋರ್ಡ್ ಯಾವಾಗ ಸ್ಥಾಪನೆಯಾಯಿತು; ಈ ನಿಗಮಕ್ಕೆ ಕಳೆದ ೧೦ ವರ್ಷಗಳಲ್ಲಿ ನೀಡಲಾದ ಅನುದಾನ ಎಷ್ಟು ; (ಕಳೆದ ೧೦ ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ವಕ್ಫ್ ಬೋರ್ಡ್‌ಗೆ ಸೇರಿದ ಆಸ್ತಿ ಎಷ್ಟು; ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಆಸ್ತಿ ಇದೆ ; ಸದರಿ ಆಸ್ತಿಯು ಯಾವ ಯಾವ ಉದ್ದೇಶಕ್ಕೆ ಬಳಕೆಯಾಗುತ್ತಿದೆ ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಕಳೆದ ೧೦ ವರ್ಷಗಳಿಂದ ವಕ್ಫ್ ಬೋರ್ಡ್‌ನಿಂದ ಸಾಲ ಸೌಲಭ್ಯ ಹಾಗೂ ಇತರೆ ಸವಲತ್ತುಗಳನ್ನು ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು ; ಇದಕ್ಕಾಗಿ ಖರ್ಚು ಮಾಡಲಾದ ಅನುದಾನ ಎಷ್ಟು ; (ಕಳೆದ ೧೦ ವರ್ಷಗಳ ಸಂಪೂರ್ಣ ಮಾಹಿತಿಯನ್ನು ಜಿಲ್ಲಾವಾರು ಮತ್ತು ವರ್ಷವಾರು ಪ್ರತ್ಯೇಕ ನೀಡುವುದು)

(ಈ) ಕಳೆದ ಮೂರು ವರ್ಷಗಳಲ್ಲಿ ಮಸೀದಿ/ಖಬರಸ್ಥಾನಗಳಿಗೆ ಒದಗಿಸಲಾಗದ ಅನುದಾನದಲ್ಲಿ ಬಿಡುಗಡೆಯಾದ ಅನುದಾನ ಎಷ್ಟು; ಬಾಕಿ ಇರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ; (ಮತಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)

(ಉ) ಪ್ರಸ್ತುತ ವರ್ಷದಲ್ಲಿ ಕಲ್ಯಾಣ ಕರ್ನಾಟಕದ ಯಾವ ಯಾವ ಜಿಲ್ಲೆಗಳಲ್ಲಿ ಮಸೀದಿ/ಖಬರಸ್ಥಾನಗಳನ್ನು ಅಭಿವೃದ್ಧಿ ಮಾಡಲಾಗುವುದು; (ಮಾಹಿತಿ ನೀಡುವುದು)

(ಊ) ರಾಜ್ಯದಲ್ಲಿ ವಕ್ಫ್ ಬೋರ್ಡ್ ಆಸ್ತಿಯನ್ನು ಅಕ್ರಮಣ ಮಾಡಿರುವವರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

(ಋ) ಅಕ್ರಮಣ ಮಾಡಿರುವವರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ತಾಲ್ಲೂಕುವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು)

## ದೆಹಲಿಯ ಕರ್ನಾಟಕ ಭವನದ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು ) :-**

೮೪೨ (೯೩೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದೆಹಲಿಯ ಕರ್ನಾಟಕ ಭವನದ ೧, ೨ ಹಾಗೂ ೩ ಭವನಗಳು ಯಾವ ವರ್ಷದಲ್ಲಿ ನಿರ್ಮಾಣವಾಗಿವೆ ; ಮೂರು ಭವನಗಳ ನಿರ್ಮಾಣಕ್ಕಾಗಿ ತಗುಲಿರುವ ವೆಚ್ಚ ಎಷ್ಟು ; (ಸಂಪೂರ್ಣ ವಿವರ ನೀಡುವುದು)

(ಆ) ಈ ಮೂರು ಭವನಗಳಲ್ಲಿ ಮಂಜೂರಾಗಿರುವ ಐ.ಎ.ಎಸ್ ಹುದ್ದೆಗಳು ಎಷ್ಟು; ಪ್ರಸ್ತುತ ಎಷ್ಟು ಜನ ಐ.ಎ.ಎಸ್ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ; ಕರ್ನಾಟಕ ಭವನದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಅಧಿಕಾರಿ/ಸಿಬ್ಬಂದಿಗಳೆಷ್ಟು; ಗುತ್ತಿಗೆ ಆಧಾರದ ಮೇಲೆ ಅಥವಾ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳೆಷ್ಟು ; (ವಿವರ ನೀಡುವುದು)

(ಇ) ಕರ್ನಾಟಕ ಭವನಗಳಲ್ಲಿರುವ ವಾಹನಗಳೆಷ್ಟು; ಯಾವ ಯಾವ ಶ್ರೇಣಿಯ ಅಧಿಕಾರಿ ಮತ್ತು ಜನ ಪ್ರತಿನಿಧಿಗಳಿಗೆ ವಾಹನ ಸೌಲಭ್ಯವನ್ನು ಒದಗಿಸುತ್ತಿದ್ದಾರೆ ; ಸದರಿ ವಾಹನಗಳಿಗೆ ಪ್ರತಿ ತಿಂಗಳು ಖರ್ಚಾಗುವ ಇಂಧನ ಎಷ್ಟು ; (ಲೀಟರ್‌ಗಳಲ್ಲಿ) ಹಾಗೂ ಸದರಿ ವಾಹನಗಳು ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕಿಲೋ ಮೀಟರ್ ಸಂಚಾರ ಮಾಡಿರುತ್ತವೆ ಹಾಗೂ ಸದರಿ ವಾಹನಳಿಂದ ಬಂದಿರುವ ಆದಾಯವೆಷ್ಟು ; (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು)

(ಈ) ಕರ್ನಾಟಕ ಭವನ-೧ ಮತ್ತು ೨ ರಲ್ಲಿರುವ ಉಪಹಾರ ಗೃಹಗಳು ನಿರ್ವಹಣೆ ಮಾಡುವ ಅಧಿಕಾರಿಗಳ ಶ್ರೇಣಿಯನ್ನು ಕೊಡುವುದು; ಕಳೆದ ಮೂರು ವರ್ಷಗಳಲ್ಲಿ ಸದರಿ ಉಪಹಾರ ಗೃಹಗಳಿಗೆ ಖರ್ಚಾದ ಮೊತ್ತ ಎಷ್ಟು ಹಾಗೂ ಅವುಗಳಿಂದ ಬಂದಿರುವ ಆದಾಯ ಎಷ್ಟು ; (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು)

(ಉ) ಕರ್ನಾಟಕ ಭವನ-೩ರಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆ.ಎಸ್.ಟಿ.ಡಿ.ಸಿ) ದವರಿಗೆ ಗುತ್ತಿಗೆ ಆಧಾರದಲ್ಲಿ ಉಪಹಾರ ಗೃಹ ನಿರ್ವಹಣೆ ಮಾಡಲು ಎಷ್ಟು ವರ್ಷಗಳ ಅವಧಿಗೆ ಗುತ್ತಿಗೆ ಕೊಡಲಾಗಿದೆ ; ಬಂದಿರುವ ಆದಾಯ ಎಷ್ಟು; ಕೆ.ಎಸ್.ಟಿ.ಡಿ.ಸಿ ರವರಿಗೆ ನೀಡಲಾದ ಹಣವೆಷ್ಟು ; (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು)

(ಊ) ಕಳೆದ ಮೂರು ವರ್ಷಗಳಲ್ಲಿ ಅಧಿಕಾರಿಗಳು ಕರ್ನಾಟಕ ಭವನ-೧,೨ ಹಾಗೂ ೩ ರ ತಪಾಸಣೆಯುನ್ನು ಎಷ್ಟು ಸಲ ಕೈಗೊಂಡಿರುತ್ತಾರೆ ; ಹಾಗಿದ್ದಲ್ಲಿ, ತಪಾಸಣಾ ಸಮಯದಲ್ಲಿ ಕಂಡು

ಬಂದಿರುವ ನ್ಯೂನತೆಗಳೇನು; ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು)

(ಋ) ಕರ್ನಾಟಕ ಭವನ-೩ರಲ್ಲಿ ಕೆ.ಎಸ್.ಟಿ.ಡಿ.ಸಿರವರು ಎಷ್ಟು ವರ್ಷಗಳಿಂದ ಉಪಹಾರ ಗೃಹವನ್ನು ನಿರ್ವಹಣೆ ಮಾಡುತ್ತಿದ್ದು ಕೋಣೆಗಳಿಗೆ ಸರಬರಾಜು ಸೇವೆಯನ್ನು ಮಾಡಲಾಗುತ್ತಿಲ್ಲ ಮತ್ತು ಲಿಫ್ಟ್ ವ್ಯವಸ್ಥೆ ಸರಿಯಾಗಿರುವುದಿಲ್ಲ, ಸ್ವಾಗತ ಕೌಂಟರ್‌ನಲ್ಲಿ ರೂಮ್ ಸರ್ವಿಸ್ ಕೊಡಲಾಗುವುದಿಲ್ಲ ಎಂಬ ಭಿತ್ತಿ ಫಲಕಗಳನ್ನು ಅಳವಡಿಸಿದ್ದು ಕಾರಣವೇನು ; ಸಾರ್ವಜನಿಕರಿಗೆ ಸರಿಯಾದ ಸೇವೆ ಲಭ್ಯವಾಗುತ್ತಿಲ್ಲ, ಮಕ್ಕಳು, ಹಿರಿಯ ನಾಗರೀಕರು ಹಾಗೂ ವಿಕಲ ಚೇತನರಿಗೆ ಯಾವುದೇ ವಿಶೇಷ ಸೌಲಭ್ಯಗಳು ದೊರುಕುತ್ತಿಲ್ಲ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಎ) ಈ ೩ ಭವನಗಳನ್ನು ಹೊರತುಪಡಿಸಿ ಹೊಸದಾಗಿ ಭವನ ನಿರ್ಮಾಣ ಮಾಡಲಾಗುತ್ತಿದೆಯೇ ; ಹಾಗಿದ್ದಲ್ಲಿ, ಆ ಭವನ ನಿರ್ಮಾಣದ ಕೊಠಡಿ ಸಂಖ್ಯೆ ಎಷ್ಟು ಹಾಗೂ ವೆಚ್ಚವೆಷ್ಟು ?

## ಮೀನು ಸಾಕಾಣಿಕೆ ಪ್ರೋತ್ಸಾಹಧಾಯಕ ಯೋಜನೆಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು ) :–**

೮೪೩ (೯೩೯) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಮೀನು ಸಾಕಾಣಿಕ ಕೇಂದ್ರಗಳಿವೆ ; ಅವು ಯಾವುವು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಮೀನು ಸಾಕಾಣಿಕ ಕೇಂದ್ರಗಳ ಸ್ಥಾಪನೆಗಾಗಿ ಸರ್ಕಾರ ನೀಡುವ ಪ್ರೋತ್ಸಾಹದಾಯಕ ಯೋಜನೆಗಳು ಯಾವುವು ; ಇದಕ್ಕಾಗಿ

ಮೀಸಲಿಟ್ಟ ಅನುದಾನ ಎಷ್ಟು; ಯಾವ ಯಾವ ಉದ್ದೇಶಗಳಿಗೆ ಎಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ ; ಕಳೆದ ಮೂರು ವರ್ಷಗಳ ವಿವರ ನೀಡುವುದು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಕಲ್ಯಾಣ ಕರ್ನಾಟಕ ವಿಧಾನ ಸಭಾ ವ್ಯಾಪ್ತಿಯಲ್ಲಿ ಎಷ್ಟು ಕೆರೆಗಳಲ್ಲಿ ಮೀನುಗಾರಿಕೆ ಸಾಕಾಣಿಕೆ ಮಾಡಲಾಗುತ್ತಿದೆ ; ಇದಕ್ಕಾಗಿ ಎಷ್ಟು ಹಣ ಖರ್ಚು ಮಾಡಲಾಗುತ್ತಿದೆ ; ಬರುತ್ತಿರುವ ಲಾಭವೆಷ್ಟು ; (ವಿಧಾನ ಸಭಾವಾರು ಕಳೆದ ಮೂರು ವರ್ಷಗಳ ವಿವರ ನೀಡುವುದು)

(ಈ) ಸರ್ಕಾರಿ ಹಾಗೂ ಖಾಸಗಿ ಕೆರೆಗಳಲ್ಲಿ ಮೀನು ಸಾಕಾಣಿಕೆ ಮಾಡಲು ಸರ್ಕಾರ ನಿಗದಿಪಡಿಸಿದ ಮಾನದಂಡವೇನು ; ಮೀನು ಸಾಕಾಣಿಕೆಗೆ ಯಾವ ರೀತಿ ಅನುಮತಿ ನೀಡಲಾಗುತ್ತದೆ ; ಗುತ್ತಿಗೆದಾರರಿಗೆ ಕೆರೆಗಳನ್ನು ಹಂಚಿಕೆ ಮಾಡುವಾಗ ಸರ್ಕಾರ ರಚಿಸಿರುವ ನಿಯಮಗಳೇನು ? (ಮಾಹಿತಿ ನೀಡುವುದು)

## ಬರಗಾಲ ಪೀಡಿತ ಪ್ರದೇಶ ಮತ್ತು ಪರಿಹಾರದ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು ) :–**

೮೪೪ (೯೪೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೨೩–೨೪ನೇ ಸಾಲಿನಲ್ಲಿ ಬರಗಾಲ ಪೀಡಿತ ತಾಲ್ಲೂಕುಗಳಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು ;

(ಆ) ಬರಗಾಲ ಪೀಡಿತ ಪ್ರದೇಶದ ಎಷ್ಟು ಜನರಿಗೆ ರಾಜ್ಯ ಸರ್ಕಾರದ ವತಿಯಿಂದ ಪರಿಹಾರ ವಿತರಿಸಲಾಗಿದೆ ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಬರಗಾಲದ ತೀವ್ರತೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅದರ ಪರಿಹಾರಕ್ಕಾಗಿ ಸರ್ಕಾರ ಕೈಗೊಂಡ ಕಾರ್ಯಗಳಾವುವು ಮತ್ತು ಇದಕ್ಕಾಗಿ ಸರ್ಕಾರದಿಂದ ಬಿಡುಗಡೆಯಾದ ಮೊತ್ತ ಎಷ್ಟು ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಬರಗಾಲ ಪರಿಹಾರ ವಿತರಣೆಯಲ್ಲಿ SDRF & NDRF ನಿಧಿಯ ಮಾನದಂಡಗಳೇನು ; ಪರಿಹಾರ ವಿತರಣೆಯಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಪಾಲು ಎಷ್ಟು ;

(ಉ) ರಾಜ್ಯದಲ್ಲಿ ಅತೀವೃಷ್ಟಿ ಅಥವಾ ಅನಾವೃಷ್ಟಿಯಿಂದ ಹಾನಿಗೊಳಗಾದ ಬೆಳೆ ಪರಿಹಾರ ವಿತರಣೆಯಲ್ಲಿ SDRF & NDRF ನಿಧಿಯಿಂದ ಕಳೆದ ಐದು ವರ್ಷಗಳಲ್ಲಿ ವಿತರಿಸಲಾದ ಪರಿಹಾರದ ಮೊತ್ತ ಎಷ್ಟು ; (ವರ್ಷವಾರು ಮಾಹಿತಿ ನೀಡುವುದು)

(ಊ) ಸರ್ಕಾರದ ಸಮೀಕ್ಷೆ ಪ್ರಕಾರ ಪ್ರಸಕ್ತ ವರ್ಷದ ಬರಗಾಲ ಪ್ರದೇಶದ ವಿಸ್ತೀರ್ಣ ಎಷ್ಟು ; ಹಾನಿಗೊಳಗಾದ ಯಾವ ಯಾವ ಬೆಳೆಗಳಿಗೆ ಯಾವ ಪ್ರಮಾಣದಲ್ಲಿ ಪರಿಹಾರ ನೀಡಲಾಗುವುದು ; ಪ್ರತಿ ರೈತರಿಗೆ ಗರಿಷ್ಟ ಎಷ್ಟು ಎಕರೆ ಭೂಮಿಗೆ ಪರಿಹಾರ ನೀಡಲಾಗುವುದು ; ಸರ್ಕಾರದ ಅಂಕಿ ಅಂಶಗಳಂತೆ ಎಷ್ಟು ರೈತರು ಪರಿಹಾರ ಪಡೆಯಲು ಅರ್ಹತೆ ಹೊಂದಿದ್ದಾರೆ ? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

## ಸಂಡೂರು ತಾಲ್ಲೂಕು ಲಕ್ಕವಳ್ಳಿ ಗ್ರಾಮದ ಎಸ್.ಸಿ/ಎಸ್.ಟಿ ಜನರಿಗೆ ಅರಣ್ಯ ಹಕ್ಕು ಪತ್ರ ನೀಡುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :-**

೮೪೫ (೮೮೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಸಮಿತಿಯಲ್ಲಿ ಹಕ್ಕು ಪತ್ರಗಳನ್ನು ನೀಡಲು ಇರುವ ನಿಯಮ/ಮಾನದಂಡಗಳೇನು ; ಬಳ್ಳಾರಿ ಜಿಲ್ಲೆಯಲ್ಲಿ ಇಲ್ಲಿಯವರೆಗೂ ಎಷ್ಟು ಅರಣ್ಯ ಹಕ್ಕು ಪತ್ರಗಳನ್ನು ನೀಡಲಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕು, ಎಂ. ಲಕ್ಕವಳ್ಳಿ ಗ್ರಾಮದಲ್ಲಿ ಎಸ್.ಸಿ/ಎಸ್.ಟಿ ಜನಾಂಗದವರು ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಸಮಿತಿಗೆ ಹಕ್ಕು ಪತ್ರಕ್ಕಾಗಿ ಅರ್ಜಿ ಸಲ್ಲಿಸಿರುವುದು ನಿಜವೇ; ಹಾಗಿದ್ದಲ್ಲಿ, ಎಷ್ಟು ಅರ್ಜಿಗಳು ಸಲ್ಲಿಕೆಯಾಗಿವೆ ; ಅವುಗಳಲ್ಲಿ ಎಷ್ಟು ಅರ್ಜಿಗಳು ಮಾನ್ಯವಾಗಿವೆ ; ಎಷ್ಟು ಅರ್ಜಿಗಳು ತಿರಸ್ಕೃತಗೊಂಡಿವೆ , ತಿರಸ್ಕೃತಗೊಳ್ಳಲು ಕಾರಣಗಳೇನು ; (ಮಾಹಿತಿ ನೀಡುವುದು)

(ಇ) ಈ ಅರ್ಹ ಮಾನ್ಯವಾಗಿರುವ ಅರ್ಜಿದಾರರು ಯಾರು ; ಸದರಿ ಫಲಾನುಭವಿಗಳಿಗೆ ಯಾವ ಕಾಲಮಿತಿಯಡಿ ಹಕ್ಕು ಪತ್ರಗಳನ್ನು ನೀಡಲಾಗುವುದು ? (ಹೆಸರುಗಳೊಂದಿಗೆ ವಿವರಗಳ ಮಾಹಿತಿ ಒದಗಿಸುವುದು)

## ರಾಜ್ಯದಲ್ಲಿರುವ ಸಿ ಗ್ರೇಡ್ ದೇಗುಲಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :-**

೨೪೬ (೨೨೬) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಸಿ ಗ್ರೇಡ್ ವರ್ಗೀಕರಿಸಿರುವ ದೇಗುಲಗಳ ಅಭಿವೃದ್ಧಿಗೆ ಯಾವುದಾದರೂ ಯೋಜನೆಯನ್ನು ರೂಪಿಸಲಾಗಿದೆಯೇ ; ಹಾಗಿದ್ದಲ್ಲಿ, ಈ ಯೋಜನೆಗೆ ಒದಗಿಸಿರುವ ಅನುದಾನದ ವಿವರ

ಹಾಗೂ ಇದರಿಂದ ಇಲ್ಲಿಯವರೆಗೆ ಜೀರ್ಣೋದ್ಧಾರ ಮಾಡಿದ ದೇವಸ್ಥಾನಗಳು, ಅದಕ್ಕೆ ವ್ಯಯಿಸಲಾದ ಅನುದಾನದ ವಿವಗಳೊಂದಿಗೆ ಮಾಹಿತಿ ನೀಡುವುದು ;

(ಆ) ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆ ವ್ಯಾಪ್ತಿಗೆ ಬರುವ ದೇಗುಲಗಳ ಹೆಸರು, ಅವುಗಳಿಗಿರುವ ಸ್ಥಿರಾಸ್ತಿಗಳು ಹಾಗೂ ಅವುಗಳು ಒತ್ತುವರಿಯಾಗಿದ್ದಲ್ಲಿ ಅದರ ಮಾಹಿತಿ ಮತ್ತು ಒತ್ತುವರಿ ತೆರವುಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳ ವಿವರಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು ;

(ಇ) ಮುಜರಾಯಿ ಇಲಾಖೆಯಿಂದ ಅನುದಾನ ನೀಡುವ ದೇವಾಲಯಗಳಿಗೆ ಕೋಡ್‌ಗಳನ್ನು ನೀಡಿ ಆ ದೇವಸ್ಥಾನಗಳಿಗೆ ಬಿಡುಗಡೆಯಾಗುವ ಮತ್ತು ಇಲ್ಲಿಯವರೆಗೂ ಆಗಿರುವ ಅಭಿವೃದ್ಧಿ ಕಾರ್ಯಗಳನ್ನು ಕೋಡ್‌ಗಳ ಮೂಲಕ ಸಲ್ಲಿಸಲು ಸರ್ಕಾರದ ಕ್ರಮಗಳೇನು ? (ಮಾಹಿತಿ ನೀಡುವುದು)

## ಬಳ್ಳಾರಿ, ವಿಜಯನಗರ ಜಿಲ್ಲೆಗಳಲ್ಲಿ ಪಶು ವೈದ್ಯರುಗಳ ನೇಮಕ ಮಾಡುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :-**

೮೪೭ (೮೮೫) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಅಂದಾಜು ಎಷ್ಟು ಜಾನುವಾರುಗಳು ಮತ್ತು ಎಷ್ಟು ಸಾಕು ಪ್ರಾಣಿಗಳು ಇವೆ ; ಎಷ್ಟು ಜಾನುವಾರುಗಳಿಗೆ ಎಷ್ಟು ಪಶು ವೈದ್ಯರುಗಳಿದ್ದಾರೆ ; ಅಂದಾಜು ಅನುಪಾತದಲ್ಲಿ ಎಷ್ಟಿರಬೇಕು ; (ವಿವರಗಳೊಂದಿಗೆ ಮಾಹಿತಿ ಒದಗಿಸುವುದು)

(ಆ) ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಎಷ್ಟು ಪಶು ಆಸ್ಪತ್ರೆಗಳಿವೆ; ಅವುಗಳ ವಿವರಗಳೊಂದಿಗೆ ಅಲ್ಲಿಗೆ ಮಂಜೂರಾದ ಹುದ್ದೆ ಮತ್ತು ಹಾಲಿ ಕಾರ್ಯನಿರ್ವಹಿಸುತ್ತಿರುವವರ ಹಾಗೂ ಖಾಲಿ ಹುದ್ದೆಗಳ ಮಾಹಿತಿ ಒದಗಿಸುವುದು ;

(ಇ) ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಎಷ್ಟು ಜಾನುವಾರುಗಳು ಇವೆ ಹಾಗೂ ಎಷ್ಟು ಪಶು ವೈದ್ಯರುಗಳ ಮಂಜೂರಾದ ಹುದ್ದೆಗಳಿವೆ; ಅವುಗಳಲ್ಲಿ ಎಷ್ಟು ಜನ ಕರ್ತವ್ಯ ನಿರ್ವಹಿಸುತ್ತಿದ್ದಾರೆ; ಖಾಲಿ ಇರಲು ಕಾರಣಗಳೇನು ; ಯಾವ ಕಾಲಮಿತಿಯಲ್ಲಿ ಇವುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ? (ವಿವರಗಳೊಂದಿಗೆ ಮಾಹಿತಿ ಒದಗಿಸುವುದು)

## ಬಳ್ಳಾರಿ, ವಿಜಯನಗರ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಮಾಡುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :-**

೮೪೮ (೮೮೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಎಷ್ಟು ತಾಲ್ಲೂಕುಗಳು ಇವೆ ; ಎಷ್ಟು ತಾಲ್ಲೂಕಿನ ಮಿನಿ ವಿಧಾನ ಸೌಧಗಳನ್ನು ನಿರ್ಮಾಣ ಮಾಡಲಾಗಿದೆ ; ಎಷ್ಟು ನೂತನ ಮಿನಿ ವಿಧಾನ ಸೌಧ ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆ ; ಮಿನಿ ವಿಧಾನ ಸೌಧ ನಿರ್ಮಾಣ ಕಾರ್ಯ ವಿಳಂಬವಾಗಲು ಕಾರಣವೇನು ; ತ್ವರಿತವಾಗಿ ನಿರ್ಮಾಣ ಮಾಡಲು ಸರ್ಕಾರದಿಂದ ಯಾವ ಕ್ರಮ ಜರುಗಿಸಲಾಗಿದೆ ;

(ಆ) ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ಮಿನಿ ವಿಧಾನ ಸೌಧಗಳನ್ನು ನಿರ್ಮಾಣ ಮಾಡಿ ಸಂಪೂರ್ಣವಾಗಿ ಯಾವ ಕಾಲಮಿತಿಯೊಳಗೆ ನಿರ್ಮಾಣ ಮಾಡಲಾಗುವುದು ? (ವಿವರಗಳೊಂದಿಗೆ ಮಾಹಿತಿ ಒದಗಿಸುವುದು)

## ಕಣಬೂರ ಗ್ರಾಮದ ಮುಳುಗಡೆ ಸಂತ್ರಸ್ತರಿಗೆ ಆಗಿರುವ ಅನ್ಯಾಯದ ಕುರಿತು

**ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೪೯ (೯೯೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಬಲೇಶ್ವರ ತಾಲ್ಲೂಕಿನ ಕಣಬೂರ ಗ್ರಾಮದ ಕೃಷ್ಣಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಮುಳುಗಡೆಯಾಗಿದ್ದು, ಸದರಿ ಗ್ರಾಮಸ್ಥರಿಗೆ ವಿಜಯಪುರ ತಾಲ್ಲೂಕಿನ ಮಹಾಲ ಬಾಗಾಯತ್ ಗ್ರಾಮದಲ್ಲಿ ಪುನರ್ವಸತಿ ಕಲ್ಪಿಸಿ ಹಕ್ಕು ಪತ್ರಗಳನ್ನು ವಿತರಿಸಿದ್ದು, ಇಲ್ಲಿಯ ಖಾಲಿ ನಿವೇಶನಗಳನ್ನು ಕೆಲ ದಲ್ಲಾಳಿಗಳು ಖೊಟ್ಟಿದಾಖಲೆ ಸೃಷ್ಟಿಸಿ ಅಕ್ರಮವಾಗಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅಕ್ರಮ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಆಲಮಟ್ಟಿ ಪುನರ್ವಸತಿ ಕಛೇರಿಯಲ್ಲಿ ಆಗಿರುವ ಅಕ್ರಮಗಳ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರವಾದ ಮಾಹಿತಿ ನೀಡುವುದು)

## ಪ್ರತಿ ಗ್ರಾಮ ಪಂಚಾಯತಿಗಳಿಗೆ ೧೦೦ ಮನೆಗಳನ್ನು ಮಂಜೂರು ಮಾಡುವ ಕುರಿತು

**ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೫೦ (೯೯೯) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗ್ರಾಮೀಣ ಭಾಗದಲ್ಲಿ ಹಲವಾರು ಬಡ ಕುಟುಂಬಗಳು ವಸತಿ ರಹಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ವಸತಿ ರಹಿತ ಕುಟುಂಬಗಳ ಸಮೀಕ್ಷೆ ಮಾಡಲಾಗಿದೆಯೇ ; ಸಮೀಕ್ಷೆ ಮಾಡಿದ್ದಲ್ಲಿ, ಎಷ್ಟು ಕುಟುಂಬಗಳು ವಸತಿ ರಹಿತವಾಗಿವೆ ; (ಗ್ರಾಮ ಪಂಚಾಯತ್‌ವಾರು ಮಾಹಿತಿ ನೀಡುವುದು)

(ಇ) ವಸತಿ ರಹಿತ ಕುಟುಂಬಗಳಿಗೆ ವಸತಿ ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಕಳೆದ ೩ ವರ್ಷಗಳಲ್ಲಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ವಿವಿಧ ವಸತಿ ಯೋಜನೆಗಳಲ್ಲಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು ; (ಗ್ರಾಮ ಪಂಚಾಯತ್ ಮತ್ತು ವರ್ಷವಾರು ಮಾಹಿತಿ ನೀಡುವುದು)

(ಉ) ಪ್ರಸ್ತುತ ಪ್ರತಿ ಗ್ರಾಮ ಪಂಚಾಯತ್‌ಗೆ ೧೦೦ ಮನೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ ; ಇದ್ದಲ್ಲಿ, ಯಾವ ಕಾಲಮಿತಿಯಲ್ಲಿ ಮಂಜೂರು ಮಾಡಲಾಗುವುದು ? (ಮಾಹಿತಿ ಒದಗಿಸುವುದು)

## ಉಪ ನೋಂದಣಿ ಕಛೇರಿಗಳಲ್ಲಿ ಆಗುತ್ತಿರುವ ಅವ್ಯವಹಾರಗಳ ಕುರಿತು

**ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೫೧ (೧೦೦೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉಪ ನೋಂದಣಿ ಕಛೇರಿಗಳಲ್ಲಿ ಒಂದೇ ಆಸ್ತಿಯನ್ನು ಬೇರೆ ಬೇರೆಯವರ ಹೆಸರಿನಲ್ಲಿ ನೋಂದಣಿ ಮಾಡಿ ಅಮಾಯಕರ

ಆಸ್ತಿಯನ್ನು ಲಪಟಾಯಿಸುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆಯೇ ; ಬಂದಿದ್ದಲ್ಲಿ, ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಅಮಾಯಕರ ಆಸ್ತಿಯನ್ನು ಭೂಗಳ್ಳರು ನಕಲಿ ದಾಖಲೆ ಸೃಷ್ಟಿಸಿ ವಶಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇಂತಹ ಎಷ್ಟು ದೂರುಗಳು ದಾಖಲಾಗಿವೆ ; (ವಿವರ ನೀಡುವುದು)

(ಇ) ಇದನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ?

(ಈ) ಉಪ ನೋಂದಣಾಧಿಕಾರಿಗೆ ದಾಖಲೆಗಳನ್ನು ಪರಿಶೀಲಿಸುವ ಅಧಿಕಾರವನ್ನು ನೀಡಲಾಗಿದೆಯೇ ; ಸದರಿ ಕಛೇರಿಯಲ್ಲಿ ದಾಖಲೆಗಳನ್ನು ನೋಂದಣಿ ಮಾಡುವ ಮುಂಚೆ ದಾಖಲೆಗಳ ನೈಜತೆಯನ್ನು ಪರಿಶೀಲಿಸುವ ಅಧಿಕಾರ ಯಾರಿಗೆ ನೀಡಲಾಗಿದೆ ; (ವಿವರ ನೀಡುವುದು)

(ಉ) ಯಾವುದೇ ದಾಖಲೆಗಳನ್ನು ನೀಡಿದರೆ ನೋಂದಣಿ ಮಾಡುವ ಅಧಿಕಾರವನ್ನು ಉಪ–ನೋಂದಣಾಧಿಕಾರಿ ಹೊಂದಿದ್ದಾರೆಯೇ ; ಈ ಕುರಿತು ಸರ್ಕಾರದ ಸ್ಪಷ್ಟನೆ ಏನು ;

(ಊ) ನಕಲಿ ದಾಖಲೆ ಸೃಷ್ಟಿಸಿ ಆಸ್ತಿ ಲಪಟಾಯಿಸುವ ಪ್ರಕರಣಗಳಲ್ಲಿ ಎಷ್ಟು ಜನ ಉಪ–ನೋಂದಣಾಧಿಕಾರಿಗಳು ಶಾಮೀಲಾಗಿದ್ದಾರೆ ಮತ್ತು ಅವರುಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಋ) ಭೂಗಳ್ಳರ ವಿರುದ್ಧ ಕಠಿಣ ಕಾನೂನು ತರುವ ಯೋಜನೆ ಸರ್ಕಾರದ ಮುಂದಿದೆಯೇ; ಅಮಾಯಕರ ಆಸ್ತಿಗಳನ್ನು ವಶಪಡಿಸಿಕೊಳ್ಳುವವರ ವಿರುದ್ಧ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ; (ವಿವರ ನೀಡುವುದು)

(ಎ) ಋಣಭಾರ ರಾಹಿತ್ಯ ಪ್ರಮಾಣ ಪತ್ರ (Encumbrance Certificate) ಪಡೆಯಲು ಸಾರ್ವಜನಿಕರು ತುಂಬಾ ಕಷ್ಟ

ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇ.ಅ ಪಡೆಯಲು ಇರುವ ತಾಂತ್ರಿಕ ತೊಂದರೆಗಳನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಲಿಂಗಸಗೂರು ತಾಲ್ಲೂಕಿನ ಹಟ್ಟಿ ಮತ್ತು ನಾಗರಹಾಳ ಗ್ರಾಮದಲ್ಲಿ ಹೊಸ ಪಶು ಆಸ್ಪತ್ರೆಗಳ ಸ್ಥಾಪನೆ ಬಗ್ಗೆ

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೫೭ (೮೯೩) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಯಚೂರು ಜಿಲ್ಲೆ ಲಿಂಗಸಗೂರು ತಾಲ್ಲೂಕಿನ ಹಟ್ಟಿ ಮತ್ತು ನಾಗರಹಾಳ ಪಟ್ಟಣದಲ್ಲಿ ಹೈನುಗಾರಿಕೆ ಅಭಿವೃದ್ಧಿಯಾಗದೇ ಸುತ್ತಿಲಿನ ೧೦ ಗ್ರಾಮ ಪಂಚಾಯಿತಿಯ ರೈತರು ಹೈನುಗಾರಿಕೆಯ ಮಾಹಿತಿ ಕೊರತೆಯಿಂದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಹಟ್ಟಿ ಮತ್ತು ನಾಗರಹಾಳ ಪಟ್ಟಣದಲ್ಲಿ ಹೊಸದಾಗಿ ಪಶು ಆಸ್ಪತ್ರೆಯನ್ನು ಯಾವಾಗ ಮಂಜೂರು ಮಾಡಲಾಗುವುದು ಹಾಗೂ ಸೂಕ್ತ ಸಿಬ್ಬಂದಿಗಳನ್ನು ಯಾವಾಗ ಒದಗಿಸಲಾಗುವುದು ?

## ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ, ಶ್ರೀಗಂಧಕಾವಲು ಸರ್ವೆ ನಂ. ೭೦/೩ಎ ಜಮೀನಿನ ಮಾಹಿತಿ ಬಗ್ಗೆ

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೫೩ (೯೭೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ, ಶ್ರೀಗಂಧಕಾವಲು ಗ್ರಾಮದ ಸರ್ವೆ

ನಂ.೭೦/೩ಎರ ಜಮೀನಿಗೆ ಎಷ್ಟು ಹಿಸ್ಸಾಗಳಿವೆ ; (ದಾಖಲೆ ಸಹಿತ ಮಾಹಿತಿ ನೀಡುವುದು)

(ಆ) ಅದರಲ್ಲಿ ನಂ.೭೦/೩ಎ೧ರ ಜಮೀನು ಪ್ರಸ್ತುತ ಯಾರ ಹೆಸರಿನಲ್ಲಿ ಖಾತೆಯಾಗಿದೆ ; ಖಾತೆಯಾದ ವರ್ಷ ಮತ್ತು ದಿನಾಂಕ ಹಾಗೂ ಜಮೀನಿನ ವಿಸ್ತೀರ್ಣ ಎಷ್ಟು ; (ಮಾಹಿತಿ ನೀಡುವುದು)

(ಇ) ಸರ್ವೆ ನಂ.೭೦/೩ಎ೨ರ ಜಮೀನು ಪ್ರಸ್ತುತ ಯಾರ ಹೆಸರಿನಲ್ಲಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಪ್ರಸ್ತುತ ಸರ್ವೆ ನಂ.೭೦/೩ಎ೨ರ ಜಮೀನಿನಲ್ಲಿ ಸರ್ವೆ ನಂ. ನಂ.೭೦/೩ಎ೨ ಜಮೀನು ನಿರಾಶ್ರಿತ ಪರಿಹಾರ ಕೇಂದ್ರ, ಮಾಗಡಿ ರಸ್ತೆ., ಬೆಂಗಳೂರು, ಇವರಿಗೆ ಸೇರಿದೆಯೇ ? (ಸಂಪೂರ್ಣ ಮಾಹಿತಿ ನೀಡುವುದು)

## ನಾಗರಹೊಳೆ ರಕ್ಷಿತ ಅರಣ್ಯದ ಸುತ್ತಮುತ್ತಲಿನ ಬುಡಕಟ್ಟು ಹಾಡಿಗಳಿಗೆ ಬಸ್ ವ್ಯವಸ್ಥೆ ಕಲ್ಪಿಸುವ ಬಗ್ಗೆ

**ಶ್ರೀ ಶಾಂತಾರಾಮ್ ಬುಡ್ನ ಸಿದ್ಧಿ (ನಾಮನಿರ್ದೇಶನ ಹೊಂದಿದವರು) :-**

೮೫೪ (೮೮೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನಾಗರಹೊಳೆ ರಕ್ಷಿತ ಅರಣ್ಯದ ಸುತ್ತಮುತ್ತಲಿನ ಮೈಸೂರು ಮತ್ತು ಕೊಡಗು ಜಿಲ್ಲೆಗಳ ಗಿರಿಜನರ ಹಾಡಿಗಳಿಗೆ ಕಳೆದ ೩೫ ವರ್ಷಗಳಿಂದ ಇರುವ ಬಸ್ಸಿನ ಸೌಕರ್ಯವನ್ನು ಶಕ್ತಿ ಯೋಜನೆ ನಂತರ ಸಿಬ್ಬಂದಿಗಳ ಕೊರತೆ, ಬಸ್ಸುಗಳ ಕೊರತೆ ಮುಂತಾದ ಕಾರಣಗಳನ್ನು ನೀಡಿ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಬುಡಕಟ್ಟು ಜನರೇ ಹೆಚ್ಚಿನ ಸಂಖ್ಯೆಯಲ್ಲಿರುವ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ವೀರನಹೊಸಹಳ್ಳಿ, ನಲ್ಲೂರುಪಾಲ, ನಾಗರಹೊಳೆ, ಅಲ್ಲದೆ ಕೊಡಗು ಜಿಲ್ಲೆಯ ಕೊಳಂಗೆರೆ, ನಿಟ್ಟೂರು ಮತ್ತು ಕುಟ್ಟ ಭಾಗದಲ್ಲಿ ರಾಜ್ಯ ರಸ್ತೆಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಸ್ಥಗಿತಗೊಳಿಸಿರುವುದರಿಂದ ಶಾಲಾ ಕಾಲೇಜುಗಳಿಗೆ ಹೋಗುವ ಮಕ್ಕಳಿಗೆ, ಮಹಿಳೆಯರಿಗೆ ಮತ್ತು ಹಿರಿಯ ನಾಗರೀಕರಿಗೆ ತುಂಬಾ ತೊಂದರೆಯಾಗಿದ್ದು, ಮೊದಲಿನಂತೆ ಬಸ್ಸು ಓಡಿಸಲು ಸರ್ಕಾರ ಕ್ರಮ ವಹಿಸುವುದೆ ?

## ಉತ್ತರ ಕನ್ನಡ ಜಿಲ್ಲೆಯ ದೇವಸ್ಥಾನಗಳಿಗೆ ಅನುದಾನ ಬಿಡುಗಡೆ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ಧಿ (ನಾಮನಿರ್ದೇಶನ ಹೊಂದಿದವರು) :-**

೮೫೫ (೯೧೨) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಎಷ್ಟು ದೇವಸ್ಥಾನಗಳಿಗೆ ಕಳೆದ ೨ ವರ್ಷಗಳಲ್ಲಿ ದೇವಸ್ಥಾನಗಳ ಕಟ್ಟಡಗಳ ದುರಸ್ಥಿಗೆ ಅನುದಾನ ನೀಡಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ ಕಳೆದ ೩ ವರ್ಷಗಳಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಅನುದಾನ ಬಿಡುಗಡೆಯಾಗಿರುವ ದೇವಸ್ಥಾನಗಳು ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಈ ಜಿಲ್ಲೆಯ ಹಲವಾರು ದೇವಸ್ಥಾನಗಳ ಆಡಳಿತ ಮಂಡಳಿಯವರು ಹಲವು ವರ್ಷಗಳಿಂದ ಅನುದಾನಕ್ಕಾಗಿ ಬೇಡಿಕೆ ಸಲ್ಲಿಸುತ್ತಿದ್ದು ಹೆಚ್ಚಿನ ಅನುದಾನವನ್ನು ಪ್ರಸ್ತುತ ಸಾಲಿನಲ್ಲಾದರೂ

ಮಂಜೂರು ಮಾಡಲಾಗುವುದೇ ; ಯಾವ ಕಾಲಮಿತಿಯೊಳಗೆ ಅನುದಾನ ಮಂಜೂರು ಮಾಡಲಾಗುವುದು ?

## ಮೀನುಗಾರರ ಸಮಸ್ಯೆ ಮತ್ತು ಪರಿಹಾರಗಳ ಕುರಿತು

**ಶ್ರೀ ಶಾಂತಾರಾಮ್ ಬುಡ್ನಾ ಸಿದ್ದಿ (ನಾಮನಿರ್ದೇಶನ ಹೊಂದಿದವರು) :-**

೮೫೬ (೯೧೩) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮೀನುಗಾರರ ಬೋಟುಗಳು, ಲಾಂಚ್ಗಳು, ನಾಕಾದೋಣಿಗಳು ಹಾಗೂ ಯಾಂತ್ರಿಕ ದೋಣಿಗಳು ಪ್ರಕೃತಿ ವಿಕೋಪಕ್ಕೆ ತುತ್ತಾದಾಗ ಸರ್ಕಾರ ಕೈಗೊಳ್ಳುವ ಕ್ರಮಗಳೇನು ; ಸರ್ಕಾರದಿಂದ ಮೃತ ಕುಟುಂಬಕ್ಕೆ ಎಷ್ಟು ಪರಿಹಾರ ನೀಡಲಾಗುತ್ತದೆ ;

(ಆ) ಸರ್ಕಾರದಿಂದಲೇ ತ್ವರಿತಗತಿಯಲ್ಲಿ ಕುಟುಂಬಕ್ಕೆ ಹೊಸ ಬೋಟ್ ಒದಗಿಸಲು ಅವಕಾಶ ಇದೆಯೇ ; ಇಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು ;

(ಇ) ಮೀನುಗಾರರಿಗಾಗಿ ಸರ್ಕಾರದಿಂದಲೇ ವಿಮೆ ಮಾಡಿರುವ ಯೋಜನೆ ಇದೆಯೇ ?

## ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಕುರಿತು

**ಶ್ರೀ ಶಾಂತಾರಾಮ್ ಬುಡ್ನಾ ಸಿದ್ದಿ (ನಾಮನಿರ್ದೇಶನ ಹೊಂದಿದವರು) :-**

೮೫೭ (೯೧೪) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನಲ್ಲಿ ಬರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳು ಯಾವುವು ;

(ಆ) ಕಳೆದ ೩ ವರ್ಷಗಳಲ್ಲಿ ಖಾನಾಪೂರ ತಾಲ್ಲೂಕು ವ್ಯಾಪ್ತಿಗೆ ಬರುವ ರಸ್ತೆಗಳನ್ನು ವಿವಿಧ ಯೋಜನೆಗಳಡಿ ಎಷ್ಟು ಮೊತ್ತದಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ ; (ವರ್ಷಾವಾರು, ಯೋಜನೆವಾರು ಮಾಹಿತಿ ನೀಡುವುದು)

(ಇ) ಖಾನಾಪೂರ ತಾಲ್ಲೂಕಿನ ಖಾನಾಪೂರದಿಂದ ನಂದಗಡ–ಹಲಸಿ–ನಾಗರಗಾಳಿ ಮಾರ್ಗವಾಗಿ ದಾಂಡೇಲಿಗೆ ತಲುಪುವ ಜಿಲ್ಲಾ ಮುಖ್ಯ ರಸ್ತೆಯು ತಾವರಗಟ್ಟಿ ನಾಖಾದಿಂದ ಬರ್ಚಿವರೆಗಿನ ೦೮ ಕಿ.ಮೀ. ರಸ್ತೆಯು ಸಂಪೂರ್ಣ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಆದ್ಯತೆಯ ಮೇರೆಗೆ ಪ್ರಸ್ತುತ ಈ ರಸ್ತೆ ಸುಧಾರಿಸಲು ಸರ್ಕಾರದ ಕ್ರಮಗಳೇನು ?

## ೩ ಜಿಲ್ಲೆಗಳಲ್ಲಿ ವಾಸಿಸುವ ಧನಗರಗೌಳಿ ಜನಾಂಗದ ಕಂದಾಯ ಗ್ರಾಮಗಳ ಕುರಿತು

**ಶ್ರೀ ಶಾಂತಾರಾಮ್ ಬುಡ್ನಾ ಸಿದ್ದಿ (ನಾಮನಿರ್ದೇಶನ ಹೊಂದಿದವರು) :–**

೮೫೮ (೯೧೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕನ್ನಡ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಧನಗರಗೌಳಿ ಜನಾಂಗದ ಎಷ್ಟು ಗ್ರಾಮಗಳಿವೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಗ್ರಾಮಗಳಲ್ಲಿ ಅರಣ್ಯ ಪ್ರದೇಶಗಳಲ್ಲಿ ಮತ್ತು ಅರಣ್ಯೇತರ ಪ್ರದೇಶಗಳಲ್ಲಿ ಎಷ್ಟು ಗ್ರಾಮಗಳಿವೆ ; ಅಧಿಕೃತ ಮತ್ತು ಅನಧಿಕೃತ ಗ್ರಾಮಗಳ ಪಟ್ಟಿ ನೀಡುವುದು ;

(ಇ) ಸದರಿ ಜಿಲ್ಲೆಗಳಲ್ಲಿ ಇರುವ ಅರಣ್ಯೇತರ ಪ್ರದೇಶಗಳಲ್ಲಿ ವಾಸಿಸುವ ಈ ಜನಾಂಗದವರ ಹಳ್ಳಿಗಳನ್ನು ಕಂದಾಯ ಗ್ರಾಮವನ್ನಾಗಿ ಮಾಡುವ ಮತ್ತು ಹಕ್ಕುಪತ್ರ ನೀಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ ; ಇಲ್ಲಿಯವರೆಗೆ ಎಷ್ಟು ಕುಟುಂಬಗಳಿಗೆ ಹಕ್ಕಪತ್ರಗಳನ್ನು ನೀಡಲಾಗಿದೆ ;

(ಈ) ಸ್ವಾತಂತ್ರ್ಯ ಪೂರ್ವದಿಂದಲೂ ಅರಣ್ಯ ಪ್ರದೇಶಗಳಲ್ಲಿ ಹೈನುಗಾರಿಕೆ ಮೂಲ ಕಸಬನ್ನಾಗಿ ಮಾಡಿಕೊಂಡು ಬದುಕುತ್ತಿರುವ ಇವರ ಹಳ್ಳಿಗಳಿಗೆ ಅನಧಿಕೃತ ಹಳ್ಳಿಗಳೆಂದು ಘೋಷಿಸಿ ಯಾವುದೇ ಮೂಲಭೂತ ಸೌಲಭ್ಯಗಳನ್ನು ಪಡೆಯಲು ಅರಣ್ಯ ಇಲಾಖೆ ಅವಕಾಶ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಪಾರಂಪರಿಕ ಅರಣ್ಯವಾಸಿಗಳಾದ ಇಂತಹ ಹಳ್ಳಿಗಳಿಗೆ ಅರಣ್ಯ ಹಕ್ಕು ಕಾಯ್ದೆ ೨೦೦೬/೨೦೦೮ರಡಿಯಲ್ಲಿ ಕನಿಷ್ಟ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅವಕಾಶ ನೀಡಬಹುದೇ ಹಾಗೂ ಈ ಬಗ್ಗೆ ಸರ್ಕಾರದ ನಿಲುವೇನು ?

## ವಿಜಯಪುರ ಜಿಲ್ಲೆಯಲ್ಲಿ ಖೊಟ್ಟಿ ದಾಖಲೆ ಸೃಷ್ಟಿಸಿ ರೈತರ/ಜನ ಸಾಮಾನ್ಯರ ಮತ್ತು ಸರ್ಕಾರಿ ಜಮೀನು ಕಬಳಿಸುತ್ತಿರುವ ಕುರಿತು

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) :-**

೮೫೯ (೯೬೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ವಿಜಯಪುರ ಜಿಲ್ಲೆಯಲ್ಲಿ ಖೊಟ್ಟಿ ದಾಖಲೆ ಸೃಷ್ಟಿಸಿ ರೈತರ/ಜನ ಸಾಮಾನ್ಯರ ಮತ್ತು ಸರ್ಕಾರಿ ಜಮೀನು ಕಬಳಿಸಿರುವ ಪ್ರಕರಣಗಳ ಸಂಖ್ಯೆ ಎಷ್ಟು ;

(ಆ) ಜಿಲ್ಲೆಯಲ್ಲಿ ನಕಲಿ ಆಧಾರ ಕಾರ್ಡ್, ಪ್ಯಾನ್ ಕಾರ್ಡ್ ಮುಂತಾದ ದಾಖಲೆಗಳನ್ನು ಸೃಷ್ಟಿಸಿ ಜನ ಸಾಮಾನ್ಯರ ಮತ್ತು ಸರ್ಕಾರಿ ಜಮೀನು ಕಬಳಿಸಿರುವುದು/ವರ್ಗಾಯಿಸಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಉಪ ನೋಂದಣಿ ಕಛೇರಿಯಲ್ಲಿ ಮಧ್ಯವರ್ತಿಗಳು, ಸಿಬ್ಬಂದಿ ಮತ್ತು ಅಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದಾರೆಂಬ ವರದಿಗಳು ಬಂದರೂ ಸರ್ಕಾರ ಮೌನವಾಗಿರಲು ಕಾರಣಗಳೇನು ; ಅಂತಹವರುಗಳ ಮೇಲೆ ಇಲ್ಲಿಯವರೆಗೆ ಕಠಿಣ ಕ್ರಮಗಳನ್ನು ಸರ್ಕಾರ ಕೈಗೊಳ್ಳದಿರಲು ಕಾರಣವೇನು ;

(ಈ) ವಿಜಯಪುರ ನಗರ ಸ್ಥಾನ ಮತ್ತು ಇಂಡಿ ಹಾಗೂ ಇನ್ನಿತರ ಸ್ಥಳಗಳಲ್ಲಿ ನಕಲಿ ದಾಖಲೆ ಸೃಷ್ಟಿಸಿ ಭೂಮಿ ಕಬಳಿಸುವ ಕೃತ್ಯವನ್ನು ತಡೆಗಟ್ಟಿ ಅವರ ಮೇಲೆ ಕಾನೂನು ಕ್ರಮ ಕೈಗೊಂಡು ಅಮಾಯಕರ ಮತ್ತು ಸರ್ಕಾರದ ಭೂಮಿ ವಾಪಸ್ಸು ಪಡೆಯಲು ಯಾವ ಕ್ರಮ ಕೈಗೊಳ್ಳಲಾಗುವುದು ?

## ಕಲಬುರಗಿ ಜಿಲ್ಲೆಯ ಶಹಾಬಾದ್ ನಗರದ ೩೪೧ ನಿವೇಶನಗಳು/ ವಸತಿದಾರರಿಗೆ ಮನೆಗಳು ಹಂಚಿಕೆಯಾಗದ ಕುರಿತು

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) :-**

೮೬೦ (೮೫೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಜಿಲ್ಲೆಯ ಶಹಾಬಾದ್ ನಗರದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸಿದ ೩೪೧ ನಿವೇಶನಗಳು/ ಮನೆಗಳನ್ನು ವಸತಿದಾರರಿಗೆ ಈವರೆಗೆ ಹಂಚಿಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ೩೪೧ ಜನರಲ್ಲಿ EWS, LIG ಮತ್ತು MIG ಅಂತ ಬಡವರು/ಕೆಳ ಮಧ್ಯಮ ವರ್ಗದವರಿಗೆ ವಿತರಿಸಲು ಹಣ ವೆಚ್ಚ ಮಾಡಿ ನಿರ್ಮಿಸಿದ ಮನೆಗಳನ್ನು ಹತ್ತು ವರ್ಷದಿಂದ ಹಂಚದಿರುವುದಕ್ಕೆ ಕಾರಣಗಳೇನು ;

(ಇ) ಶಹಾಬಾದ್ ನಗರದ ನಗರಸಭೆ ಅಧಿಕಾರಿಗಳು ನಾಲ್ಕು ಸರ್ವೆ ನಂಬರ್‌ಗಳಲ್ಲಿ ಒಂದು ಸರ್ವೆ ನಂಬರ್ ಮಾತ್ರ ನಮ್ಮ ವ್ಯಾಪ್ತಿಗೆ ಬರುತ್ತಿದ್ದು, ಉಳಿದವು ಬರುವುದಿಲ್ಲವೆಂದು ಬೇಜವಾಬ್ದಾರಿಯಿಂದ ಜನರಿಗೆ ಉತ್ತರಿಸುವುದು ಸರಿಯೇ ;

(ಈ) ಈ ಸಮಸ್ಯೆಗಳನ್ನು ಪರಿಗಣಿಸದೆ ಅವೈಜ್ಞಾನಿಕವಾಗಿ ಮನೆಗಳನ್ನು ನಿರ್ಮಿಸಿದ ಕಲಬುರಗಿ ಕರ್ನಾಟಕ ಗೃಹ ಮಂಡಳಿ, ಈಗ ತನ್ನ ಹೊಣೆಯನ್ನು ಮರೆತು ೩೪೧ ಕುಟುಂಬಗಳಿಗೆ ಇವುಗಳನ್ನು ಹಂಚದೆ ಅತಂತ್ರದಲ್ಲಿರುವುದಕ್ಕೆ ಪರಿಹಾರಗಳೇನು ;

(ಉ) ಈ ವಿಷಯದಲ್ಲಿ ಜಿಲ್ಲಾಡಳಿತ ತನ್ನ ಜವಾಬ್ದಾರಿ ನಿರ್ವಹಿಸದೆ ನಿರ್ಲಿಪ್ತ ಧೋರಣೆ ತಳೆದ ಶಹಾಬಾದ್ ನಗರಸಭೆ ಮತ್ತು ಕಲಬುರಗಿ ಗೃಹ ಮಂಡಳಿ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳದಿರಲು ಕಾರಣಗಳೇನು ?

## ರಾಜ್ಯದಲ್ಲಿ ತಲೆದೂರಿದ ತೀವ್ರ ಬರಗಾಲ ನಿರ್ವಹಣೆಯ ವೈಫಲ್ಯದ ಬಗ್ಗೆ

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :–**

೮೬೧ (೯೩೧) ಮಾನ್ಯ ಕಂದಾಯ ಸಚಿವರು ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ೨೦೨೩-೨೪ನೇ ಸಾಲಿನಲ್ಲಿ ತಲೆದೂರಿದ ತೀವ್ರ ಬರಗಾಲದಿಂದ ಉಂಟಾದ ಹಾನಿಯ ಸಮೀಕ್ಷೆಯನ್ನು ಆಧರಿಸಿ, ಬರ ನಿರ್ವಹಣೆಗೆ ಕೇಂದ್ರ ಸರ್ಕಾರದಿಂದ ನೆರವು ಕೋರಿ ಮನವಿ ಸಲ್ಲಿಸಲಾಗಿದೆಯೇ; ಹಾಗಿದ್ದಲ್ಲಿ, ಈ ಮನವಿಯಲ್ಲಿ ಅಡಕವಾಗಿರುವ ವಿಷಯಗಳೇನು ; (ಪೂರ್ಣ ವಿವರ ನೀಡುವುದು)

(ಆ) ರಾಜ್ಯ ಸರ್ಕಾರ ಸಲ್ಲಿಸಿದ ಮನವಿಯನ್ನು ಆಧಾರಿಸಿ ಕೇಂದ್ರ ಸರ್ಕಾರದ ಅಂತರ ಮಂತ್ರಾಲಯಗಳ ಕೇಂದ್ರ ತಂಡ ಬರ ಅಧ್ಯಯನವನ್ನು ನಡೆಸಿದೆಯೇ ; ಹಾಗಿದ್ದಲ್ಲಿ, ಕೇಂದ್ರ ತಂಡದ ಅಧ್ಯಯನ ವರದಿಯಲ್ಲಿನ ಮುಖ್ಯ ಶಿಫಾರಸ್ಸುಗಳು ಯಾವುವು ; (ಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯ ಸರ್ಕಾರಕ್ಕೆ ಕೇಂದ್ರ ಅಧ್ಯಯನ ತಂಡದ ವರದಿ ಆಧರಿಸಿ, ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ನಿಧಿಯಿಂದ ಬಿಡುಗಡೆಯಾಗಿರುವ ನೆರವು ಎಷ್ಟು ;

(ಈ) ರಾಜ್ಯ ಸರ್ಕಾರ ಕೇಂದ್ರದ ನೆರವನ್ನು ಉಪಯೋಗಿಸಲು ನೀಡಿರುವ ಷರತ್ತು ಮತ್ತು ಮಾರ್ಗ ಸೂಚಿಗಳು ಯಾವುವು ; ರಾಜ್ಯ ಸರ್ಕಾರ ಈ ಷರತ್ತುಗಳನ್ನು ಪಾಲಿಸಿದೆಯೇ ; ಇಲ್ಲದಿದ್ದಲ್ಲಿ, ಕಾರಣಗಳು ಯಾವುವು ; (ಪೂರ್ಣ ವಿವರ ನೀಡುವುದು)

(ಉ) ರಾಜ್ಯ ಸರ್ಕಾರ ಇದುವರೆಗೂ ಬರ ನಿರ್ವಾಹಣೆಗೆ ಖರ್ಚು ಮಾಡಿದ ಅನುದಾನವೆಷ್ಟು ; ಈ ಪೈಕಿ ರೈತರ ಜೀವನೋಪಾಯ ನಷ್ಟ ಪರಿಹಾರವಾಗಿ ನೀಡಿರುವ ಅನುದಾನ ಎಷ್ಟು ಮತ್ತು ಈ ಪರಿಹಾರದಲ್ಲಿ ರಾಜ್ಯ ಸರ್ಕಾರದ ಹೊರೆ ಎಷ್ಟು ; (ಪೂರ್ಣ ವಿವರ ನೀಡುವುದು)

(ಊ) ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಮನವಿಯಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರು ಮತ್ತು ಸಣ್ಣ ಮತ್ತು ಅತಿಸಣ್ಣ ರೈತರಲ್ಲದವರಿಗೆ ಉಂಟಾದ ಬೆಳೆ ಹಾನಿ ಬಗ್ಗೆ ಪರಿಹಾರ ಕೋರಿರುವುದು ನಿಜವೇ ; ಹಾಗಿದ್ದಲ್ಲಿ, ಸಣ್ಣ ಮತ್ತು ಅತಿಸಣ್ಣ ರೈತರಲ್ಲದವರಿಗೆ ಬೆಳೆ ಪರಿಹಾರ ಮತ್ತು ಜೀವನೋಪಾಯ ನಷ್ಟ ಪರಿಹಾರವಾಗಿ ವಿತರಿಸಿರುವ ಮೊತ್ತ ಎಷ್ಟು ? (ಪೂರ್ಣ ಮಾಹಿತಿ ನೀಡುವುದು)

## ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳಾಗಿ ಘೋಷಿಸುವ ಬಗ್ಗೆ

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :-**

೮೬೨ (೯೩೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಘೋಷಿಸಲು ನಿಗದಿಪಡಿಸಿರುವ ಮಾನದಂಡಗಳು ಯಾವುವು ; (ಪೂರ್ಣ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಪ್ರಸ್ತುತದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳು ಯಾವುವು ; (ಹೆದ್ದಾರಿ ಸಂಖ್ಯೆ ಉದ್ದ-ಅಗಲ ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ಮತ್ತು ಸುಧಾರಣೆಯನ್ನು ಕೈಗೊಂಡಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಇಲಾಖಾ ಮತ್ತು ಪ್ರಾಧಿಕಾರಗಳು ಯಾವುವು; ಮತ್ತು ಅವುಗಳ

ಕಾರ್ಯ ವ್ಯಾಪ್ತಿಗಳು ಮತ್ತು ವಾರ್ಷಿಕ ಅಭಿವೃದ್ಧಿ ಮತ್ತು ನಿರ್ವಹಣೆಗೆ ಒದಗಿಸಿರುವ ಅನುದಾನವೆಷ್ಟು ; (ಇಲಾಖೆವಾರು ಮತ್ತು ಪ್ರಾಧಿಕಾರವಾರು ಕಳೆದ ಮೂರು ವರ್ಷಗಳ ಪೂರ್ಣ ಮಾಹಿತಿ ನೀಡುವುದು)

(ಈ) ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಘೋಷಿಸಲು ಈಗಾಗಲೇ ಕಳುಹಿಸಿದ ಪ್ರಸ್ತಾವನೆಗಳು ಯಾವುವು; ಮತ್ತು ಇವುಗಳ ಘೋಷಣೆ ಯಾವ ಹಂತದಲ್ಲಿವೆ; ಮತ್ತು ಇವುಗಳ ತೀರಾವಳಿಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು)

## ಮುಖ್ಯಮಂತ್ರಿಗಳ ಒಂದು ಲಕ್ಷ ಬಹುಮಹಡಿ ವಸತಿ ಯೋಜನೆ ಬಗ್ಗೆ

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :-**

೮೬೩ (೯೩೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಮುಖ್ಯಮಂತ್ರಿಗಳ ಒಂದು ಲಕ್ಷ ಬಹುಮಹಡಿ ವಸತಿ ಯೋಜನೆಯಡಿಯಲ್ಲಿ ಕಳೆದ ೨ ವರ್ಷಗಳಲ್ಲಿ ಆಯ್ಕೆ ಪತ್ರ ನೀಡಲಾದ ಫಲಾನುಭವಿಗಳಿಗೆ ವಸತಿ ಹಂಚಿಕೆ ಮಾಡದಿರುವ ಪ್ರಕರಣಗಳು ಎಷ್ಟು ; ಈ ರೀತಿ ಹಂಚಿಕೆ ಮಾಡದಿರಲು ಕಾರಣಗಳೇನು ; (ಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಯೋಜನೆಯಡಿ ಆಯ್ಕೆ ಪತ್ರ ಪಡೆದ ಫಲಾನುಭವಿಗಳಿಗೆ ವಸತಿ ಹಂಚಿಕೆ ಮಾಡದಿರುವ ಬಗ್ಗೆ ಫಲಾನುಭವಿಗಳಿಂದ ದೂರು

ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ದೂರು ನಿವಾರಣೆಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಯಾವುವು ; (ಪೂರ್ಣ ವಿವರ ನೀಡುವುದು)

(ಇ) ರಾಜ್ಯದಲ್ಲಿ ಮುಖ್ಯಮಂತ್ರಿಗಳ ಒಂದು ಲಕ್ಷ ಬಹುಮಹಡಿ ವಸತಿ ಯೋಜನೆ ಅಡಿಯಲ್ಲಿ ವಸತಿ ನಿರ್ಮಾಣ ಮಾಡಿ ಕಾಮಗಾರಿ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಸಿದ್ಧವಾಗಿರುವ ಯೋಜನೆಗಳಾವುವು ? (ಜಿಲ್ಲಾವಾರು ಮತ್ತು ವರ್ಷವಾರು ಪೂರ್ಣ ವಿವರ ನೀಡುವುದು)

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಎಲೆಕ್ಟ್ರಿಕ್ ಬಸ್ಸುಗಳ ಬಳಕೆ ಬಗ್ಗೆ

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :-**

೮೬೪ (೯೩೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ವಿವಿಧ ಯೋಜನೆಗಳ ಅಡಿಯಲ್ಲಿ ಎಲೆಕ್ಟ್ರಿಕ್ ವಾಹನಗಳ ಬಳಕೆಗೆ ನೀಡುತ್ತಿರುವ ನೆರವು ಮತ್ತು ಬೆಂಬಲಗಳು ಯಾವುವು ; (ಪೂರ್ಣ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಎಲೆಕ್ಟ್ರಿಕ್ ಬಸ್ಸುಗಳನ್ನು ಸಂಚಾರ ವ್ಯವಸ್ಥೆಯಲ್ಲಿ ಬಳಸಲಾಗುತ್ತಿದೆಯೇ ; ಹಾಗಿದ್ದಲ್ಲಿ, ಈ ಸಾರಿಗೆ ಸಂಸ್ಥೆವಾರು ಸಂಚಾರ ವ್ಯವಸ್ಥೆಯಲ್ಲಿ ಇರುವ ಎಲೆಕ್ಟ್ರಿಕ್ ಬಸ್ಸುಗಳು ಯಾವುವು ; (ಪೂರ್ಣ ವಿವರ ನೀಡುವುದು)

(ಇ) ಈ ಎಲೆಕ್ಟ್ರಿಕ್ ಬಸ್ಸುಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯಾವ ಯೋಜನೆಗಳಡಿಯಲ್ಲಿ ಮತ್ತು ಯಾವ ವ್ಯವಸ್ಥೆ ಆಧಾರದಲ್ಲಿ ಪಡೆಯಲಾಗಿದೆ ; (ಪೂರ್ಣ ವಿವರ ನೀಡುವುದು)

(ಈ) ಸಾರಿಗೆ ಸಂಸ್ಥೆಗಳಿಂದ ಎಲ್ಲೆಲ್ಲಿ ಚಾರ್ಜಿಂಗ್ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ; ಮತ್ತು ಈ ಚಾರ್ಜಿಂಗ್ ವ್ಯವಸ್ಥೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ದೊರೆತಿರುವ ಆರ್ಥಿಕ ನೆರವು ಮತ್ತು ಸೌಲಭ್ಯಗಳು ಯಾವುವು ? (ಪೂರ್ಣ ಮಾಹಿತಿ ನೀಡುವುದು)

**ರಾಜ್ಯದಲ್ಲಿ ರಾಷ್ಟ್ರೀಯ ಪಶುಸಂಪತ್ತು ಅಭಿಯಾನ ಅನುಷ್ಠಾನದ ಬಗ್ಗೆ**

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :-**

೮೬೫ (೯೩೫) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆಯಲ್ಲಿ ಕೇಂದ್ರ ಸರ್ಕಾರದ ಪುರಸ್ಕೃತ ಮತ್ತು ಪ್ರಾಯೋಜಿತ ಯೋಜನೆಗಳು ಮತ್ತು ಕಾರ್ಯಕ್ರಮಗಳು ಯಾವುವು ; (ಪೂರ್ಣ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ರಾಷ್ಟ್ರೀಯ ಪಶು ಸಂಪತ್ತು ಅಭಿಯಾನ ಅನುಷ್ಠಾನದ ಬಗ್ಗೆ ಕೇಂದ್ರ ಸರ್ಕಾರ ನೀಡಿರುವ ಮಾರ್ಗಸೂಚಿಗಳು ಯಾವುವು ; (ಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯ ಸರ್ಕಾರಕ್ಕೆ ರಾಷ್ಟ್ರೀಯ ಪಶು ಸಂಪತ್ತು ಅಭಿಯಾನ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದಿಂದ ಕಳೆದ ಮೂರು ವರ್ಷಗಳಿಂದ ದೊರೆತಿರುವ ನೆರವು ಮತ್ತು ಇತರೆ ಸೌಲಭ್ಯಗಳು ಯಾವುವು ? (ಯೋಜನಾವಾರು ಮತ್ತು ವರ್ಷವಾರು ಪೂರ್ಣ ಮಾಹಿತಿ ನೀಡುವುದು)

## ಭೂ ಒತ್ತುವರಿ ಕುರಿತು

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) :-**

೮೬೬ (೮೮೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ಕಡಬಾ ಹೋಬಳಿ, ಬಿರೇಶ್ವರಪುರ ಗ್ರಾಮದ ವ್ಯಾಪ್ತಿಗೆ ಸೇರಿದ ಸರ್ವೆ ನಂ.೯೬ರಲ್ಲಿ ಗೋಮಾಳವನ್ನು ಅಕ್ರಮವಾಗಿ ಸಾಗುವಳಿ ಮಾಡಿರುವವರಿಂದ ತೆರವುಗೊಳಿಸಿ, ಸದರಿ ಗೋಮಾಳವನ್ನು ಶಾಶ್ವತವಾಗಿ ಮೀಸಲಿಡಲು ಕ್ರಮ ವಹಿಸಲಾಗಿದೆಯೇ ;

(ಆ) ಕಳೆದ ಅಧಿವೇಶನದಲ್ಲಿ ಸರ್ಕಾರವು ತೆರವುಗೊಳಸಲಾಗುವುದೆಂದು ಭವಿಷ್ಯ ನೀಡಿದ್ದಲ್ಲಿ ಸದರಿ ಗೋಮಾಳವನ್ನು ಅಕ್ರಮವಾಗಿ ಸಾಗುವಳಿ ಮಾಡುವವರಿಂದ ಇದುವರೆವಿಗೂ ತೆರವುಗೊಳಿಸದಿರಲು ಕಾರಣಗಳೇನು ;

(ಇ) ಈ ಗೋಮಾಳವನ್ನು ಅಕ್ರಮವಾಗಿ ಸಾಗುವಳಿ ಮಾಡಿರುವ/ ಅಕ್ರಮಿಸಿಕೊಂಡಿರುವವರಿಂದ ತೆರವುಗೊಳಿಸಲು ಯಾವ ಕಾಲಮಿತಿಯಲ್ಲಿ ಸರ್ಕಾರ ಕ್ರಮ ವಹಿಸುವುದು ;

(ಈ) ಗೋಮಾಳವನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಭೂಗಳ್ಳರ ವಿರುದ್ಧ ಯಾವುದೇ ಕ್ರಮಕೈಗೊಳ್ಳದ ತಹಶೀಲ್ದಾರ್, ನಾಗಮಂಗಲ ಕಂದಾಯಾಧಿಕಾರಿ/ಕಂದಾಯ ನಿರೀಕ್ಷಕ ಹಾಗೂ ಗ್ರಾಮಾಡಳಿತಾಧಿಕಾರಿಗಳ ವಿರುದ್ಧ ಯಾವ ಕ್ರಮಕೈಗೊಳ್ಳಲಾಗುವುದು ?

## ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಅಕ್ಕಪಕ್ಕದ ವ್ಯಾಪಾರ ಮಳಿಗೆಗಳ ಕುರಿತು

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) :-**

೮೬೭ (೯೨೬) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಜಿಲ್ಲೆ, ಕಡಬ ತಾಲ್ಲೂಕು, ಶ್ರೀ ಕುಕ್ಕೆಸುಬ್ರಹ್ಮಣ್ಯ ದೇವಸ್ಥಾನದ ಅಕ್ಕಪಕ್ಕದಲ್ಲಿ ಹಾಗೂ ಗ್ರಾಮದ ರಸ್ತೆಗಳಲ್ಲಿರುವ ವ್ಯಾಪಾರಿ ಮಳಿಗೆಗಳಿಗೆ ಪರವಾನಗಿಯನ್ನು ನೀಡಲಾಗಿದೆಯೇ ;

(ಆ) ನೀಡಿದ್ದಲ್ಲಿ, ಎಷ್ಟು ಮಳಿಗೆಗಳಿಗೆ ಪರವಾನಗಿ ನೀಡಲಾಗಿದೆ ; ಅನಧಿಕೃತ ಮಳಿಗೆಗಳ ಸಂಖ್ಯೆ ಎಷ್ಟು ;

(ಇ) ಸ್ಥಳೀಯ ಗ್ರಾಮ ಪಂಚಾಯಿತಿ ವತಿಯಿಂದ ನೀಡಲಾಗಿರುವ ಪರವಾನಗಿ ಎಷ್ಟು ; ಮುಜರಾಯಿ ಇಲಾಖೆಯಿಂದ ನೀಡಲಾಗಿರುವ ಪರವಾನಗಿ ಎಷ್ಟು ;

(ಈ) ಅನಧಿಕೃತ ಮಳಿಗೆಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದಲ್ಲಿರುವ ಹೆದ್ದಾರಿ ಟೋಲ್‌ಗಳ ಸಂಖ್ಯೆ ಕುರಿತು

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) :-**

೮೬೮ (೯೨೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಹೆದ್ದಾರಿ ಟೋಲ್‌ಗಳ ಸಂಖ್ಯೆ ಎಷ್ಟು ಹಾಗೂ ಅವುಗಳು ಯಾವುವು ; (ವಿವರ ಒದಗಿಸುವುದು)

(ಆ) ಈ ಟೋಲ್‌ಗಳ ಮೂಲಕ ಸಂಚರಿಸುವ ವಾಹನಗಳ ಟೋಲ್ ದರವನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಇತ್ತೀಚೆಗೆ ಹೆಚ್ಚು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕೇಂದ್ರ ಸರ್ಕಾರವು ರಾಜ್ಯದ ರಸ್ತೆ ಮತ್ತು ಹೆದ್ದಾರಿ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಲ್ಲಿ ವೆಚ್ಚ ಮಾಡಿದ ಮೊತ್ತಕ್ಕಿಂತ ಅಧಿಕ ಪ್ರಮಾಣದಲ್ಲಿ ಟೋಲ್ ದರ ವಸೂಲಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹೆಚ್ಚಿಸಿರುವ ಟೋಲ್ ದರವನ್ನು ಕಡಿಮೆಗೊಳಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಡ ತರಲಾಗುವುದೇ ?

## ರಾಜ್ಯದಲ್ಲಿರುವ 'ಎ', 'ಬಿ' ಮತ್ತು 'ಸಿ' ದೇವಸ್ಥಾನಗಳ ಕುರಿತು

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) :-**

೮೬೬ (೯೨೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ 'ಎ', 'ಬಿ' ಮತ್ತು 'ಸಿ' ದರ್ಜೆಯ ಮುಜರಾಯಿ ದೇವಸ್ಥಾನಗಳ ಸಂಖ್ಯೆ ಎಷ್ಟು ; ಈ ದೇವಸ್ಥಾನಗಳು ಹೊಂದಿರುವ ಚರ ಮತ್ತು ಸ್ಥಿರ ಆಸ್ತಿಗಳೆಷ್ಟು ; ಈ ಚರ ಮತ್ತು ಸ್ಥಿರ ಮೂಲಗಳಿಂದ ಬರುತ್ತಿರುವ ಆದಾಯ ಎಷ್ಟು ; (ದೇವಸ್ಥಾನವಾರು ಮಾಹಿತಿಯನ್ನು ಪ್ರತ್ಯೇಕವಾಗಿ ನೀಡುವುದು)

(ಆ) ಯಾವ ಯಾವ ದೇವಸ್ಥಾನಗಳ ಆಸ್ತಿಗಳನ್ನು ಖಾಸಗಿ ವ್ಯಕ್ತಿ/ ಟ್ರಸ್ಟ್‌ಗಳಿಗೆ ಗುತ್ತಿಗೆ ನೀಡಲಾಗಿದೆ ; ನೀಡಲಾಗಿದ್ದಲ್ಲಿ, ವಿವರಗಳನ್ನು ಒದಗಿಸುವುದು ; ಗುತ್ತಿಗೆ ನೀಡಿಕೆಯಿಂದಾಗಿ ಬರುತ್ತಿರುವ ಆದಾಯ ಎಷ್ಟು ;

(ಇ) ಅವಧಿ ಮುಗಿದರೂ ಗುತ್ತಿಗೆ ಮುಂದುವರೆಸಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು ; ಇದರಿಂದ ಸರ್ಕಾರಕ್ಕೆ ಆದ ನಷ್ಟದ ಪ್ರಮಾಣವೆಷ್ಟು ? (ಸಂಪೂರ್ಣ ವಿವರ ನೀಡುವುದು)

## ಮುಡುಕುತೊರೆ ಶ್ರೀ ಭ್ರಮರಾಂಭ ಸಮೇತ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ದೇವಸ್ಥಾನದ ಜೀರ್ಣೋದ್ಧಾರ ಕುರಿತು

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) :-**

೮೭೦ (೯೩೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಮುಡುಕುತೊರೆ ಶ್ರೀ ಭ್ರಮರಾಂಭ ಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿಗೆ ಮಂಜೂರಾಗಿರುವ ಅನುದಾನ ಎಷ್ಟು ; ಈವರೆಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು ;

(ಆ) ಸದರಿ ಕಾಮಗಾರಿಯನ್ನು ಗುತ್ತಿಗೆ ಪಡೆದಿರುವ ಸಂಸ್ಥೆ ಯಾವುದು ; ಗುತ್ತಿಗೆದಾರರಿಗೆ ನಿಗದಿಪಡಿಸಿರುವ ಕಾಲಾವಧಿ ಎಷ್ಟು ; ಪ್ರಸ್ತುತ ಕಾಮಗಾರಿಯು ಯಾವ ಹಂತದಲ್ಲಿದೆ ; ಈವರೆಗೆ ಕಾಮಗಾರಿಗೆ ವ್ಯಯಿಸಿರುವ ಅನುದಾನ ಎಷ್ಟು ;

(ಇ) ಸರ್ಕಾರ ಜೀರ್ಣೋದ್ಧಾರ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದೆ ;

(ಈ) ಸದರಿ ದೇವಸ್ಥಾನವು ಅಪಾರ ಪ್ರಮಾಣದ ಭಕ್ತ ವೃಂದವನ್ನು ಹೊಂದಿರುವುದರಿಂದ ಅಭಿವೃದ್ಧಿಗೆ ಪೂರಕವಾಗುವಂತೆ ಸರ್ಕಾರವು ಪ್ರಾಧಿಕಾರ ರಚನೆಗೆ ಚಿಂತಿಸಿದೆಯೇ ? (ವಿವರವನ್ನು ಒದಗಿಸುವುದು)

## ರಾಜ್ಯ ವಕ್ಫ್ ಬೋರ್ಡ್ ಹಗರಣದ ಕುರಿತು

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೭೧ (೧೦೦೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ರಾಜ್ಯ ವಕ್ಫ್ ಮಂಡಳಿಗೆ ಸೇರಿದ ಹಣವು ಅಕ್ರಮವಾಗಿ ಬೇರೆ ಬ್ಯಾಂಕ್‌ಗಳಿಗೆ ವರ್ಗಾವಣೆಯಾಗಿರುವುದು ನಿಜವೇ ;

(ಆ) ವರ್ಗಾವಣೆಯಾಗಿದ್ದಲ್ಲಿ, ಇದಕ್ಕೆ ಕಾರಣರಾದ ಹಾಗೂ ಇದರ ಹಿಂದಿರುವ ಅಧಿಕಾರಿಗಳು ವ್ಯಕ್ತಿಗಳ ಬಗ್ಗೆ ಆಂತರಿಕ ತನಿಖೆ ನಡೆಸಲಾಗಿದೆಯೇ ;

(ಇ) ಹಾಗಿದ್ದಲ್ಲಿ, ಆಂತರಿಕ ತನಿಖೆಯ ಸತ್ಯಾಂಶವೇನು ; ಈ ಪ್ರಕಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ ?

## ಮಳೆಯಿಂದ ಹಾನಿಗೊಳಗಾದ ಮನೆಗಳಿಗೆ ಪರಿಹಾರದ ಕುರಿತು

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೭೨ (೧೦೦೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಮಳೆಯಿಂದ ಹಾನಿಗೊಳಗಾದ ಮನೆಗಳಿಗೆ ಯಾವ ಯಾವ ವಸತಿ ನಿಗಮಗಳ ಅಡಿಯಲ್ಲಿ ಪರಿಹಾರ ನೀಡಲು ಅವಕಾಶಗಳಿವೆ ; ಪೂರ್ಣ ಪ್ರಮಾಣದ ಪರಿಹಾರ ಪಡೆಯಲು ನಿಗದಿಪಡಿಸಿರುವ ಮಾನದಂಡಗಳೇನು ;

(ಆ) ಮಳೆ ಪರಿಹಾರ ಪಡೆಯಲು ಫಲಾನುಭವಿಗಳು ಸ್ವ ಇಚ್ಛೆಯಿಂದ ಯಾವುದೇ ವಸತಿ ನಿಗಮವನ್ನು ಆಯ್ಕೆ ಮಾಡಿಕೊಳ್ಳಲು ಸಹ ಅವಕಾಶವಿದೆಯೇ ;

(ಇ) ರಾಜ್ಯದಲ್ಲಿ ೨೦೨೦-೨೧ನೇ ಸಾಲಿನಲ್ಲಿ ಶಿವಮೊಗ್ಗ ಸೇರಿದಂತೆ ಇನ್ನಿತರೆ ಕಡೆಗಳಲ್ಲಿ ಮಳೆ ಪರಿಹಾರ ಸಲುವಾಗಿ ರಾಜೀವ್‌ಗಾಂಧಿ ವಸತಿ ನಿಗಮವನ್ನು ಆಯ್ಕೆ ಮಾಡಿಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು).

(ಈ) ರಾಜೀವ್‌ಗಾಂಧಿ ವಸತಿ ನಿಗಮದಲ್ಲಿ ಮಳೆ ಪರಿಹಾರಕ್ಕೆ ನಿಗದಿಪಡಿಸಿದ ಮೊತ್ತವೆಷ್ಟು ; ಈ ಪೈಕಿ ಅನಧಿಕೃತ ಮಳೆ ಪರಿಹಾರ ಎಂದು ತೀರ್ಮಾನಿಸಿ ಅಥವಾ ಅಧಿಕೃತ ಮಳೆ ಪರಿಹಾರ ಎಂದು ತೀರ್ಮಾನಿಸಿ ಬಿಡುಗಡೆ ಮಾಡಲಾದ ಪರಿಹಾರ ಮೊತ್ತವೆಷ್ಟು ;

(ಉ) ಅಧಿಕೃತ ಪರಿಹಾರ ಕೋರಿ ಎಲ್ಲಾ ಅರ್ಜಿಗಳು ಸಲ್ಲಿಕೆಯಾಗಿದ್ದರೂ ಬಹುತೇಕ ಅರ್ಜಿಗಳನ್ನು ಅನಧಿಕೃತ ಎಂದು ಪರಿಗಣಿಸಲು ಕಾರಣಗಳೇನು ;

(ಊ) ಜಿಲ್ಲಾವಾರು ಸ್ವೀಕೃತಿಯಾದ ಅರ್ಜಿಗಳ ಸಂಖ್ಯೆ ಎಷ್ಟು ; ಈ ಪೈಕಿ ಅನಧಿಕೃತ ಮತ್ತು ಅಧಿಕೃತ ಎಂದು ಪರಿಗಣಿಸಲಾದ ಅರ್ಜಿಗಳ ಸಂಖ್ಯೆ ಎಷ್ಟು ; (೨೦೨೦-೨೧, ೨೦೨೧-೨೨, ೨೦೨೨-೨೩ ಮತ್ತು ೨೦೨೩-೨೪ನೇ ಸಾಲಿನ ವಿವರಗಳನ್ನು ಒದಗಿಸುವುದು)

(ಋ) ನೆರೆ ಪರಿಹಾರ ಕೋರಿ ಸಂಪೂರ್ಣ ದಾಖಲೆಗಳನ್ನು ಸಲ್ಲಿಸಿದ್ದರೂ ಪೂರ್ಣ ಪ್ರಮಾಣದ ಪರಿಹಾರ ಮೊತ್ತ ಪಾವತಿಸದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ಮತ್ತು ಕಾರಣಗಳೇನು ? (ಜಿಲ್ಲಾವಾರು ಮಾಹಿತಿ ನೀಡುವುದು)

## ಲೋಕೋಪಯೋಗಿ ಇಲಾಖೆಯಲ್ಲಿನ ಹೊರಗುತ್ತಿಗೆ ನೌಕರರ ಕುರಿತು

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೭೩ (೧೦೦೫) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿರುವ ವೃತ್ತ, ವಿಭಾಗ, ವಲಯ ಕಛೇರಿಗಳು ಯಾವುವು ;

(ಆ) ಪ್ರತಿಯೊಂದು ವೃತ್ತ, ವಿಭಾಗ, ವಲಯ ಕಛೇರಿಗಳಲ್ಲಿ ಇರುವ ಹೊರಗುತ್ತಿಗೆ ನೌಕರರ ಸಂಖ್ಯೆ ಎಷ್ಟು ; (ಪ್ರವರ್ಗವಾರು, ಲಿಂಗವಾರು ಮತ್ತು ಹುದ್ದೆವಾರು ವಿವರ ನೀಡುವುದು)

(ಇ) ಹೊರಗುತ್ತಿಗೆ ನೌಕರರಿಗೆ ಮಾಹೆಯಾನ ನಿಯಮಿತವಾಗಿ ವೇತನ ನೀಡಲಾಗುತ್ತಿದೆಯೇ ;

(ಈ) ಹೊರಗುತ್ತಿಗೆ ನೌಕರರನ್ನು ನೇಮಿಸಿಕೊಳ್ಳುವುದಕ್ಕೆ ಮಂಜೂರಾತಿ ಹುದ್ದೆ ಅವಶ್ಯಕವೆ ; ಮಂಜೂರಾತಿ ಹುದ್ದೆಗೆ ಎದುರಾಗಿ ನೇಮಿಸಿಕೊಳ್ಳಲು ಇರುವ ಸರ್ಕಾರದ ಸುತ್ತೋಲೆ ಸಂಖ್ಯೆ ಮತ್ತು ದಿನಾಂಕವನ್ನು ತಿಳಿಸುವುದು ;

(ಉ) ಹೊರಗುತ್ತಿಗೆ ನೌಕರರನ್ನು ನೇಮಿಸಿಕೊಳ್ಳುವುದಕ್ಕೆ ಮೀಸಲಾತಿ ನಿಯಮ ಅನ್ವಯಿಸುತ್ತದೆಯೇ ?

## ಕಡತ ವಿಲೇವಾರಿ ವಿಳಂಬವಾಗುತ್ತಿರುವ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೭೪ (೮೭೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಕಡತ ವಿಲೇವಾರಿ ವಿಳಂಬವಾಗುತ್ತಿರುವುದರಿಂದ ಬೇರೆ ಬೇರೆ ಜಿಲ್ಲೆಯಿಂದ ಬರುತ್ತಿರುವ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕಡತಗಳ ವಿಲೇವಾರಿ ವಿಳಂಬವಾಗುತ್ತಿರುವುದು ಕಾರಣವೇನು ? (ಮಾಹಿತಿ ಒದಗಿಸುವುದು)

## ಮುಜರಾಯಿ ದೇವಸ್ಥಾನ ಜೀರ್ಣೋದ್ಧಾರ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೭೫ (೮೭೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆ ವ್ಯಾಪ್ತಿಯಲ್ಲಿ ಎಷ್ಟು ದೇವಸ್ಥಾನಗಳು ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುತ್ತವೆ ; (ವಿವರ ಒದಗಿಸುವುದು)

(ಆ) ಸದರಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಮತ್ತು ಭಕ್ತಾಧಿಗಳ ಅನುಕೂಲಕ್ಕೆ ಸರ್ಕಾರ ಯಾವ ಯಾವ ಯೋಜನೆಗಳನ್ನು ಕೈಗೊಂಡಿದೆ ? (ವಿವರ ಒದಗಿಸುವುದು)

## ಹಂಚಿಕೆಯಾದ ಮನೆಗಳ ವಿವರ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೭೬ (೮೭೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

ಬೀದರ್ ಜಿಲ್ಲೆ ವ್ಯಾಪ್ತಿಯುಲ್ಲಿ ವಸತಿ ನಿಗಮದಿಂದ ಕಳೆದ ೧ ವರ್ಷದಲ್ಲಿ ವಿವಿಧ ನಿಗಮಗಳಿಂದ ಹಂಚಿಕೆಯಾದ ಮನೆಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

## ಅನುಗ್ರಹ ಯೋಜನೆಯಡಿಯಲ್ಲಿ ಕುರಿ ಸಾಕಾಣಿಕೆದಾರರಿಗೆ ಬಿಡುಗಡೆಯಾದ ಪರಿಹಾರದ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೭೭ (೮೭೯) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಅನುಗ್ರಹ ಯೋಜನೆಯಡಿಯಲ್ಲಿ ಕುರಿ ಸಾಕಾಣಿಕೆದಾರರಿಗೆ ಬಿಡುಗಡೆಯಾದ ಪರಿಹಾರವೆಷ್ಟು ;

(ಆ) ಬಿಡುಗಡೆಯಾದ ಪರಿಹಾರದಲ್ಲಿ ಎಷ್ಟು ಕುರಿ ಸಾಕಾಣಿಕೆದಾರರಿಗೆ ಪರಿಹಾರ ಒದಗಿಸಲಾಗಿದೆ ; (ವಿವರ ಒದಗಿಸುವುದು)

(ಇ) ೨೦೨೦-೨೧ ರಿಂದ ೨೦೨೨-೨೩ ಸಾಲಿನ ಅನುಗ್ರಹ ಯೋಜನೆ ಅಡಿಯಲ್ಲಿ ಕುರಿ ಸಾಕಾಣಿಕೆದಾರರಿಗೆ ಪರಿಹಾರ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

## ಹೊಸಕೋಟೆ ತಾಲ್ಲೂಕಿನ ಸರ್ಕಾರಿ ಜಮೀನುಗಳ ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) :-**

೮೭೮ (೮೯೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹೊಸಕೋಟೆ ತಾಲ್ಲೂಕಿನಲ್ಲಿರುವ ಸರ್ಕಾರಿ ಜಮೀನು ಎಷ್ಟು ; (ಗ್ರಾಮವಾರು, ಸರ್ವೆ ನಂಬರ್‌ಗಳವಾರು, ವಿಸ್ತೀರ್ಣವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಕಳೆದ ಒಂದು ವರ್ಷದಲ್ಲಿ ಸರ್ಕಾರಿ ಜಮೀನುಗಳ ಸರ್ವೆ ನಂಬರ್‌ಗಳಲ್ಲಿ ಖಾತೆ ಮಾಡಲಾಗಿರುವ ಸಂಖ್ಯೆಯೆಷ್ಟು ; (ಗ್ರಾಮಗಳವಾರು, ಸರ್ವೆ ನಂಬರ್‌ಗಳವಾರು ಹಾಗೂ ವಿಸ್ತೀರ್ಣಗಳವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಸರ್ಕಾರಿ ಜಮೀನನ್ನು ಖಾತೆ ಮಾಡುವಾಗ ಸರ್ಕಾರ ಅನುಸರಿಸಿರುವ ಮಾನದಂಡಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಸರ್ಕಾರಿ ಜಮೀನುಗಳಿಗೆ ಸಾಗುವಳಿ ಚೀಟಿ ನೀಡಿರುವ ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) :-**

೮೭೭ (೯೯೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹೊಸಕೋಟೆ ತಾಲ್ಲೂಕಿನಲ್ಲಿ ಕಳೆದ ಒಂದು ವರ್ಷದಿಂದ ಸರ್ಕಾರಿ ಜಮೀನುಗಳಿಗೆ ಸಾಗುವಳಿ ಚೀಟಿ ನೀಡಿರುವುದೆಷ್ಟು ; (ಗ್ರಾಮವಾರು, ಸರ್ವೆ ನಂಬರ್‌ಗಳವಾರು, ವಿಸ್ತೀರ್ಣವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಸರ್ಕಾರಿ ಜಮೀನಿಗೆ ಸಾಗುವಳಿ ಚೀಟಿ ವಿತರಣೆ ಮಾಡಲು ಸರ್ಕಾರ ಅನುಸರಿಸಿರುವ ಮಾನದಂಡಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಹೊಸಕೋಟೆ ತಾಲ್ಲೂಕಿಗೆ ಅನುದಾನ ನೀಡುವ ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) :-**

೮೮೦ (೯೯೫) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಒಂದು ವರ್ಷದಲ್ಲಿ ಹೊಸಕೋಟೆ ವಿಧಾನಸಭೆ ಕ್ಷೇತ್ರಕ್ಕೆ ಲೋಕೋಪಯೋಗಿ ಇಲಾಖೆಯಿಂದ ಇದುವರೆವಿಗೂ

ಮಂಜೂರಾಗಿರುವ ಅನುದಾನದ ಮೊತ್ತವೆಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಲೋಕೋಪಯೋಗಿ ಇಲಾಖೆಯಿಂದ ಯಾವ ಯೋಜನೆಯಡಿಯಲ್ಲಿ ಅನುದಾನವನ್ನು ಮಂಜೂರು ಮಾಡಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಲೋಕೋಪಯೋಗಿ ಇಲಾಖೆಯಿಂದ ಮಂಜೂರಾಗಿರುವ ಅನುದಾನದಲ್ಲಿ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಹೊಸಕೋಟೆ ತಾಲ್ಲೂಕಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅನುದಾನ ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) :-**

೮೮೧ (೮೯೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಒಂದು ವರ್ಷದಲ್ಲಿ ಹೊಸಕೋಟೆ ವಿಧಾನಸಭಾ ಕ್ಷೇತ್ರಕ್ಕೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಮಂಜೂರಾಗಿರುವ ಅನುದಾನದ ಮೊತ್ತವೆಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ? (ಗ್ರಾಮಗಳವಾರು ಸಂಪೂರ್ಣ ಮಾಹಿತಿ ನೀಡುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಂದ ಮಹಾನಗರಗಳಿಗೆ ವಲಸೆ ಹೋದ ಕೂಲಿ ಕಾರ್ಮಿಕರ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೮೨ (೯೦೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲ್ಯಾಣ ಕರ್ನಾಟಕ ಜಿಲ್ಲೆಗಳಿಂದ ಮಹಾನಗರಗಳಿಗೆ ವಲಸೆ ಹೋದ ಕೂಲಿ ಕಾರ್ಮಿಕರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಕಳೆದ ೨ ವರ್ಷಗಳಲ್ಲಿ ಎಷ್ಟು ಕಾರ್ಮಿಕರು ಕೂಲಿಗಾಗಿ ವಲಸೆ ಹೋಗಿದ್ದಾರೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ಕೆಲಸದ ಸ್ಥಳದಲ್ಲಿ ಅವಘಡ ಸಂಭವಿಸಿ ಎಷ್ಟು ಕೂಲಿ ಕಾರ್ಮಿಕರು ಮೃತ ಪಟ್ಟಿದ್ದಾರೆ ; (ಮಾಹಿತಿ ನೀಡುವುದು)

(ಈ) ವಲಸೆ ಹೋದ ಕೂಲಿ ಕಾರ್ಮಿಕರು ಮೃತ ಪಟ್ಟಲ್ಲಿ ಸರ್ಕಾರ ಸದರಿಯವರ ಕುಟುಂಬಗಳಿಗೆ ಪರಿಹಾರ ನೀಡಿದೆಯೇ ; ನೀಡಿದ್ದಲ್ಲಿ, ಎಷ್ಟು ಕುಟುಂಬಗಳಿಗೆ ಪರಿಹಾರ ನೀಡಿದೆ ; ಪರಿಹಾರದ ಮೊತ್ತ ಎಷ್ಟು ? (ವಿವರ ನೀಡುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ನಡೆದ ಜನಸ್ಪಂದನಾ ಕಾರ್ಯಕ್ರಮದ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೮೩ (೯೦೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕಳೆದ ೩ ವರ್ಷಗಳಲ್ಲಿ ಜಿಲ್ಲಾಡಳಿತ ನಡೆಸಿದ ಜನಸ್ಪಂದನ/ಜನತಾ ದರ್ಶನ ಅಧಿಕಾರಿಗಳ

ನಡೆ ಹಳ್ಳಿಯ ಕಡೆಯಂತಹ ಕಾರ್ಯಕ್ರಮಗಳಿಗೆ ಖರ್ಚಾದ ಹಣ ಎಷ್ಟು ; (ಕಾರ್ಯಕ್ರಮವಾರು ಮಾಹಿತಿ ನೀಡುವುದು)

(ಆ) ಜನಸ್ಪಂದನ ಕಾರ್ಯ ಕ್ರಮದಲ್ಲಿ ಸಮಸ್ಯೆಯ ಪರಿಹಾರ ಕೋರಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು ; ಯಾವ ಇಲಾಖೆಗೆ ಎಷ್ಟು ಅರ್ಜಿಗಳು ಬಂದಿವೆ ; (ವಿವರ ನೀಡುವುದು)

(ಇ) ಇವುಗಳಲ್ಲಿನ ಇತ್ಯರ್ಥವಾದ ಅರ್ಜಿಗಳ ಸಂಖ್ಯೆ ಎಷ್ಟು ; ಇತ್ಯರ್ಥವಾಗದೆ ಉಳಿದ ಅರ್ಜಿಗಳ ಸಂಖ್ಯೆ ಎಷ್ಟು ; ಇತ್ಯರ್ಥವಾಗದೆ ಬಾಕಿ ಉಳಿಯಲು ಕಾರಣವೇನು ? (ವಿವರ ನೀಡುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳಿಗೆ ಪರಿಹಾರ ನೀಡುವ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೮೪ (೯೦೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸಾಲಬಾದೆ, ಬರ ಪರಿಸ್ಥಿತಿಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಳಿಗೆ ಪರಿಹಾರ ವಿತರಿಸುವಂತೆ ಸಂಘ ಸಂಸ್ಥೆಗಳು ಜಿಲ್ಲಾಧಿಕಾರಿಗಳ ಕಛೇರಿ ಬಳಿ ಪ್ರತಿಭಟನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಮೇಲ್ಕಂಡ ಜಿಲ್ಲೆಗಳಲ್ಲಿ ೨೦೨೧ ರಿಂದ ೨೦೨೪ರ ವರೆಗೆ ರೈತರು ಸಾಲಬಾದೆ, ಬರ ಪರಿಸ್ಥಿತಿಯಿಂದ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳೆಷ್ಟು ; (ಅಂಕಿ-ಅಂಶದ ವಿವರ ನೀಡುವುದು)

(ಇ) ಇವುಗಳಲ್ಲಿ ಎಷ್ಟು ರೈತ ಕುಟುಂಬಗಳಿಗೆ ಪರಿಹಾರ ವಿತರಣೆಯಾಗಿದೆ ; ಇನ್ನು ಎಷ್ಟು ಕುಟುಂಬಗಳಿಗೆ ಪರಿಹಾರ ವಿತರಿಸಬೇಕಾಗಿದೆ ಹಾಗೂ ಯಾವಾಗ ವಿತರಿಸಲಾಗುವುದು ; ಪರಿಹಾರ ವಿಳಂಬಕ್ಕೆ ಕಾರಣಗಳೇನು ? (ವಿವರ ನೀಡುವುದು)

## ಪಶುಸಂಗೋಪನೆ ಹಾಗೂ ಮೀನುಗಾರಿಕೆ ವಿಜ್ಞಾನಗಳ ಸಿಬ್ಬಂದಿಗಳ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :-**

೮೮೫ (೯೪೭) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಪಶುವೈದ್ಯಕೀಯ ಹಾಗೂ ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಅಂಗ ಸಂಸ್ಥೆಯಾದ ಶಿವಮೊಗ್ಗ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಕಳೆದ ೧೪-೧೫ ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ನೌಕರರ ಸಂಖ್ಯೆ ಎಷ್ಟು ; (ಹೆಸರು ಹುದ್ದೆ ಸಹಿತ ಹೊರ ಗುತ್ತಿಗೆ ನೌಕರರನ್ನು ಹೊರತುಪಡಿಸಿ ವಿವರ ನೀಡುವುದು)

(ಆ) ಸದರಿ ನೌಕರರಿಗೆ ವಿಶ್ವವಿದ್ಯಾಲಯವೇ ನೇರ ವೇತನ ಪಾವತಿ ಮಾಡುತ್ತಿದ್ದು, ನೀಡುತ್ತಿರುವ ವೇತನ ಎಷ್ಟು ; ವೇತನ ಹೆಚ್ಚಳವಾದರೂ ಇದುವರೆವಿಗೂ ಹೆಚ್ಚಳವಾದ ವೇತನ ನೀಡದಿರಲು ಕಾರಣವೇನು ; (ಹುದ್ದೆವಾರು ವಿವರ ಹಾಗೂ ಭವಿಷ್ಯ ನಿಧಿ ಮತ್ತು ಇತರ ಕಟಾವುಗಳಿದ್ದಲ್ಲಿ ವಿವರ ನೀಡುವುದು)

(ಇ) ಸದರಿ ಸಂಸ್ಥೆಯಿಂದ ಮೇಲ್ಕಂಡ ನೌಕರರಿಗೆ ಒಪ್ಪಂದದ ಕರಾರು ಪತ್ರ ನೀಡುವಂತೆ ಕೇಳುತ್ತಿರುವುದು ನಿಜವೇ ; ಅದರ

ಉದ್ದೇಶವೇನು ; ಸದರಿ ನೌಕರರು ಆತಂಕದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ನೌಕರರ ಆತಂಕ ನಿವಾರಣೆ ಮಾಡಲು ಯಾವ ಕ್ರಮ ಕೈಗೊಂಡಿದೆ ? (ವಿವರ ನೀಡುವುದು)

## NOC ವಿತರಿಸದಂತೆ ತೆಗೆದುಕೊಂಡ ಕ್ರಮಗಳು

**ಶ್ರೀ ಸಿ.ಪಿ. ಯೋಗೇಶ್ವರ್ (ನಾಮನಿರ್ದೇಶನ ಹೊಂದಿದವರು) :-**

೮೮೬ (೯೦೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತುಮಕೂರು ಜಿಲ್ಲೆ ಪಾವಗಡ ತಾಲೂಕು ವಿರುಪಸಮುದ್ರ ಗ್ರಾಮದ ಸರ್ವೆ ನಂ ೨೩೬/೧, ೨೩೬/೨ ಹಾಗೂ ೨೩೬/೩ ರಲ್ಲಿ ದಿನಾಂಕ: ೨೫.೦೯.೨೦೨೩ರಂದು ದಸ್ತವೇಜು ೩೧೫೭/೨೦೨೩-೨೪ರ ಲೀಸ ಡೀಡ್ ಮಾಡಿರುವುದು ಕಾನೂನು ಬಾಹಿರವಾಗಿದೆಯೆಂದು ಸರ್ಕಾರ ಈ ಹಿಂದೆ ಉತ್ತರ ನೀಡಿದ್ದು ಸದರಿ ಲೀಸ್ ಡೀಡ್‌ಗೆ ವಾಣಿಜ್ಯ ಉದ್ದೇಶಕ್ಕೆ ಮುಂದಿನ ದಿನಗಳಲ್ಲಿ ಎನ್.ಓ.ಸಿ ವಿತರಿಸದಂತೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ; (ವಿವರ ನೀಡುವುದು)

(ಆ) ಸದರಿ ಲೀಸ್ ಡೀಡ್ ಬಗ್ಗೆ ತುಮಕೂರು ಜಿಲ್ಲಾಧಿಕಾರಿಗಳ ಕಛೇರಿ, ಉಪ ವಿಭಾಗಾಧಿಕಾರಿಗಳ ಕಛೇರಿ ಹಾಗೂ ತಾಲ್ಲೂಕು ಕಛೇರಿಗಳಲ್ಲಿ ಬಂದಿರುವ ದೂರುಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ಬಂದಿರುವ ದೂರುಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಸ್ಮಶಾನ ಭೂಮಿ ಜಾಗಕ್ಕೆ ಪರ್ಯಾಯ ಸ್ಥಳ ನೀಡುವ ಕುರಿತು

**ಶ್ರೀ ಸಿ.ಪಿ. ಯೋಗೇಶ್ವರ್ (ನಾಮನಿರ್ದೇಶನ ಹೊಂದಿದವರು) :-**

೮೮೭ (೧೦೦೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಾಗಡಿ ತಾಲ್ಲೂಕಿನ ಹೊಸಪೇಟೆ ಗ್ರಾಮದಲ್ಲಿರುವ ಸರ್ಕಾರಿ ಜಮೀನಿನ ಸ್ಮಶಾನ ಭೂಮಿ ಎಷ್ಟು ; (ಸರ್ವೆ ನಂಬರ್ ಹಾಗೂ ವಿಸ್ತೀರ್ಣದ ವಿವರ ಒದಗಿಸುವುದು)

(ಆ) ಮಾಗಡಿ ಟೌನ್‌ನ ಹೊಸಪೇಟೆ ಗ್ರಾಮದಲ್ಲಿ ವಾಸಿಸುವ ಮೇದರ ಜನಾಂಗಕ್ಕೆ ಸ್ಮಶಾನ ಭೂಮಿಯನ್ನು ನೀಡಲಾಗಿದೆಯೇ ; ನೀಡಿದ್ದಲ್ಲಿ, ಎಷ್ಟು ಎಕರೆ ಭೂಮಿಯನ್ನು ನೀಡಲಾಗಿದೆ ; (ಸರ್ವೆ ನಂಬರ್ ಹಾಗೂ ವಿಸ್ತೀರ್ಣ ವಿವರ ಒದಗಿಸುವುದು)

(ಇ) ಸರ್ಕಾರದಿಂದ ನೀಡಿರುವ ಜಮೀನು ಸ್ಮಶಾನಕ್ಕೆ ಯೋಗ್ಯವಾಗಿಲ್ಲದ ಕಾರಣ ಹಾಗೂ ನೀಡಿರುವ ಸ್ಥಳ ಪೆರಿಪೆರಲ್ ರಿಂಗ್ ರಸ್ತೆ ಹಾದು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ರಿಂಗ್ ರಸ್ತೆ ಹಾದು ಹೋಗುವ ಕಾರಣ ಹೊಸಪೇಟೆಯ ಮೇದರ ಜನಾಂಗದವರಿಗೆ ಪರ್ಯಾಯ ಜಮೀನನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಪರ್ಯಾಯ ಜಮೀನನ್ನು ನೀಡಲಾಗುವುದು ? (ಸಂಪೂರ್ಣ ವಿವರ ಒದಗಿಸುವುದು)

## ಕಂದಾಯ ಗ್ರಾಮ ಮತ್ತು ಗ್ರಾಮ ಆಡಳಿತ ಅಧಿಕಾರಿಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೮೮ (೯೯೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಒಟ್ಟು ಕಂದಾಯ ಗ್ರಾಮಗಳ ಕಂದಾಯ ವೃತ್ತಗಳ ಹೋಬಳಿಗಳ ಸಂಖ್ಯೆ ಎಷ್ಟು ಹಾಗೂ ಈ ಕಂದಾಯ ಗ್ರಾಮಗಳಲ್ಲಿ ಎಷ್ಟು ಗ್ರಾಮಗಳಿಗೆ ಪೂರ್ಣ ಕಾಲಿಕ ಗ್ರಾಮ ಆಡಳಿತ ಅಧಿಕಾರಿಗಳು ಇದ್ದಾರೆ ; (ವಿವರ ನೀಡುವುದು)

(ಆ) ರಾಜ್ಯದಲ್ಲಿ ಇರುವ ಒಟ್ಟು ಗ್ರಾಮ ಆಡಳಿತ ಅಧಿಕಾರಿಗಳ ಕಛೇರಿ ಎಷ್ಟು ಅವು ಯಾವ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ ಗ್ರಾಮ ಆಡಳಿತ ಅಧಿಕಾರಿಗಳ ಕಛೇರಿಯಲ್ಲಿ ಸಾರ್ವಜನಿಕರಿಗೆ ನೇರವಾಗಿ ಲಭ್ಯವಾಗುವ ಸೇವೆಗಳು ಯಾವುವು ಗ್ರಾಮ ಆಡಳಿತ ಕಛೇರಿಗಳು ಸಜ್ಜಿತವಾಗಿ ಇಲ್ಲದ ಕಾರಣ ಅವರು ಸ್ವಲ್ಪ ಹೊತ್ತು ಮಾತ್ರ ಕಂದಾಯ ಗ್ರಾಮೀಣ ಜನರಿಗೆ ಲಭ್ಯವಿದ್ದು ಉಳಿದ ಸಮಯದಲ್ಲಿ ಕಂದಾಯ ನಿರೀಕ್ಷಕರ ಕಛೇರಿ ಅಥವಾ ಉಪ ತಹಶೀಲ್ದಾರ್ ಕಛೇರಿ ತಹಶೀಲ್ದಾರ್ ಕಛೇರಿ ಸಹಾಯಕ ಆಯುಕ್ತರು, ಜಿಲ್ಲಾಧಿಕಾರಿ ಕಛೇರಿ ಎಂದು ಯಾವುದೇ ಮಾಹಿತಿ ಇಲ್ಲದೆ ಹೋಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ;

(ಇ) ಗ್ರಾಮ ಆಡಳಿತಾಧಿಕಾರಿಗಳು ಯಾವ ಯಾವ ಮೊಬೈಲ್ ಆ್ಯಪ್ ಮೂಲಕ ಕೆಲಸಗಳನ್ನು ನಿರ್ವಹಿಸಬೇಕಾಗಿದೆ ಸದ್ಯಕ್ಕಿರುವ ಮಾಹಿತಿಯಂತೆ ಸುಮಾರು ಏಳು ಮೊಬೈಲ್ ಆಧಾರಿತ ಅದನ್ನು ಗ್ರಾಮ ಆಡಳಿತ ಅಧಿಕಾರಿಗಳು ತಮ್ಮ ಸ್ವಂತ ಮೊಬೈಲ್ ಮೂಲಕ

ನಿರ್ವಹಿಸುತ್ತಿದ್ದು ಅವರಿಗೆ ಪ್ರತ್ಯೇಕ ಕಂದಾಯ ಇಲಾಖೆಯಿಂದ ಮೊಬೈಲ್‌ನ್ನು ನೀಡದಿರಲು ಕಾರಣವೇನು ಯಾವಾಗ ನೀಡಲಾಗುವುದು ;

(ಈ) ಕರ್ನಾಟಕ ರಾಜ್ಯದಲ್ಲಿ ಹಲವಾರು ಗ್ರಾಮಗಳು ಮಹಾನಗರ ಪಾಲಿಕೆ, ನಗರ ಪಾಲಿಕೆ, ನಗರಸಭೆ, ಪುರಸಭೆ ಪಟ್ಟಣ ಪಂಚಾಯಿತಿ, ಇತ್ಯಾದಿಗಳಿಗೆ ಸೇರ್ಪಡೆಗೊಂಡಿದ್ದು ಈ ಗ್ರಾಮಗಳಿಗೆ ಪೂರ್ಣಕಾಲಿಕವಾಗಿ ಎಷ್ಟು ಗ್ರಾಮ ಆಡಳಿತ ಅಧಿಕಾರಿಗಳು ಇದ್ದಾರೆ ಹೆಚ್ಚಿನ ಕಡೆ ಪ್ರಭಾರದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ಇದ್ದು ಸಾರ್ವಜನಿಕರ ಕೆಲಸಗಳು ಹಿಂದುಳಿಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? (ವಿವರ ನೀಡುವುದು)

## ಕಂದಾಯ ಇಲಾಖೆ ವಿಷಯಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೮೯ (೯೯೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕಂದಾಯ ಇಲಾಖೆಯ ವಿವಿಧ ಅಧಿಕಾರಿಗಳ ಹಂತದಲ್ಲಿ ಕಂದಾಯ ನ್ಯಾಯಾಲಯಗಳಲ್ಲಿ ಸುಮಾರು ೫೦,೦೦೦ಕ್ಕೂ ಹೆಚ್ಚು ಪ್ರಕರಣಗಳು ಬಾಕಿಯಿದ್ದು ಅವುಗಳನ್ನು ವಿಲೇವಾರಿ ಮಾಡಲು ಸರಕಾರ ಏನು ಕ್ರಮವಹಿಸಿದೆ ವಿವರ ನೀಡುವುದು ;

(ಆ) ಕಂದಾಯ ಅದಾಲತ್, ಗ್ರಾಮ ವಾಸ್ತವ್ಯ, ಜನಸ್ಪಂದನ, ಕಾರ್ಯಕ್ರಮಗಳಲ್ಲಿ ಸಾರ್ವಜನಿಕರಿಂದ ಸ್ವೀಕೃತವಾದ ಅರ್ಜಿಗಳೆಷ್ಟು ವಿವಿಧ ಇಲಾಖೆಗಳ ಅರ್ಜಿಗಳೆಷ್ಟು ಏಕರೂಪದ ಅರ್ಜಿಗಳನ್ನು ಪರಿಶೀಲಿಸಿ ಅವುಗಳನ್ನು ಪರಿಹರಿಸಿದೆಯೇ ವಿವರ ನೀಡುವುದು ;

(ಇ) ಕರಾವಳಿ ಜಿಲ್ಲೆಗಳಲ್ಲಿ ಭೂ ಪರಿವರ್ತನೆ ಮಾಡುವಾಗ ಉದ್ಭವಿಸುವ ಸಮಸ್ಯೆಗಳಾದ ಖಾಸಗಿ ಸಂಪರ್ಕ ರಸ್ತೆ, ರಸ್ತೆ ಅಂಚು. ಸಿಆರ್‌ಝಡ್ ಮತ್ತು ವಿವಿಧ ವಲಯಗಳು, ಆರ್.ಆರ್.ಟಿ.ಸಿ.ಆರ್ ಹೊಂದಾಣಿಕೆಯಿಲ್ಲದ ಪ್ರಕರಣಗಳು, ಮೂಲ ಕಡತ ಇಲ್ಲ ಎಂದು ಭೂಪರಿರ್ತನೆ ತಿರಸ್ಕರಿಸುವುದು, ಭೂ ಪರಿವರ್ತನೆಯನ್ನು ಪಹಣಿಯಲ್ಲಿ ದಾಖಲಿಸದಿರುವುದು,೧-೫ ದರ್ಖಾಸು ಪ್ಲಾಟಿಂಗ್ ಆಗದಿರುವುದು, ಜಾಗ ವಿಭಜನೆಯ ಪೋಡಿ ಆಗದಿರುವುದು, ಭೂ ಪರಿವರ್ತನೆಯಲ್ಲಿ ಅಗತ್ಯ ವಿಧಗಳು ಇಲ್ಲದಿರುವುದು, ಮೂಲಗೇಣಿ ಇತ್ಯಾಧಿ ದೀರ್ಘಾವಧಿ ಸಮಸ್ಯೆಗಳಿದ್ದು ಇವುಗಳನ್ನು ಪರಿಹರಿಸಲು ಸರ್ಕಾರದ ಕ್ರಮಗಳೇನು ; ವಿವರ ನೀಡುವುದು ;

(ಈ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇರುವ ಗೋಮಾಳ ಭೂಮಿಯೆಷ್ಟು ಅದರಲ್ಲಿ ಅತಿಕ್ರಮಣ ಮತ್ತು ಇತರ ಉದ್ದೇಶಕ್ಕೆ ಬಳಸಿದ್ದೆಷ್ಟು ಮತ್ತು ಅದಕ್ಕೆ ಅವಕಾಶವಿದೆಯೇ ಪ್ರಸ್ತುತ ನಿಜವಾಗಿ ಎಷ್ಟು ಜಾಗ ಉಳಿದಿದೆ ವಿವರ ನೀಡುವುದು ;

(ಉ) ಫಾರ್ಮ್ ಹೌಸ್ ಪ್ರಮಾಣವು ಪತ್ರ ಕೇವಲ ತಾತ್ಕಾಲಿಕ ಕೃಷಿ ಸಂಬಂಧಿತ ಚಟುವಟಿಕೆ ನಡೆಸಲು ಮಾತ್ರವಿದ್ದು ಕಟ್ಟಡ ಸಂಖ್ಯೆ ನೀಡಲು ಅವಕಾಶವಿಲ್ಲ ಎಂದಿದ್ದು ಸದರಿ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಬೇಕಾಗಿದ್ದಲ್ಲಿ ಸದರಿ ಕಟ್ಟಡಕ್ಕೆ ನಮೂನೆ ೯ ಮತ್ತು ೧೧ ಅಥವಾ ಕಟ್ಟಡ ಸಂಖ್ಯೆ ಇರುವುದು ಅಗತ್ಯ ಇದ್ದು ಕೃಷಿಕರಿಗೆ ಸಮಸ್ಯೆ ಸೃಷ್ಟಿಸಿರುವುದು ಸರಕಾರ ಗಮನಿಸಿದೆಯೇ ? (ವಿವರ ನೀಡುವುದು)

## ಸಾರಿಗೆ ಸಂಸ್ಥೆ ಡಿಜಿಟಲ್ ಪೇ ವ್ಯವಸ್ಥೆ ಜಾರಿಗೊಳಿಸುವ ಬಗ್ಗೆ

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :-**

೮೯೦ (೯೬೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಮಾದರಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆ.ಎಸ್.ಆರ್.ಟಿ.ಸಿ.) ಸೇರಿದಂತೆ ಎಲ್ಲಾ ಸಾರಿಗೆ ಸಂಸ್ಥೆಗಳ ವ್ಯಾಪ್ತಿಯಲ್ಲಿ ಡಿಜಿಟಲ್ ರೂಪದಲ್ಲಿ ಹಣ ಪಾವತಿಸಿ ಟಿಕೆಟ್ ಪಡೆಯುವ ವ್ಯವಸ್ಥೆ ಜಾರಿಗೊಳಿಸುವ ಕುರಿತು ಸರ್ಕಾರದ ನಿಲುವೇನು ;

(ಆ) 'ಡಿಜಿಟಲ್ ಪೇ' ಜಾರಿಗೊಳಿಸಲು ನಿರ್ಧರಿಸಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ರೂಪುರೇಷೆಗಳೇನು ;

(ಇ) ಈ ವ್ಯವಸ್ಥೆ ಜಾರಿಗೆ ತರಲು ಬೇಕಾದ ಅಂದಾಜು ಅನುದಾನ ಎಷ್ಟು ;

(ಈ) ಎಲೆಕ್ಟ್ರಾನಿಕ್ ಟಿಕೆಟಿಂಗ್ ಯಂತ್ರಗಳನ್ನು (ಇಟಿಎಂ) ಯಾವ ಸಂಸ್ಥೆಯಿಂದ ಖರೀದಿಸಲಾಗುತ್ತಿದೆ ; ಸದರಿ ಯಂತ್ರಗಳನ್ನು ಖರೀದಿಸಲು ಅನುಸರಿಸುವ ಮಾನದಂಡಗಳೇನು ಇದಕ್ಕೆ ಬೇಕಾಗುವ ಅಂದಾಜು ಮೊತ್ತ ಎಷ್ಟು ;

(ಉ) ರಾಜ್ಯದಲ್ಲಿರುವ ನಿರ್ವಾಹಕರು/ ಚಾಲಕರ ಸಂಖ್ಯೆ ಎಷ್ಟು ಈ ಪೈಕಿ ಎಷ್ಟು ಮಂದಿಗೆ ಎಷ್ಟು ಹಂತಗಳಲ್ಲಿ ತರಬೇತಿ ನೀಡಲು ಉದ್ದೇಶಿಸಲಾಗಿದೆ ಇದಕ್ಕೆ ಬೇಕಾಗುವ ಅಂದಾಜು ಮೊತ್ತ ಎಷ್ಟು;

(ಊ) ಕಳೆದ ಮೂರು ವರ್ಷಗಳಲ್ಲಿ ಸಾರಿಗೆ ಬಸ್ಸುಗಳಲ್ಲಿ ಟಿಕೆಟ್ ರಹಿತ ಪ್ರಯಾಣಿಕರಿಗೆ ವಿಧಿಸಿರುವ ದಂಡದ ಮೊತ್ತ ಎಷ್ಟು ; ಎಷ್ಟು ಪ್ರಯಾಣಿಕರಿಗೆ ದಂಡ ವಿಧಿಸಲಾಗಿದೆ ? (ವರ್ಷವಾರು ಮಾಹಿತಿ ನೀಡುವುದು)

**ಕೆ. ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. O 52/400 ಪ್ರತಿಗಳು/19–07–2024